ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

16 ಆಗಸ್ಟ್ 2017 ಪುಟ 16 ರೂ. 15/-

ಲಿಂಗಾಯತ ಸ್ವತಂತ್ರ ಧರ್ಮ


ಲಿಂಗಾಯತ ಭುಗಿಲು ಯಡ್ಡಿಗೆ ದಿಗಿಲು





ಮಾತೆ ಮಹಾದೇವಿ ಯಡ್ಡಿ ಲಿಂಗಾಯತ ಅಲ್ಲ

ಯಲ್ಲಾಪುರ ದಾಡಿಗೆ ಸೆಡ್ಡು ಹೊಡೆಯುವ ಚೆಡ್ಡಿ ಯಾರು?



ಮೇಲುಕೋಟೆ: ಪುಟ್ಟಣ್ಣಯ್ಯ-ಪುಟ್ಟರಾಜು ಜುಗಲ್‌ಬಂದಿ

ಚಿತ್ರದುರ್ಗದ ನೆಮ್ಮದಿಗೆ ಬೆಂಕಿ ಇಡಲಿರುವ ಕೇಸರಿ ಸ್ಕೆಚ್‌ಗಳು!

ಪುರೋಹಿತರ ಕ್ರೌರ್ಯಕ್ಕೆ ಒಳಗಾಗಿರುವ ಲಿಂಗಾಯತ



ಬಸವಣ್ಣನವರು ಕಟ್ಟಿದ ಲಿಂಗವಂತ ಧರ್ಮದಲ್ಲಿ ನುಸುಳಿಕೊಂಡು ಬಂದ ಆಂಧ್ರದ ಆರಾಧ್ಯ ಜಂಗಮರ ಹಾವಳಿಯಿಂದಾಗಿ ಲಿಂಗವಂತರು ಗೊಂದಲದ ಗೂಡಾಗಿದ್ದಾರೆ. ವಿಶ್ವಮಾನ್ಯ ತತ್ವಗಳಾಗಿ ಪ್ರಾಜ್ವಲ್ಯಮಾನ್ಯವಾಗಿ ಬೆಳಗಬೇಕಾಗಿದ್ದ ಲಿಂಗಾಯತ ಮಾರ್ಗ; ಮಠೀಯ ವ್ಯವಸ್ಥೆಯ ಅಡಿಯಲ್ಲಿ ಸಿಕ್ಕು ನಜ್ಜುಗುಜ್ಜಾಗುತ್ತಿದೆ. ಜಂಗಮ ಎಂಬ ಅಕ್ಷರದ ಮೂಲಧಾತುವನ್ನು ಅರಿಯದ ಕರ್ಮಠಗೇಡಿ ಜಂಗಮರಿಂದಲಂತೂ ಬಸವ ಮಾರ್ಗ ಪಥಭ್ರಷ್ಟಗೊಂಡಿದೆ. ನೂರು ವರ್ಷಗಳ ಹಿಂದೆ ಸಂಸ್ಥಾಪಿಸಲ್ಪಟ್ಟ ಹಾನಗಲ್ಲಿನ ಕುಮಾರಸ್ವಾಮಿಗಳ ಕೃಪೆಯಿಂದ ಇದು ಇನ್ನಷ್ಟು ಲೇವಡಿಗೆ ಗುರಿಯಾಗಿದೆ.

1908 ರಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಜಾತಿ ಜಂಗಮರಿಗಾಗಿ ಶಿವಯೋಗ ಮಂದಿರವನ್ನು ಸಂಸ್ಥಾಪಿಸಬೇಕೆಂಬ ಪ್ರಸ್ತಾವನೆಯನ್ನು ಅತ್ಯಂತ ಉಗ್ರವಾಗಿ ಪ್ರತಿಭಟಿಸಿದರು. ಆದರೂ ಅದೇನು ಕಾರಣವೋ ಯಾರ ಒತ್ತಡವೋ ಅಂತೂ 1910 ರಲ್ಲಿ ಶಿವಯೋಗ ಮಂದಿರ ಸ್ಥಾಪಿಸಲ್ಪಟ್ಟಿತು. ಸಕಲ ಜೀವಾತ್ಮರಿಗೆ ಲೇಸ ಬಯಸುವ ತತ್ವಗಳನ್ನು ಬದಿಗೊತ್ತಿ ಬರೀ ಜಾತಿ ಜಂಗಮರಿಗೆ ಮಾತ್ರ ಪ್ರಾಶಸ್ತ್ಯ ಕೊಡುವ ಸಂಸ್ಥೆಯಾಗಿ ಶಿವಯೋಗ ಮಂದಿರ ಕಾರ್ಯಾರಂಭ ಮಾಡುತ್ತ ಬಂತು. ಇದನ್ನು ಸಹಿಸದ ಅಂದಿನ ಲಿಂಗಾಯತ ಸಮಾಜದ ಮುಖಂಡರಲ್ಲೊಬ್ಬರಾದ ಅರಟಾಳ ರುದ್ರಗೌಡರು ಶಿವಯೋಗಮಂದಿರ ಸ್ಥಾಪಿಸಿದ ಎರಡೆ ವರ್ಷಗಳಲ್ಲಿ 1912 ರಲ್ಲಿ ನಿಪ್ಪಾಣಿಯಲ್ಲಿ ಸೇರಿದ್ದ ಅಖಿಲ ಭಾರತ ವೀರಶೈವ ಮಹಾಸಭೆಯ 7 ನೆ ಸಭೆಯಲ್ಲಿಯೆ "ಗಣೇಶನನ್ನು ಮಾಡಲು ಹೊರಟು ಮಂಗನನ್ನು ಮಾಡಿದಂತಾಯಿತು" ಎಂದು ಪಶ್ಚಾತ್ತಾಪದ ಹೇಳಿಕೆಗಳನ್ನು ನೀಡಿದರು.

ಲಿಂಗಾಯತ ಭಕ್ತರನ್ನು ನಂಬಿಸಿ ಅವರಿಂದ ಹಣವನ್ನು ಸಂಗ್ರಹಿಸಿ ಕಟ್ಟಿದ ಸಂಸ್ಥೆ ಎಲ್ಲರೂ ನೋಡನೋಡುತ್ತಿದ್ದಂತೆ ಕಣ್ಣ ಮುಂದೆಯೆ ತನ್ನ ಅಸಲು ಬಣ್ಣವನ್ನು ಬಯಲು ಮಾಡತೊಡಗಿತು. ಇದರಿಂದ ಬಹುತೇಕರು ಅಂದು ಕುಪಿತಗೊಂಡಿದ್ದರೂ ಗುರುವರ್ಗದವರಿಗೆ ಹೇಗೆ ಹೇಳುವುದು ಎಂದು ತೊಳಲಾಟದಲ್ಲಿದ್ದರು ಅಥವಾ ಗುರುಗಳ ಹಿಂದೆ-ಮುಂದೆ ಇರುವ ಪಟಾಲಂಗೂ ಹೆದರಿರುವ ಸಾಧ್ಯತೆ ಇದೆ. ಆದರೆ ಇದ್ದದ್ದನ್ನು ಇದ್ದಂತೆ ಹೇಳುವ ಛಾತಿ ಉಳ್ಳ ಅರಟಾಳ ರುದ್ರಗೌಡರು ಮಾತ್ರ ಸುಮ್ಮನಿರದೆ ನಿಪ್ಪಾಣಿಯ ಬಹಿರಂಗ ಸಭೆಯಲ್ಲಿ "ನಿಮ್ಮ ಘನತೆಯ ಬಗೆಗೆ ನಿಮ್ಮಷ್ಟಕ್ಕೆ ನೀವೆ ಗ್ರಹಿಸಿಕೊಂಡಿರುವ ಮತ್ತು ನಿಮ್ಮಿಂದ ಬಹಳಷ್ಟು ಅಪೇಕ್ಷಿಸುವ ಎಲೈ ಉಚ್ಚ ಮತ್ತು ಬಲಯುತ ಧರ್ಮೋಪದೇಶಕರೆ! ನಿಮ್ಮ ಉನ್ನತ ಸ್ಥಾನಗಳಿಂದ ಇಳಿದು ಬಂದು ಭಕ್ತರಲ್ಲಿ ದಾಸೋಹದ ಭಾವದಿಂದ ಧರ್ಮ ಜಾಗೃತಿ ಮಾಡಿರಿ. ನಮ್ಮಿಂದ ತೆಗೆದುಕೊಂಡಿರುವ ಹಣದಿಂದ ಏನು ಮಾಡುವಿರಿ ಎಂಬುದನ್ನು ವಿವರಿಸಿರಿ. ನಾನು ಗ್ರಹಿಸಿರುವಂತೆ ದೇವ-ಮಾನವರಲ್ಲಿಯ ಸಂಬಂಧವನ್ನು ಸಾಧ್ಯವಾದರೆ ಖಂಡಿಸಿರಿ. ನಿಮಗೆ ಸಾಧ್ಯವಿದ್ದರೆ ನಾನು ಕಲ್ಪಿಸಿದ ಮಾನವನ ಕರ್ತವ್ಯಗಳನ್ನು ನಿಷಿದ್ಧಗೊಳಿಸಿರಿ. ಅಂದರೆ ಮಾತ್ರ ನೀವು ನಿಮ್ಮ ಸ್ಥಾನಮಾನಗಳಿಗೆ ಒಳ್ಳೆಯದನ್ನು ಮಾಡಿದಂತಾಗುವುದು" ಎಂದು ಕುಟುಕಿದರು.

ಲಿಂಗಾಯತ ಧರ್ಮದ ಮೂಲ ತತ್ವಗಳು ಹೇಗಿವೆ? ಎಂಬುದರ ಕುರಿತು ಅಷ್ಟೇ ಸ್ಪಷ್ಟವಾಗಿ "ನನ್ನದು ಸುಲಭ ಧರ್ಮ. ಅದರಲ್ಲಿ ಯಾವುದೇ ಬಗೆಯ ಸಮಾರಂಭಗಳಿಲ್ಲ; ವಿಧಿವಿಧಾನಗಳಿಲ್ಲ; ನಿತ್ಯ ನಿಯಮಗಳಿಲ್ಲ; ಮಂತ್ರತಂತ್ರಗಳಿಲ್ಲ. ನಿಮಗೆ ಇದೆಲ್ಲವೂ ಗೊತ್ತಿರದಿದ್ದರೆ ರೂಢ-ಮೂಢ ಪರಂಪರೆಯ ಒತ್ತಡದಿಂದ ಧರ್ಮವೆಂದು ಬೆಳೆದು ಬಂದ ಅಂಧಶ್ರದ್ಧೆ ಇಲ್ಲವೆ ಭಾವುಕತನದಲ್ಲಿ ನಿಮ್ಮ ಸಮಾಜ ಬಾಂಧವರನ್ನು ಮುಳುಗಿಸಿ ಸ್ವಾರ್ಥಪರಾಯಣರಾಗಿದ್ದರೆ ನಿಮಗೆ ಗೌರವ ಕೊಡಿರೆಂದು ನೀವು ನನ್ನನ್ನು ಎಂತು ಕೇಳುವಿರಿ? ಆ ದೇವ-ದೇವನ ಉದ್ದೇಶವನ್ನೇ ನೀವು ವಿಫಲಗೊಳಿಸಿರುವಿರೆಂದು ಒಪ್ಪಿಕೊಳ್ಳಿರಿ; ಮತ್ತು ನಿಮ್ಮನ್ನು ನೀವೇ ಸುಧಾರಿಸಿಕೊಳ್ಳಿರಿ. ನಿಮ್ಮ ಶ್ರೇಷ್ಠತೆಯ ಬಗೆಗೆ ನಿಮಗಿರುವ ಕಲ್ಪನೆಯೆ ತಪ್ಪು ಎಂದು ಖಚಿತಪಡಿಸಬೇಕೆಂದು ನೀವು ಬಯಸುವಿರಾ ?" ಎಂದು ಅರಟಾಳ ರುದ್ರಗೌಡರು ಜಾತಿ ಜಂಗಮರನ್ನು ಉದ್ದೇಶಿಸಿ ಅಂದು ಆಡಿದ ಮಾತುಗಳು ಗಾಳಿಯಲ್ಲಿ ಗಾಳಿಯಾಗಿ ತೇಲಿಹೋದವು.

ಆದ್ದರಿಂದಲೆ ಇಂದಿನ ದಿನಮಾನಗಳಲ್ಲಿಯೂ ವಂಶಪಾರಂಪರ್ಯವಾಗಿ ಬರುವ ಆಸ್ತಿಯಂತೆ 'ಜಂಗಮ' ಎಂಬ ತತ್ವವು ಜಾತಿಯಾಗಿ ಮಾರ್ಪಟ್ಟು ತಂದೆ-ತಾಯಿಗಳಿಂದ ಮಕ್ಕಳಿಗೆ ಬರುವ ಬಳುವಳಿಯಾಗಿ ಹೋಗಿದೆ. ಬಸವ ಸಂವಿಧಾನದಲ್ಲಿ ಜಂಗಮ ಪದವು ವಿಶಾಲ ಅರ್ಥವನ್ನು ಹೊಂದಿದೆ. ಲಿಂಗಾಯತ ಮಾರ್ಗದ ವಿಚಾರಗಳನ್ನು ಅರಿತು-ಆಚರಿಸಿ ಸಮಾಜದ ಜನಗಳಿಗೆ ಮುಟ್ಟಿಸುವ ಕೈಂಕರ್ಯವನ್ನು ಹೊತ್ತು ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯೆಂದು ತಿರುಗಾಡುವವ ಜಂಗಮ. ಮತ್ತೊಂದು ಅರ್ಥದಲ್ಲಿ ಸಮಾಜವನ್ನು ಜಂಗಮವೆಂದು ಕರೆಯಲಾಗಿದೆ. ಒಟ್ಟಿನಲ್ಲಿ ಜಂಗಮವೆಂದರೆ ಸಾಮಾಜಿಕ ಪ್ರಜ್ಞೆಯ ತುಡಿತ ಹೊಂದಿರುವ ಸ್ವಾರ್ಥಪರವಾದ ಆಲೋಚನೆಗಳಿಲ್ಲದ ಕ್ರಿಯಾಶೀಲವಾದ ವ್ಯಕ್ತಿಯೆಂದಾಗುತ್ತದೆ. ಸ್ವತಃ ಬಸವಣ್ಣನವರು ಕೂಡ ತಮ್ಮ ಒಂದು ವಚನದಲ್ಲಿ ತಮ್ಮನ್ನು ತಾವು ಭಕ್ತರೆಂದು ಕರೆದುಕೊಂಡರೆ ಹೊರತು ಜಂಗಮವೆಂದು ಕರೆದುಕೊಳ್ಳಲಿಲ್ಲ.

"ಬಸವ ಬಾರೈ ಮರ್ತ್ಯಲೋಕದೊಳಗೆ ಭಕ್ತರುಂಟೆ ಹೇಳಯ್ಯಾ
ಮತ್ತಾರೂ ಇಲ್ಲಯ್ಯಾ ಮತ್ತಾರೂ
ಇಲ್ಲಯ್ಯಾ ಮತ್ತಾರೂ ಇಲ್ಲಯ್ಯಾ
ನಾನೊಬ್ಬನೇ ಭಕ್ತ ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ ನೀನೆ ಅಯ್ಯಾ ಕೂಡಲಸಂಗಮದೇವಾ"



ಎಂಬ ವಚನದಲ್ಲಿ ಸಮಾಜದಲ್ಲಿ ಕಾಣುವ ಸಚರಾಚರ ವಸ್ತುಗಳಲ್ಲೆಲ್ಲ ಬಸವಣ್ಣನವರು ಜಂಗಮ ಸ್ವರೂಪಿಯಾಗಿ ಕಾಣುತ್ತಾರೆ. ಅರಿವು ಆಚಾರ ಅನುಭಾವ ಉಳ್ಳ ಯಾವ ವ್ಯಕ್ತಿಯಾದರೂ ಜಂಗಮವಾಗಬಹುದು ಎಂಬುದು ಶರಣರ ನಿಲುವು. ಹಾಗಂತಲೆ ನಟವರ ಜಾತಿಯುವರಾದ ಅಲ್ಲಮಪ್ರಭುವನ್ನು ಜಂಗಮ ಪುಂಗವನೆಂದು ಕರೆದು ಸತ್ಕರಿಸಿ ಅನುಭವ ಮಂಟಪದ ಅಧ್ಯಕ್ಷನನ್ನಾಗಿ ಮಾಡಿದರು. ಜಂಗಮವೆಂಬುದು ತತ್ವವಾಗಿದ್ದರೂ ಅದನ್ನು ಕಡೆಗಣಿಸಿದ್ದರಿಂದ ಅಥವಾ ಆಂಧ್ರದ ಆರಾಧ್ಯ ಜಂಗಮರ ಪ್ರಭಾವದಿಂದ ಬಸವ ಪ್ರಣೀತ ಜಂಗಮ ಬರುಬರುತ್ತ ಜಡವಾಗುತ್ತ ಬಂತು. ಲಿಂಗತತ್ವದ ಪ್ರಜ್ಞೆ ಮರೆತುಹೋಗಿ ಗುಡಿಗುಡಾರಗಳಲ್ಲಿ ಕಾಯಿ ಒಡೆದು, ಕರ್ಪೂರ ಹಚ್ಚಿ ದೀಪ ಬೆಳಗಿಸುವವ ಜಂಗಮನಾದ.

"ಜಂಗಮಕ್ಕೆ ಮಾತಾಪಿತರಿಲ್ಲ,
ಜಂಗಮಕ್ಕೆ ಜಾತಿಬಂಧುಗಳಿಲ್ಲ,
ಜಂಗಮಕ್ಕೆ ನಾಮ ರೂಪಗಳಿಲ್ಲ,
ಜಂಗಮಕ್ಕೆ ಸೀಮೆ ಸಂಬಂಧಗಳಿಲ್ಲ
ಜಂಗಮಕ್ಕೆ ಕುಲಗೋತ್ರಗಳಿಲ್ಲ,
ಜಂಗಮಕ್ಕೆ ಮಲಮಾಯೆಗಳಿಲ್ಲ ನೋಡಾ

ಎಂದೆಲ್ಲ ಸ್ಪಷ್ಟವಾಗಿ ಹೇಳಿದ್ದರೂ ಅದನ್ನೇ ಕರ್ಮಠ ಜಂಗಮರು ಜಂಗಮವೆಂಬುದು ತನಗೆ ಬಳುವಳಿಯಾಗಿ ಬಂದ ... ನೋಡಿಕೊಂಡು ಬಂದರು. ಭಕ್ತನನ್ನು ... ಬೇಡಿ ಬದುಕಿದರು. ಮಾತುಗಳನ್ನು ಕಲಿತು ... ಕೊಂಡರು. ಕೇವ ಕಾಷಾಯಾಂಬರವನಿಕ್ಕಿ ... ರುದ್ರಾಕ್ಷಿಯ ಧರಿಸಿದರು. ಹೊನ್ನು ... ಆವರಿಸಿಕೊಂಡು; ವಸ್ತ್ರ ಒಡವೆ ಹಲ್ಲಣಿಸಿಕೊಂಡು ಬಂದು ಸರ್ವರಿಗೆ ... ಹೇಳುವ ವೇಷಧಾರಿಗಳು ಒಡಲಾಸೆಗೆ ... ಹೊರಗೆ ವೇಶದ ಸೊಂಪು ಒಳಗೆ ... ಮೊಟ್ಟೆಯಾದರು. ಜಗದ ಕರ್ತನ ವೇಷಧರಿ... ಕೊಡುವ ಕಾಣಿಕೆ-ದಕ್ಷಿಣೆಯ ಕಡೆಗೆ ಜೊ... ಹಾಕಿದರು. ಹೆಣ್ಣು ಹೊನ್ನು ಮಣ್ಣು ಇತ್ತರೆ ... ಹರಸಿದರು. ಕೊಡದಿದ್ದರೆ ಶಾಪಿಸಿ ಕೋಪಿಸಿ ... ಜರಿದು ವೇಷ ದಂಬಕರಾದರು. ... ಒಳಗೊಳ್ಳಲಿಲ್ಲ, ಅನುಭಾವ ಮಾಡಲಿಲ್ಲ, ... ಬೆಳೆಸಿಕೊಂಡು ತನ್ನ ಅನ್ನವನ್ನು ತಾನು ಗಳಿಸಿ... ಮೈಗಳ್ಳರು ಜಂಗಮರಾದರು.


ಲಿಂಗಾಯತ ಸ್ವತಂತ್ರ ಧರ್ಮ

ಭಾರತದ ಮೊದಲ ಏಕದೇವೋಪಾಸನೆಯ ಧರ್ಮವಾದ ಲಿಂಗಾಯತ ಧರ್ಮವು 12ನೇ ಶತಮಾನದಲ್ಲಿ ಬಸವಣ್ಣನವರಿಂದ ಸ್ಥಾಪನೆಯಾಯಿತು. ಈ ಧರ್ಮಕ್ಕೆ ಸಮಾಜದ ಎಲ್ಲ ಸ್ತರಗಳಿಂದ ಬಂದ 770 ನಾಯಕರಿದ್ದರು. ಬಸವಣ್ಣನವರು ಅವರನ್ನು ಅಮರಗಣಂಗಳೆಂದು ಕರೆದರು. ಈ ಧರ್ಮವು ಅವೈದಿಕ ಧರ್ಮವಾಗಿದೆ. ಲಿಂಗಾಯತವನ್ನು ಸಿದ್ಧರಾಮೇಶ್ವರರು 'ಬಸವಣ್ಣನ ಧರ್ಮ' ಎಂದು ಕರೆದಿದ್ದಾರೆ. ಶಿವನು ಭರತಖಂಡದ ಮೂಲ ದೇವರಾಗಿರುವುರಿಂದ ಆತ ಅವೈದಿಕ ದೇವರಾಗಿದ್ದಾನೆ. ವೇದಗಳಲ್ಲಿ ಶಿವ ಹೆಸರಿನ ದೇವರೇ ಇಲ್ಲ, ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗವು ಶಿವನ ಕುರುಹು ಆಗಿದೆ. ಲಿಂಗಾಯತ ಧರ್ಮದಲ್ಲಿನ ಶಿವನಿಗೆ ಹೆಂಡಿರುಮಕ್ಕಳಿಲ್ಲ, ಲಿಂಗಾಯತರ ಶಿವ ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾಗಿದ್ದಾನೆ. "ವೇದಕ್ಕೆ ಒರೆಯ ಕಟ್ಟುವೆ... ಆಗಮದ ಮೂಗ ಕೊಯ್ಯುವೆ" ಎಂದು ಬಸವಣ್ಣನವರು ತಿಳಿಸಿದ್ದಾರೆ.

ಲಿಂಗಾಯತರು ವೈದಿಕರ ವೇದವನ್ನು ನಂಬುವುದಿಲ್ಲ, ಭಗವದ್ಗೀತೆಯನ್ನೂ ನಂಬುವುದಿಲ್ಲ. ಭಗವದ್ಗೀತೆಯ ಪ್ರತಿಪಾದಕರನ್ನು ಬಸವಣ್ಣನವರು 'ಮಾಯಾಭ್ರಾಂತಿ ಕವಿದ ಗೀತಜ್ಞರು' ಎಂದು ಕರೆದಿದ್ದಾರೆ.

ಲಿಂಗಾಯತರು ಆಗಮಗಳನ್ನು ನಂಬುವುದಿಲ್ಲ, ವೀರಶೈವ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿಯನ್ನು ನಂಬುವ ಪ್ರಶ್ನೆಯೆ ಇಲ್ಲ, ಏಕೆಂದರೆ ಅದು 15ನೇ ಶತಮಾನದ ಗ್ರಂಥ ಎಂಬುದು ಸಿದ್ಧವಾಗಿದೆ.

33 ಕೋಟಿ ದೇವತೆಗಳನ್ನು ಒಳಗೊಂಡ ಬಹುದೇವೋಪಾಸನೆಯ ವೈದಿಕ ಧರ್ಮ ಲಿಂಗಭೇದ, ಜಾತಿಭೇದ ಮತ್ತು ಅಸ್ಪೃಶ್ಯತೆಯ ಮೇಲೆ ನಿಂತಿದೆ. ವೀರಶೈವವು ಆಚಾರ್ಯರು ಮತ್ತು ಭಕ್ತ ವರ್ಗಗಳ ಮೇಲೆ ನಿಂತಿದೆ. ಲಿಂಗಾಯತ ಧರ್ಮದಲ್ಲಿ ಎಲ್ಲರೂ ಸಮಾನರಾಗಿದ್ದಾರೆ. ವೀರಶೈವರಿಗೆ ಆಚಾರ್ಯರೇ ಗುರುಗಳು ಮತ್ತು ಸ್ವಾಮಿಗಳು. ಲಿಂಗಾಯತವು 'ಅರಿವೆ ಗುರು' ಮತ್ತು 'ಶಾಶ್ವತನಾದ



ದೇವರೇ ಸ್ವಾಮಿ' ಎಂಬುದನ್ನು ನಂಬಿದೆ.

ವೇದೋಕ್ತ ವೈದಿಕ ಧರ್ಮವಾದರೆ ಆಗಮೋಕ್ತ ವೀರಶೈವವಾಗಿದೆ. ಆದರೆ ಲಿಂಗಾಯತವು ವಚನೋಕ್ತವಾಗಿದೆ. ಹೀಗಾಗಿ ಲಿಂಗಾಯತ ಧರ್ಮವು ಸದಾ ಸಂಕಷ್ಟಗಳಿಗೆ ಸಿಲುಕಿದ ಧರ್ಮವಾಗಿದೆ.

"ಲಿಂಗಾಯತ ಧರ್ಮವು, ಅನಂತವಾದ ಹಿಂದೂ ಧರ್ಮಸಾಗರದ ಮಧ್ಯೆ ನಡುಗಡ್ಡೆಯ ಹಾಗೆ ಇದೆ. ಸಾಗರದ ತೆರೆಗಳು ಅದರ ಗಟ್ಟಿಯಾದ ಅಡಿಪಾಯವನ್ನು ಸಡಿಲಿಸುವ ಹಾಗೆ ಕಾಣುತ್ತದೆ" ಎಂದು ಎಡ್ಗರ್ ಥರ್ಸ್ಟನ್ ಅವರು 1909ರಲ್ಲಿ ಪ್ರಕಟವಾದ ತಮ್ಮ ಕಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಇಂಡಿಯಾದ 4ನೇ ಸಂಪುಟದಲ್ಲಿ ತಿಳಿಸಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರಿದರೆ 108 ವರ್ಷಗಳ ಹಿಂದೆ ಅವರು ನುಡಿದ ಭವಿಷ್ಯ ನಿಜವಾಗುವುದರಲ್ಲಿ ಸಂದೇಹವಿಲ್ಲ, ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವನ್ನಾಗಿಸುವುದರ ಮೂಲಕ ಮಾತ್ರ ಈ ಅನಾಹುತವನ್ನು ತಪ್ಪಿಸಲಿಕ್ಕೆ ಸಾಧ್ಯವಿದೆ. ಬ್ರಿಟಿಷ್ ಆಡಳಿತದಲ್ಲಿ ನಡೆದ ಜನಗಣತಿಗಳಲ್ಲಿ ಲಿಂಗಾಯತ ಪದವನ್ನೇ ಬಳಸಲಾಗಿದೆ ಎಂಬುದು ಗಮನಾರ್ಹವಾಗಿದೆ.

ಲಿಂಗಾಯತರು ವೇದ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ ಎಂಬ ಕಾರಣದಿಂದಲೇ 12ನೇ ಶತಮಾನದಲ್ಲಿ ಸಮಗಾರ ಹರಳಯ್ಯನವರ ಮಗ ಮತ್ತು ಬ್ರಾಹ್ಮಣ ಮೂಲದ ಮಧುವರಸರ ಮಗಳ ಮದುವೆಯನ್ನು ವಿರೋಧಿಸುವ ನೆಪದಲ್ಲಿ ವೈದಿಕರು ಬಿಜ್ಜಳ ರಾಜನ ಮೇಲೆ ಒತ್ತಡ ತಂದರು. ಇಂಥ ವಿಲೋಮ ವಿವಾಹಗಳು ವೈದಿಕ ಧರ್ಮಬಾಹಿರ ಎಂದು ಸಾರಿದರು. ವೈದಿಕರ ಶಾಸ್ತ್ರಗಳು ಹೇಳಿದಂತೆ ಬಿಜ್ಜಳನ ಶಸ್ತ್ರಗಳು ಕೇಳಿದವು. ಅನೇಕ ಶರಣರ ಕೊಲೆಗಳಾದವು. ಲಕ್ಷಾಂತರ ಶರಣರು ಎಲ್ಲವನ್ನೂ ಕಳೆದುಕೊಂಡು ದಿಕ್ಕಾಪಾಲಾಗಿ ಹೋದರು. ಒಂದಿಷ್ಟು ಶರಣರು ಅಳಿದುಳಿದ ವಚನಗಳ ರಕ್ಷಣೆಗಾಗಿ ಉಳವಿಯ ಕಡೆಗೆ ಧಾವಿಸಿದರು.

ಇದಾದನಂತರ ಲಿಂಗಾಯತವನ್ನು ವೀರಶೈವವಾಗಿ ಪರಿವರ್ತಿಸಿ ವೈದಿಕ ಧರ್ಮದ ಒಂದು ಭಾಗ ಮಾಡುವುದಕ್ಕಾಗಿ 15ನೇ ಶತಮಾನದಿಂದ ನಿರಂತರ ಪ್ರಯತ್ನಗಳು ಪ್ರಾರಂಭವಾಗಿದ್ದು ಇಂದಿಗೂ ಮುಂದುವರಿದಿವೆ. ಪಟ್ಟಭದ್ರರು ಅನೇಕ ಪ್ರಕ್ಷಿಪ್ತ ವಚನಗಳನ್ನು ಸೇರಿಸಿದ್ದಾರೆ. ಅನೇಕ ವಚನಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದಿದ್ದಾರೆ. ಲಿಂಗಾಯತ ಇದ್ದಲ್ಲಿ ಅದನ್ನು ತೆಗೆದು ವೀರಶೈವ ಮಾಡಿದ್ದಾರೆ.


ಬ್ರಿಟಿಷ್ ಆಡಳಿತದಲ್ಲಿ 1879ರ ನ್ಯಾಯಾಲಯ ತೀರ್ಪಿನ ಪ್ರಕಾರ (Supreme Court & H.C. Judgments & Definition of Hinduism: Gopal Narhar Safray v. ... Ganesh Safray (1879) I.L.R. ... 273) ಶೂದ್ರರಿಗೆ ಅನ್ವಯಿಸುವ ಹಿಂದೂ ... ಲಿಂಗಾಯತರಿಗೆ ಅನ್ವಯಿಸಲಾಯಿತು. ಈ ... ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಹಳೆ... ಲಿಂಗಾಯತರರು ಲಿಂಗೀಬ್ರಾಹ್ಮಣರಾಗ... ಕಾಣತೊಡಗಿದರು. ವಿರಕ್ತ ಮಠಗಳಲ್ಲಿ ... ಪಾಠಶಾಲೆಗಳನ್ನು ಪ್ರಾರಂಭಿಸಲಾಯಿತು ... ಲಿಂಗಾಯತಕ್ಕೆ ಸಮಾನಾರ್ಥದಲ್ಲಿ ವೀ... ಬಳಕೆಯಾಗತೊಡಗಿತು.

ಆದರೆ ವೈದಿಕ ಮತ್ತು ಆಗಮಿಕ ... ವಿರುದ್ಧವಾದ ಕಾಯಕ ಸಿದ್ಧಾಂತದ ಲಿಂಗಾಯ... ಜಾತಿಸಂಕರವಾದ ಧರ್ಮವಾಗಿದೆ. ಜಗ... ಬೇಕಾದರೂ ಈ ಧರ್ಮದ ಅನುಯಾಯಿಗ... "ಜೈನಧರ್ಮ ಮತ್ತು ಬೌದ್ಧಧರ್ಮಗಳು ಖಂ... ಹಿಂದೂ ಅಥವಾ ವೈದಿಕ ಧರ್ಮಗಳಲ್ಲ" ಎ... ಮೊದಲ ಪ್ರಧಾನಿಯಾಗಿದ್ದ ಜವಾಹರಲಾ... ಅವರು 'ಎಸ್ಸೆ ಆನ್ ಹಿಂದೂ ರಿಲಿಜನ್'ನ... ಈ ಎರಡೂ ಧರ್ಮಗಳು ವೇದ ಪ್ರಾಮಾಣ... ಸವರ್ಣೀಯರ ಜಾತಿ ಮತ್ತು ವರ್ಣಗಳ ಮೇ... ಒಪ್ಪದೆ ಇರುವುದರಿಂದ ಇವುಗಳನ್ನು ಸಂವಿಧಾ... ಧರ್ಮಗಳೆಂದು ಪರಿಗಣಿಸಲಾಗಿದೆ. ಇದೇ ... ಸಿಖ್ ಧರ್ಮವನ್ನು ಕೂಡ ಸ್ವತಂತ್ರ ... ಸಾರಲಾಗಿದೆ.

ಜೈನ, ಬೌದ್ಧ ಮತ್ತು ಸಿಖ್ ಧರ್ಮ... ಲಿಂಗಾಯತ ಧರ್ಮ ಕೂಡ ವೈದಿಕ ಧರ್ಮ... ಅಸ್ಪೃಶ್ಯತೆ ಮುಂತಾದ ಅನಿಷ್ಟ ಪದ್ಧತಿಗಳನ್ನು ... ವೈದಿಕ ವಿರೋಧಿ ಚಳವಳಿಯನ್ನೇ ... ಹಿನ್ನೆಲೆಯುಳ್ಳದ್ದಾಗಿದೆ.

■ ರಂಜಾನ್

ಗುಜರಾತ್ ಚುನಾವಣೆ ಮತ್ತು ಡಿಕೆಶಿ ಮೇಲೆ ದಾಳಿ




ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಮೌಕೆ ಮುದ್ರಣಕ್ಕೆ ...ಗಲು ಸಜ್ಜಾಗುತ್ತಿರುವ ...ಯದಲ್ಲೇ ಇಂಧನ ಸಚಿವ ...ವಕುಮಾರ್ ಮೇಲೆ ಕೇಂದ್ರ ...ರದ ಆದಾಯ ತೆರಿಗೆ ...ಯ ಅಧಿಕಾರಿಗಳು ದಾಳಿ ...ದ್ದಾರೆ. ಈ ದಾಳಿ ನಡೆದಿರುವ ...ಯ ಮತ್ತು ಸಂದರ್ಭಗಳ ...ನರೇಂದ್ರ ಮೋದಿ ಮತ್ತು ...ತ್ ಶಾ ಜೋಡಿಯ ಕಿರಾತಕ ... ಎದ್ದು ಕಾಣಿಸುತ್ತದೆ. ...ಗೂ ಗೊತ್ತಿರುವಂತೆ ಕಳೆದ ... ದಿನಗಳಿಂದ ಶಿವಕುಮಾರ್ ನೇತೃತ್ವದಡಿ ...ತಿನ 40ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ...ಳೂರಿನ ಹೊರವಲಯದಲ್ಲಿ ಆಶ್ರಯ ...ದಿದ್ದರು. ಆ ಶಾಸಕರಿಗೂ, ಗುಜರಾತಿನಲ್ಲಿ ಇನ್ನು ...ವೇ ದಿನಗಳಲ್ಲಿ ನಡೆಯಲಿರುವ ರಾಜ್ಯ ಸಭಾ ...ವಣೆಗಳಿಗೂ, ಶಿವಕುಮಾರ್ ಮೇಲೆ ನಡೆದಿರುವ ...ಗೂ ನೇರಾನೇರ ಸಂಬಂಧವಿದೆ.


ಸಕ್ರಮವಾಗಿಯೋ, ಅಕ್ರಮವಾಗಿಯೋ ಅಧಿಕಾರ ...ಯಲು ಸದಾ ಚುನಾವಣಾ ಸಮರದ ...ಯಲ್ಲಿರುವ ಮೋದಿ-ಶಾ ಜೋಡಿ ಇತ್ತೀಚೆಗೆ ...ವಾರು ಕಡೆ ಅಧಿಕಾರವನ್ನು ಕಬಳಿಸಿದೆ. ಮೋದಿ ...ನಿಯಾದ ನಂತರ ಆತನಿಗೆ ಮುಖಭಂಗ ಆಗಿದ್ದು ...ಲಿ ಮತ್ತು ಬಿಹಾರದ ವಿಧಾನಸಭಾ ...ವಣೆಗಳಲ್ಲಿ, ಇಂತಹ ಅವಮಾನವನ್ನು ಸಹಿಸದ ...ದಿ-ಶಾ ದೆಹಲಿಯ ಆಪ್ ಮುಖ್ಯಮಂತ್ರಿ ...ವಿಂದ್ ಕೇಜ್ರಿವಾಲರಿಗೆ ದಿನನಿತ್ಯ ಕಿರುಕುಳ ...ಡುತ್ತಿದ್ದಾರಲ್ಲದೆ ಇತ್ತೀಚೆಗೆ ಬಿಹಾರದಲ್ಲಿ ...ಮಹಾಘಟಬಂಧನ್‌ಅನ್ನೇ ಒಡೆದು ಅಧಿಕಾರದಲ್ಲಿ ...ಲು ಪಡೆದರು. ಹಾಗೆಯೇ ಗೋವಾ ಮತ್ತು ...ಣಿಪುರ ರಾಜ್ಯಗಳಲ್ಲೂ ಬಿಜೆಪಿಗೆ ಕಾಂಗ್ರೆಸ್‌ಗಿಂತ





...ಮೆ ಶಾಸಕ ಸ್ಥಾನಗಳು ಸಿಕ್ಕಿದ್ದರೂ ಅಧಿಕಾರ ...ಡಿಯುವಲ್ಲಿ ಯಶಸ್ವಿಯಾಗಿದ್ದರು. ಮುಂದಿನ ...ನಾವಣೆಗಳು ಮಾತ್ರವಲ್ಲ, ಅಲ್ಲಿಯತನಕ ...ದುರಾಗುವ ಎಲ್ಲಾ ಚುನಾವಣೆಗಳನ್ನು ಕಬ್ಜಾ ...ಮಾಡಿಕೊಳ್ಳಬೇಕೆಂಬ ಹುನ್ನಾರ ಮೋದಿ-ಶಾ ಎಂಬ ...ಟಕ-ದಮನಕ ಜೋಡಿಯದ್ದು.

...ರಾಧಿಕಾ ರಾಮಸೇಶನ್ ಅವರು ಎಕನಾಮಿಕ್ ...ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ಬರೆದಿರುವಂತೆ ...ಮವಾಗಿ ಅಧಿಕಾರ ಪಡೆಯುವುದು ಬಿಜೆಪಿಗೆ ...ಹೊಸದಲ್ಲ. ಇದು ಮೊದಲು ಪ್ರಾರಂಭವಾಗಿದ್ದು ಉತ್ತರ ಪ್ರದೇಶದಲ್ಲಿ. 1998ರಲ್ಲಿ ಉತ್ತರಪ್ರದೇಶದ ಬಿಜೆಪಿಯ ನಾಯಕನಾಗಿದ್ದ ರಾಜನಾಥ್ ಸಿಂಗ್ 'ಆಪರೇಷನ್ ಶಕ್ತಿ' ಎಂಬ ಯೋಜನೆಯನ್ನು ರೂಪಿಸಿ, ಆ ರಾಜ್ಯದ ಕಾಂಗ್ರೆಸ್ ಮತ್ತು ಬಿಎಸ್‌ಪಿಯಲ್ಲಿ ಒಡಕುಗಳನ್ನು ಮೂಡಿಸಿ ಕಲ್ಯಾಣ್ ಸಿಂಗ್ ಎಂಬಾತನನ್ನು ಮುಖ್ಯಮಂತ್ರಿಯಾಗಿ ಕೂರಿಸುವಲ್ಲಿ ಯಶಸ್ವಿಯಾಗಿದ್ದ. ಹಾಗೆಯೇ ಕರ್ನಾಟಕದಲ್ಲೂ ಬಳ್ಳಾರಿ ರೆಡ್ಡಿಗಳ ಗಣಿ ಕಬಳಿಕೆ ದುಡ್ಡನ್ನು ಉಪಯೋಗಿಸಿ 'ಆಪರೇಶನ್ ಕಮಲ' ಆರಂಭಿಸಿದ ಚೆಡ್ಡಿ ಯಡ್ಡಿ ಮಾಡಿದ ಅವಾಂತರಗಳನ್ನು ರಾಜ್ಯದ ಜನ ಇನ್ನೂ ಮರೆತಿಲ್ಲ. ಆಪರೇಷನ್ ಕಮಲ ತರಹದ್ದೇ ಪ್ರಯೋಗ ಇದೀಗ ಗುಜರಾತ್ ರಾಜ್ಯಸಭಾ ಚುನಾವಣೆಗಳ ಮೇಲೆ ನಡೆಯುತ್ತಿದೆ. ಅದರ ಗುರಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿಯವರ ರಾಜಕೀಯ ಕಾರ್ಯದರ್ಶಿ ಅಹಮದ್ ಪಟೇಲ್.



ಈ ಅಹಮದ್ ಪಟೇಲ್ ಬಗ್ಗೆ ಸೇಡು ಭಾವನೆಯ ಮೋದಿ-ಶಾಗೆ ಅಪಾರ ಕೋಪವಿರುವುದು ಬಹಿರಂಗ ಸತ್ಯ. ಯಾಕೆಂದರೆ ಅವರ ಪ್ರಕಾರ 2002ರ ಕೋಮು ಗಲಭೆಗೆ ಸಂಬಂಧಿಸಿದಂತೆ ಇವತ್ತಿಗೂ ಹಲವು ನ್ಯಾಯಾಲಯಗಳಲ್ಲಿ ವಿಚಾರಣೆಗಳು ನಡೆಯುತ್ತಿರುವುದು, ಸೊಹ್ರಾಬುದ್ದೀನ್ ಶೇಖ್, ಕೌಸರ್ ಬಿ, ತುಲಸಿರಾಮ್ ಪ್ರಜಾಪತಿ ಮತ್ತು ಇಶ್ರತ್ ಜಹಾನ್ ಅವರುಗಳ ನಕಲಿ ಎನ್‌ಕೌಂಟರ್‌ಗಳಿಗೆ ಸಂಬಂಧಿಸಿದಂತೆ ಶಾ ಜೈಲುಪಾಲಾಗಿದ್ದು ಮತ್ತು ಆರು ತಿಂಗಳ ಕಾಲ ಗುಜರಾತಿನಿಂದ ಹೊರಗಿರುವಂತೆ ನೋಡಿಕೊಂಡಿದ್ದು ಅಹಮದ್ ಪಟೇಲ್. ಆದ್ದರಿಂದ ಆತನನ್ನು ರಾಜಕೀಯವಾಗಿ ಮುಗಿಸಲು ಈಗ ಹೊರಟಿದ್ದಾರೆ.

ಜೊತೆಗೆ ಇತರೆ ಹಲವಾರು ಕಾರಣಗಳೂ ಇವೆ. ಕಳೆದ ಹಲವು ದಶಕಗಳಿಂದ ಗುಜರಾತ್‌ನಲ್ಲಿ ಕಾಂಗ್ರೆಸ್ ಪಕ್ಷ ಸೋಲುತ್ತಾ ಬಂದಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಅದಕ್ಕಿರುವ ಬೆಂಬಲದಲ್ಲಿ ಏನೂ ಕುಸಿತವಾಗಿಲ್ಲ. ಉದಾಹರಣೆಗೆ 2015ರಲ್ಲಿ ನಡೆದ ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿಗಿಂತ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಪಡೆದಿತ್ತು. ಇದೇ ವರ್ಷ ಗುಜರಾತಿನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು ಅಲ್ಲೀಗ ಅಂತಹ ಮೋದಿ ಹವಾ ಇಲ್ಲ. ಮೋದಿಗೆ ಈಗ ದೆಹಲಿಯಿಂದ ರಿಮೋಟ್ ಕಂಟ್ರೋಲ್ ಮೂಲಕ ಪ್ರಭಾವ ಬೀರುವುದು ಅಷ್ಟು ಸುಲಭವಲ್ಲ. ಅಷ್ಟೇ ಮುಖ್ಯವಾಗಿ ಆ ರಾಜ್ಯದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಬಲಿಷ್ಠರಾಗಿರುವ ಮತ್ತು ಕಳೆದ ಮೂರು ದಶಕಗಳಿಂದ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದಿರುವ ಪಟೇಲ್ ಸಮುದಾಯ ಈಗ ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದು ಬಿಜೆಪಿಯ ವಿರುದ್ಧ ತಿರುಗಿ ಬಿದ್ದಿದೆ. ಊನಾ ಸೇರಿದಂತೆ ಇತರೆಡೆ ನಡೆದಿರುವ ದಮನಗಳಿಂದಾಗಿ ಅಲ್ಲಿನ ದಲಿತರೂ ಸಿಡಿದೆದ್ದಿದ್ದಾರೆ. ವ್ಯಾಪಾರಸ್ಥರೇ ಹೆಚ್ಚಿನ ಸಂಖ್ಯೆಯಲ್ಲಿರುವ ಗುಜರಾತಿಗಳು ದೇಶದ ಇತರೆಡೆಗಿಂತ ದೊಡ್ಡ ಸಂಖ್ಯೆಯಲ್ಲಿ ಜಿಎಸ್‌ಟಿ ವಿರುದ್ಧ ದನಿ ಎತ್ತಿದ್ದಾರೆ. ಈ ಎಲ್ಲಾ ಅಡೆತಡೆಗಳ ನಡುವೆಯೂ ಗುಜರಾತ್ ಕಾಂಗ್ರೆಸ್ ಮೇಲೆ ಹಿಡಿತ ಹೊಂದಿರುವ ಅಹಮದ್ ಪಟೇಲನನ್ನು ಸೋಲಿಸಿದರೆ 'ಕಾಂಗ್ರೆಸ್ ಮುಕ್ತ ಭಾರತ' ಸಾಧ್ಯವಾಗುವತ್ತ ದಾಪುಗಾಲು ಇಟ್ಟಂತೆ ಎಂಬುದು ಮೋದಿ-ಶಾ ಲೆಕ್ಕಾಚಾರ.

ಸದ್ಯ ಗುಜರಾತಿನಿಂದ ಮೂರು ರಾಜ್ಯಸಭಾ ಸ್ಥಾನಗಳು ಖಾಲಿ ಇವೆ. 182 ಸದಸ್ಯರು ಇರಬಹುದಾದ ಗುಜರಾತಿನ ವಿಧಾನಸಭೆಯಲ್ಲೀಗ ಇರುವುದು 176 ಶಾಸಕರು ಮಾತ್ರ. ಅವರುಗಳಲ್ಲಿ 121 ಜನ ಬಿಜೆಪಿ ಶಾಸಕರು. ಕಾಂಗ್ರೆಸ್ ಈ ಹಿಂದೆ 59 ಶಾಸಕರನ್ನು ಹೊಂದಿದ್ದರೂ ಇತ್ತೀಚೆಗೆ ಕೆಲವರು ಪಕ್ಷವನ್ನು ಬಿಟ್ಟುಹೋಗಿದ್ದರಿಂದ ಅವರ ಸಂಖ್ಯೆ ಈಗ 49ಕ್ಕೆ ಕುಸಿದಿದೆ.

ರಾಜ್ಯಸಭಾ ಪ್ರವೇಶಿಸಲು ಪ್ರತಿ ಅಭ್ಯರ್ಥಿಗೆ 45 ಮತಗಳು ಬೀಳಬೇಕು. ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ಶಕ್ತಿಯನ್ನು ಹೊಂದಿರುವ ಬಿಜೆಪಿ ಅಮಿತ್ ಶಾ ಮತ್ತು ಸ್ಮೃತಿ ಇರಾನಿಯನ್ನು ಕಣಕ್ಕಿಳಿಸಿದೆ. ಪಕ್ಷೇತರರು ಸೇರಿದಂತೆ ಬಿಜೆಪಿ ಬಳಿ 35 ಅಧಿಕ ಮತಗಳಿದ್ದರೂ ಅದು ಕಾಂಗ್ರೆಸ್‌ನ ಪ್ರಮುಖ ನಾಯಕನಾದ ಅಹಮದ್ ಪಟೇಲನನ್ನು ಸೋಲಿಸುವ ಸಾಹಸಕ್ಕೆ ಕೈಹಾಕಲಾರದು ಎಂದೇ ಹಲವರು ಅಂದಾಜಿಸಿದ್ದರು. ಆದರೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಗೆ ಹತ್ತಿರದವನಾದ ಅಹಮದ್ ಪಟೇಲನನ್ನು ಸೋಲಿಸಿದರೆ ಅದು ಕಾಂಗ್ರೆಸ್ ಪಕ್ಷದ ಆತ್ಮಸ್ಥೈರ್ಯವನ್ನೇ ಕುಗ್ಗಿಸುತ್ತದೆ ಎಂದೇ ಲೆಕ್ಕ ಹಾಕಿದ ಮೋದಿ-ಶಾ ಜೋಡಿ ಈಗ ಅಂತಹ ಸಾಹಸಕ್ಕೆ ಮುಂದಾಗಿದೆ. ಆ ನಿಟ್ಟಿನಲ್ಲೇ ಇತ್ತೀಚೆಗೆ ಶಂಕರ್‌ಸಿಂಗ್ ವಘೇಲಾ ಮತ್ತು ಆತನ ಹಲವು ಬೆಂಬಲಿಗರು ಕಾಂಗ್ರೆಸ್ ತೊರೆಯುವಂತೆ ಮೋದಿ-ಶಾ ನೋಡಿಕೊಂಡರು. ಮಾತ್ರವಲ್ಲ, ಜುಲೈ ತಿಂಗಳ ತನಕ ಅಪ್ಪಟ ಕಾಂಗ್ರೆಸ್ಸಿಗನಾಗಿದ್ದ, ಆ ಪಕ್ಷಕ್ಕೆ ಆರ್ಥಿಕವಾಗಿ ನೆರವು ನೀಡುತ್ತಿದ್ದ ಮತ್ತು ಅಹಮದ್ ಪಟೇಲನ ನೆಚ್ಚಿನ ಶಿಷ್ಯನಾಗಿದ್ದ ಬಲವಂತ್‌ಸಿಂಗ್ ರಜಪುತ್ ಎಂಬ ಉದ್ಯಮಿಯನ್ನು ಅಹಮದ್ ಪಟೇಲ್‌ನನ್ನು ಸೋಲಿಸಲೆಂದೇ ಮೋದಿ-ಶಾ ಅಖಾಡಕ್ಕಿಳಿಸಿದ್ದಾರೆ. ವಘೇಲಾನ ಸಂಬಂಧಿಯೂ ಆದ ಬಲವಂತ್‌ಸಿಂಗ್ ರಜಪುತ್ ಗೆದ್ದು, ಅಹಮದ್ ಪಟೇಲ್ ಸೋಲಬೇಕೆಂದರೆ ಬಿಜೆಪಿಗೆ ಇನ್ನು ಹತ್ತು ಮತಗಳು ಬೇಕು. ವಘೇಲಾ ಜೊತೆ ಆರು ಶಾಸಕರು ರಾಜೀನಾಮೆ ಕೊಟ್ಟಿದ್ದು ಮತ್ತು ಇತ್ತೀಚೆಗೆ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ 11 ಕಾಂಗ್ರೆಸ್ ಶಾಸಕರು ವಿರೋಧ ಪಕ್ಷಗಳ ಆಯ್ಕೆಯಾಗಿದ್ದ ಮೀರಾ ಕುಮಾರ್ ಅವರಿಗೆ ತಮ್ಮ ಮತಗಳನ್ನು ಹಾಕದೆ, ಅದನ್ನು ಬಿಜೆಪಿಯ ರಾಮನಾಥ್ ಕೋವಿಂದ್ ಪರ ಚಲಾಯಿಸಿದ್ದು ಮತ್ತು ಪಕ್ಷಾಂತರ ಮಾಡಿದರೆ ಪ್ರತಿ ಶಾಸಕನಿಗೆ ಇಪ್ಪತ್ತು ಕೋಟಿ ರೂಪಾಯಿಗಳನ್ನು ಕೊಡಲು ಬಿಜೆಪಿ ಮುಂದಾದದ್ದು... ಇವೆಲ್ಲ ಸಹಜವಾಗಿಯೇ ಕಾಂಗ್ರೆಸ್ ಪಕ್ಷದಲ್ಲಿ ನಡುಕ ಹುಟ್ಟಿಸಿತ್ತು.

ಆದ್ದರಿಂದಲೇ ಕಾಂಗ್ರೆಸ್ ತನ್ನ ಎಲ್ಲಾ ಶಾಸಕರನ್ನು ಬೆಂಗಳೂರಿಗೆ ಕಳುಹಿಸಿದ್ದು ಮತ್ತು ಶಿವಕುಮಾರ್ ಅವರಿಗೆ ಅವರ ಜವಾಬ್ದಾರಿಯನ್ನು ವಹಿಸಿದ್ದು. ಇದರಿಂದ ಕೆಂಡಾಮಂಡಲವಾದ ಮೋದಿ-ಶಾ ಇವತ್ತು ಶಿವಕುಮಾರ್ ವಿರುದ್ಧ ಐಟಿ ಅಧಿಕಾರಿಗಳನ್ನು ಛೂಬಿಟ್ಟಿದ್ದಾರೆ. ಈ ಹಿಂದೆಯೂ ಯಾರು ತನ್ನ ವಿರುದ್ಧ ಗಟ್ಟಿಯಾಗಿ ನಿಂತಿದ್ದಾರೋ ಅವರ ವಿರುದ್ಧವೂ ಮೋದಿ-ಶಾ ಐಟಿ ಅಧಿಕಾರಿಗಳನ್ನೋ ಅಥವಾ ಸಿಬಿಐನ ಗುಲಾಮರನ್ನೋ ಛೂಬಿಟ್ಟು ತನ್ನ ಹಗೆತನವನ್ನು ಹಲವು ಬಾರಿ ಬಹಿರಂಗಪಡಿಸಿದ್ದುಂಟು.

ಇವತ್ತು ಸಂಸತ್ತಿನಲ್ಲಿ ಕೇಂದ್ರ ಮಂತ್ರಿ ಅರುಣ್ ಜೈಟ್ಲಿ "ಗುಜರಾತಿನ ಚುನಾವಣೆಗೂ ಬೆಂಗಳೂರಿನಲ್ಲಿ ನಡೆದಿರುವ ಐಟಿ ದಾಳಿಗೂ ಸಂಬಂಧ ಇಲ್ಲ" ಎಂದಿರುವುದು ಬರೀ ಬೊಗಳೆ. ಹಿರಿಯ ಪತ್ರಕರ್ತ ರಾಜದೀಪ್ ಸರ್ದೇಸಾಯಿ ಇವತ್ತು ಬೆಳಗ್ಗೆ ಟ್ವೀಟ್ ಮಾಡಿದಂತೆ "ಸಾಮ, ದಾನ, ಬೇಧ, ದಂಡ... ಇದುವೇ 'ಹೊಸ' ಭಾರತ ಮೇರಿ ಜಾನ್".

(ಇಲ್ಲಿರುವ ಹೆಚ್ಚಿನ ಮಾಹಿತಿ ರಾಧಿಕಾ ರಾಮಸೇಶನ್ ಅವರ ಲೇಖನವನ್ನು ಆಧರಿಸಿದೆ)

ಸದಾ ಏ ದರ್ದ್




ದ್ವೇಷ ಬೇಗೆಯಲಿ ದಹಿಸುತಿರುವೆ
ಬರಿದಾಗಿದೆ ಬದುಕುವಾಸೆಯಿಲ್ಲಿ
ಮುಳುಗಿಸಿಬಿಡು ಓ ಗಂಗಾ ನದಿಯೆ
ಆ ನಿನ್ನ ಉಕ್ಕುಬ್ಬ ತರಂಗಗಳಲ್ಲಿ
ರಣರಂಗವಾಗಿಹುದು
ನನ್ನ 'ಭೂಮಿಯಲ್ಲಿ
ಅದೆಂತಹ ಬಾಂಧವ್ಯ!
ವಿರಹ ಬಂದು ಕುಳಿತಿಹುದು
ಹೃದಯಂಗಳದಲ್ಲಿ!
ಪ್ರೀತಿಯೇ ಸಿಡಿದೆದ್ದಿಹುದು
ದ್ವೇಷಕೆ ಎದುರಾಗಿ

ಒಂದೇ ಹೊಲದೊಳಗೆ
ಫಸಲುಗಳೇ ಕಾದಾಡುತಿಹುದು
ಸ್ನೇಹ ತಂಗಾಳಿ ಬೀಸಲಿಲ್ಲವೆಂದೂ
ಆ ಹೂದೋಟದಲ್ಲಿ
ಮೈನಾ ಹಕ್ಕಿಯ ಹಾಡೂ
ಕೇಳಿಬರುವುದೆಂತೂ ಈ ನಾಡಿನಲ್ಲಿ
ಸನಿಹ ಸುಖದಿ ಮಿಂದೇಳುವವನು
ನನ್ನೊಳಗೆ ಕಳೆದು ಹೋಗುತಿಹೆನು
ಭೋರ್ಗರೆವ ಅಲೆಗಳೊಳಗೆ
ಕಳೆದುಹೋಗುತಿರುವ ಕಿನಾರೆಯಲಿ
ಭಯಭೀತನಾಗಿಹೆನು
ಕವಿ ಹೃದಯವರಳುವುದು
ಫಸಲುದಿಸುವಂತೆ ಹೊಲದಲ್ಲಿ
ಕಳೆದುಹೋಗುತಿದೆ ನೆಲವು
ಫಸಲೊಡೆಯುವ ತಾಣವೆಲ್ಲಿ

ಮುಕ್ತ ಸೌಂದರ್ಯದ ರತಿಯ ಕೇಳುವವರಾರು
ಮಿಲನ ಕಾತರದ ಮನ್ಮಥನೆ ಇರದಲ್ಲಿ
ಎಷ್ಟು ಬೆಳಗಿದರೇನು ಈ ದೀಪ
ಸಂಭ್ರಮಿಸುವ ಜನರಿಲ್ಲದ ಊರಿನಲ್ಲಿ
ಮಾತುಗಳೆಲ್ಲವೂ ಮೌನವಾಗಿ
ಬದಲಾಗುತ್ತಿಲ್ಲವೇಕೆ
ಈ ಹೆಮ್ಮೆಯೊಂದು ಕನ್ನಡಿಯೊಳಗಿಂದ
ಮರೆಯಾಗುವುದಿಲ್ಲವೇಕೆ?
ಅದೋ! ದಗ್ಧವಾಗುತಿದೆ ಹೂದೋಟಗಳು
ರಣರಂಗದ ಬೆಂಕಿಯಲ್ಲಿ
ಕವಿತೆಗಳು ಭಸ್ಮವಾಗುತಿವೆ
ಕವಿಯ ಹೃದಯದಲ್ಲಿ!

ಉರ್ದು ಮೂಲ: ಅಲ್ಲಾಮಾ ಇಕ್ಬಾಲ್
ಅನುವಾದ: ಪುನೀತ್ ಅಪ್ಪು

ಯಲ್ಲಾಪುರ: ದಾಡಿ ಹೆಬ್ಬಾರ್‌ಗೆ ಸೆಡ್ಡು ಹೊಡೆವ ಚೆಡ್ಡಿ ಯಾರ


ಶಿವರಾಮ ಹೆಬ್ಬಾರ್

ಯಲ್ಲಾಪುರ-ಮುಂಡಗೋಡದ ಶಾಸಕ ಕಾಂಗ್ರೆಸ್‌ನ ದಾಡಿ ಹೆಬ್ಬಾರ್ ಯಾನೆ ಶಿವರಾಮ ಹೆಬ್ಬಾರ್ ಮತ್ತೊಂದು ಕೈನೋಡುವ ಉಮೇದಿಯಲ್ಲಿದ್ದಾನೆ. ಕ್ಷೇತ್ರದಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಗಿರಿಗಿಟ್ಲೆ ಹೊಡೆಯುತ್ತಿರುವ ಈ ವೈದಿಕಶಾಹಿ ಗುಣಧರ್ಮದ ಹೆಬ್ಬಾರ್ ಮೈ-ಮುಖಕ್ಕೆ ಬಳ್ಳಾರಿ ಅದಿರಿನ ಧೂಳು ಮೆತ್ತಿಕೊಂಡಿದೆ. ಅದಿರು ಅವ್ಯವಹಾರದಲ್ಲಿ ಮಗನನ್ನು ಜೈಲು ಪಾಲು ಮಾಡಿದ ಕೀರ್ತಿಯೂ ಈತನ ಕಿರೀಟದಲ್ಲಿದೆ. ಬ್ರಾಹ್ಮಣರಿಗೂ ಮೀಸಲಾತಿ ಬೇಕೆಂದು ಬೊಬ್ಬಿರಿಯುತ್ತ ಸ್ವ-ಜಾತಿ ಹೈಗರನ್ನು ಬುಟ್ಟಿಯಲ್ಲಿಟ್ಟುಕೊಳ್ಳಲು ತಿಣುಕಾಡುತ್ತಿರುವ ಈತ ಮ್ಯಾಗಿ ಗ್ಯಾಂಗಿನ ಸೇನಾನಿ ಅರ್ಥಾತ್ ಉತ್ತರ ಕನ್ನಡದ ಪೊಲಿಟಿಕಲ್ ಡಾನ್ ದೇಶಪಾಂಡೆ ವೈರಿ ಪಡೆಯ ಮುಖ್ಯಸ್ಥ! ಹವ್ಯಕರು ಹೆಚ್ಚಿರುವ ಯಲ್ಲಾಪುರ-ಮುಂಡಗೋಡ ಕ್ಷೇತ್ರದಲ್ಲಿ ಬಿಜೆಪಿಯ ಜನಿವಾರ ರಾಜಕಾರಣಕ್ಕೆ ತಕ್ಕ ಸೆಡ್ಡು ಹೊಡೆವ ಕಲಿ ಕಾಂಗ್ರೆಸಲ್ಲಿ ಇದ್ದಾನೆಂದರೆ, ಅದು ಮಜ್ಜಿಗೆ ತಂಬಿ ಹೆಬ್ಬಾರ್ ಭಾವ ಒಬ್ಬನೇ!!

ಶಾಸಕನಾಗಿ ಹೆಬ್ಬಾರ್ ಹೇಳಿಕೊಳ್ಳುವಂಥ ಕೆಲಸ-ಕಾಮಗಾರಿಯೇನೂ ಮಾಡದಿದ್ದರೂ ಯಲ್ಲಾಪುರ ಮತ್ತು ಮುಂಡಗೋಡ ಎಂಬ ಸಂಬಂಧ ಎರಡು ತಾಲ್ಲೂಕು ಮತ್ತು ಶಿರಸಿಯ ಬನವಾಸಿ ಸೀಮೆಯನ್ನು ಒಳಗೊಂಡ ಅಸೆಂಬ್ಲಿ ಕ್ಷೇತ್ರದಲ್ಲಿ ಬೇರು-ಬಿಳಲು ಭರ್ಜರಿಯಾಗಿ ಇಳಿಸಿರುವ ತಂತ್ರಗಾರ-ಹಣವಂತ ಪಕ್ಕಾ ಪುಢಾರಿಯಾಗಿ ರೂಪುಗೊಂಡಿರುವುದು ಸುಳ್ಳಲ್ಲ. ಇಂಥ ಪ್ರಚಂಡ ಹೆಬ್ಬಾರ್ ಮುಂದೊಂದು ದಿನ ತನ್ನ ದಾರಿಗೆ ಮುಳ್ಳಾಗುತ್ತಾನೆಂಬ ದೂರಾಲೋಚನೆಯಿಂದ ದೇಶಪಾಂಡೆ ಸಾಹೇಬ ಆತನಿಗೆ ಕಾಂಗ್ರೆಸ್ ಟಿಕೆಟ್ ಕಟ್ ಮಾಡುವ ಮಸಲತ್ತು ಜೋರಾಗೇ ನಡೆಸಿದ್ದಾನೆ. ಆದರೆ ಕಾಂಗ್ರೆಸ್ ನಡೆಸಿರುವ ಒಂದು ಆಂತರಿಕ ಸರ್ವೆಯಲ್ಲಿ ಸದ್ರಿ ಹೆಬ್ಬಾರ್ ಗೆಲ್ಲುವ ಸಂಪನ್ಮೂಲ, ಜನಸಂಪರ್ಕ ಇರುವಾತ ಎಂಬುದು ದಾಖಲಾಗಿದೆ. ಜತೆಗೆ ಮ್ಯಾಗಿ ಕೋಟಾದಲ್ಲಿ ಈತ ಇರುವುದರಿಂದ ಕಾಂಗ್ರೆಸ್ ಅಭ್ಯರ್ಥಿ ಪಕ್ಕಾ ಆಗಿದೆ. ಎಲೆಕ್ಷನ್ ತಯಾರಿಯೂ ಹೆಬ್ಬಾರ್ ವ್ಯವಸ್ಥಿತವಾಗೇ ಶುರು ಹಚ್ಚಿಕೊಂಡಿದ್ದಾನೆ.

ಈ ಕ್ಷೇತ್ರದಲ್ಲಿ ಮರಾಠರೂ ಗಣನೀಯ ಸಂಖ್ಯೆಯಲ್ಲಿದ್ದಾರೆ. ಆ ಜಾತಿಯ ಎಲ್.ಟಿ. ಪಾಟೀಲ ಎಂಬ ರಸಿಕ ಶಿಖಾಮಣಿಯನ್ನು ದೇಶಪಾಂಡೆ ಎತ್ತಿಕಟ್ಟಿ ಬಿಟ್ಟಿದ್ದಾನೆ. ಜಿಲ್ಲಾ ಪಂಚಾಯ್ತಿ ಸದಸ್ಯನಾಗಿರುವ ಈ ಪಾಟೀಲ್ ಕಳೆದ ಬಾರಿಯೂ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನ ಮಾಡಿದ್ದ. ಅದು ಕೈಗೂಡದು ಎಂದಾಗ ಹೆಬ್ಬಾರ್ ಎಸೆದ ಕಾಸು ಪಡೆದು ತಟಸ್ಥನಾಗಿದ್ದ. ಈಗಲೂ ಆತನದು ಅಂಥದ್ದೇ ಕಸರತ್ತು ಆರಂಭವಾಗಿದೆ. "ಕಾಂಗ್ರೆಸಲ್ಲಿ ನನ್ನ ಕಡೆಗಣಿಸ್ತಿದ್ದಾರೆ... ಬಿಜೆಪಿಯವ್ರು ಅಸೆಂಬ್ಲಿ ಟಿಕೆಟ್ ಕೊಟ್ರೆ ಆ ಪಕ್ಷಕ್ಕೆ ಹೋಗಲು ರೆಡಿ..." ಎಂದು ಹೆಬ್ಬಾರ್ ಕಾಲುಬುಡಕ್ಕೆ ಹಾವು ಬಿಟ್ಟಿದ್ದಾನೆ. ಹೆಬ್ಬಾರ್‌ಗೆ ಪಾಟೀಲನ ಹೇಗೆ ಖರೀದಿಸಬೇಕೆಂದು ಗೊತ್ತಿದೆ. ಈ ದೇಶಪಾಂಡೆ ಚೇಲ ಪಾಟೀಲ ಒಬ್ಬನ ಕಿರಿಕಿರಿ ಬಿಟ್ಟರೆ ಹೆಬ್ಬಾರ್‌ಗೆ ಪಾರ್ಟಿಯಲ್ಲಿ ಬೇರೆ ತೊಡಕುಗಳೇನೂ ಇಲ್ಲ.

ಕ್ಷೇತ್ರದಲ್ಲಿ ಬಹುಸಂಖ್ಯಾತರು ಹವ್ಯಕ ಬ್ರಾಹ್ಮಣರು. ಈ ಸಮುದಾಯಕ್ಕೆ ಜನಿವಾರ ಧೋರಣೆಯ ಬಿಜೆಪಿಯೆಂದರೆ ಸಹಜವಾಗೇ ಒಲವು ಜಾಸ್ತಿ. ಆದರೆ ಸ್ಥಳೀಯ ಬಿಜೆಪಿಯಲ್ಲಿ ಅಸೆಂಬ್ಲಿಗೆ ಸ್ಪರ್ಧಿಯಾಗುವಂಥ ಶಕ್ತಿಶಾಲಿ ಹೈಗನ್ಯಾರೂ ಇಲ್ಲ. ಭಾಗ್ವತ್, ಕೋಣೆಮನೆಯಂಥ ಹೈಗರು ಟಿಕೆಟ್‌ಗೆ ಸಂಸದ ಅನಂತ್ಮಾಣಿ, ಕಾಗೇರಿ ಮಾಣಿ ಮೂಲಕ ಪ್ರಯತ್ನ ನಡೆಸಿದ್ದಾದರೂ ಗೆಲ್ಲುವ ಯೋಗ್ಯತೆ ಇರುವವರಲ್ಲ, ಹಾಗಂತ ಬಿಜೆಪಿ ಬಿಡಾರದಲ್ಲೇ ನಿಖರ ಅಭಿಪ್ರಾಯವಿದೆ. ಸಂಸದನಾಗಿರುವವರಿಗೆ ಅಸೆಂಬ್ಲಿ ಅಭ್ಯರ್ಥಿಯಾಗುವ ಅವಕಾಶ ಬೇಕಾದರೂ ಮೋದಿ-ಶಾ ಎಂಬ ಶುಂಭ-ನಿಶುಂಭರು ಕೊಟ್ಟಾರೆ? ಆದರೆ, ಹಾಗೇ ಬಿಜೆಪಿ ಡಾರ್ಕ್ ಹಾರ್ಸ್ ಎಂದು "ಹೊಡಿ ಮಗ ಹೊಡಿ.... ಕಡಿ ಮಗ ಕಡಿ" ಬ್ರ್ಯಾಂಡಿನ ರಾಜ್ಯ ಬಿಜೆಪಿ ಉಪಾಧ್ಯಕ್ಷ ಅನಂತ್ಮಾಣಿ ಅಹಮಿಕೆಯಿಂದಲೇ ಅರಚಾಡುತ್ತಿದ್ದಾನೆ. ಆದರೆ ಪಕ್ಕದ ಶಿರಸಿ ಕ್ಷೇತ್ರದಲ್ಲಿ ಹವ್ಯಕ ಸಂಕುಲದ ತಾನು ಬಿಜೆಪಿ ಕ್ಯಾಂಡಿಡೇಟಾಗು ವುದರಿಂದ ಅನಂತ್ಮಾಣಿಗೆ ಚಾನ್ಸೇ ಇಲ್ಲವೆಂದು ಆತನ ಆಜನ್ಮಶತ್ರು ಕಾಗೇರಿ ಮಾಣಿ ಅಂಬೋಣ.

ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿದ್ದ ಶಿವರಾಮ ಹೆಬ್ಬಾರ್ ಸಂಸದ ಅನಂತ್ಮಾಣಿಯಿಂದ ಅಕ್ಷರಶಃ ಕಪಾಳಮೋಕ್ಷ ಮಾಡಿಸಿಕೊಂಡು ಪಾರ್ಟಿಯಿಂದ ಹೊರ ದಬ್ಬಿಸಿಕೊಂಡಿದ್ದ. ಆನಂತರ ಕಾಂಗ್ರೆಸ್ ಸೇರಿಕೊಂಡ ಹೆಬ್ಬಾರ್-ಅನಂತ್ಮಾಣಿ ನಡುವೆ ಈಗಿತ್ತಲಾಗಿ ವಿಚಿತ್ರ ರಾಜಿಯೊಂದು ಆಗಿದೆ. ಕಾಗೇರಿಯನ್ನು ಹಣಿಯಲು ಅನಂತ್ಮಾಣಿ ಕಾಂಗ್ರೆಸ್‌ನ ಹೆಬ್ಬಾರ್ ಜತೆ ಸೇರಿಕೊಂಡು ಕುತಂತ್ರ ನಡೆಸಿದ್ದಾನೆಂಬುದು ಬಿಜೆಪಿಯಲ್ಲಿ ಎಲ್ಲರಿಗೂ ಗೊತ್ತಿರುವ ರಹಸ್ಯ. ಹೀಗಾಗಿ ಅನಂತ್ಮಾಣಿ ಯಲ್ಲಾಪುರದ ಬದಲು ಕರಾವಳಿಯ ಕುಮಟೆಯಿಂದ ಕೇಸರಿ ಕ್ಯಾಂಡಿಡೇಟಾಗಲು ಪ್ಲಾನು ಹಾಕಿದ್ದಾನಂತೆ. ಯಡ್ಡಿ ಕೃಪಾಶೀರ್ವಾದದಿಂದ ತಾನೇ ಉತ್ತರ ಕನ್ನಡ ಬಿಜೆಪಿಯ ಪ್ರಶ್ನಾತೀತ ನಾಯಕಾಗ್ರೇಸನೆಂದು ಹಾರಾಡುತ್ತಿರುವ ಅನಂತ್ಮಾಣಿಗೆ ಯಲ್ಲಾಪುರದಲ್ಲಿ ಕಾಂಗ್ರೆಸ್‌ನ ಹೆಬ್ಬಾರ್‌ನ ಸೋಲಿಸುವಂಥ ಸಮರ್ಥ ಹುರಿಯಾಳು ಹಾಕುವ ಮನಸ್ಸೂ ಇಲ್ಲ. ಅನಂತ್ಮಾಣಿಯ ಒಳತುದಿತಕ್ಕೆ ತಕ್ಕಂತೆಯೇ ಇದೆ ಸ್ಥಳೀಯ ಬಿಜೆಪಿಯ ಗತಿಗೇಡಿ ಪರಿಸ್ಥಿತಿ.

ಯಲ್ಲಾಪುರ-ಮುಂಡಗೋಡಲ್ಲಿ ನಾಲ್ಕಾರು ಪುಢಾರಿಗಳು "ಟಿಕೆಟ್!... ಟಿಕೆಟ್...!!..... ಟಿಕೆಟ್...!!" ಎನ್ನುತ್ತ ತಟ್ಟಾಡುತ್ತಿದ್ದರಾದರೂ ಯಾರು ಅಭ್ಯರ್ಥಿ ಆಗಬಹುದೆಂಬುದು ದಿನಗಳೆದಂತೆ ಗೊಂದಲ ಜೋರಾಗಿಸುತ್ತಿದೆ. ಮಾಜಿ ಶಾಸಕ ವಿ.ಎಸ್. ಪಾಟೀಲ ಯಡ್ಡಿಯ ಜಾತ್ಯಸ್ತ ಲಿಂಗವಂತನಾದರೂ ಅನಂತ್ಮಾಣಿಗೆ ಆತನ ಮುಸುಡಿ ಕಂಡರಾಗದು. ಅದೆಷ್ಟೋ ಬಾರಿ ಈ ಅನಂತು ಆ ಪಾಪದ ಪಾಟೀಲನ ಮೇಲೇರಿ ಹೋಗಿದ್ದೂ ಇದೆ. ನನ್ನ ಬಗ್ಗೆ ಅನಂತುಗೆ ಸಿಟ್ಟು ವಿಪರೀತ ವಿದ್ದರೆ ನನ್ನ ಮಗ ಬಾಪುಗೌಡನಿಗಾದರೂ ಟಿಕೆಟ್ ಕೊಡಿಯೆಂದು ಪಾಟೀಲ್ ಬಾಸ್ ಯಡ್ಡಿಗೆ ದುಂಬಾಲು ಬಿದ್ದಿದ್ದಾರೆ. ಬಿಜೆಪಿಯೊಳಗಿನ ಕಣ್ಣೇ ಕಟ್ಟೇ ಕಾದೇ ಗೂಡೆ ಆಟದ ಲಾಭ ತನಗಾದೀತೆಂದು ಎಡಬಿಡಂಗಿ ಪ್ರಮೋದ್ ಹೆಗಡೆ, ಎಲ್.ಟಿ. ಪಾಟೀಲ್ ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತಿದ್ದಾರೆ.

ಪ್ರಥಮ ಜಿಲ್ಲಾ ಪರಿಷತ್‌ನ ಉಪಾಧ್ಯಕ್ಷನಾಗಿದ್ದ ಪ್ರಮೋದ್ ಹೆಗಡೆ ತನಗೆ ತಾನೇ ಉತ್ತರಕನ್ನಡ ದೊಡ್ಡ ನಾಯಕನೆಂದು ಭ್ರಮೆಗೆ ಬಿದ್ದಾತ. ಈತ ಜನತಾ ಪರಿವಾರದ ತಳಿ. ರಾಮಕೃಷ್ಣ ಹೆಗಡೆಜೀ ಜಾತಿಪ್ರೀತಿಯಿಂದ ಹೊರಹೊಮ್ಮಿದ ಪುಢಾರಿ. ಜಿಲ್ಲೆಯ ಸಾಂಸ್ಕೃತಿಕ ರಾಯಭಾರಿ ಎಂಬ ಆರೋಪಕ್ಕೆ ತುತ್ತಾಗಿರುವ ಪ್ರಮೋದ್ ಹೆಗಡೆಗೆ ಕಚ್ಚೆ ಹರುಕ ರಾಘುಸ್ವಾಮಿಯ ಲೈಂಗಿಕ ಹಗರಣದಲ್ಲಿ ಹಿಂದೂತ್ವದ ಮೇಲಿನ ದಾಳಿ ಕಾಣಿಸುತ್ತಿದೆ. ಪಕ್ಕಾ ಜಾತಿವಾದಿಯಾದ ಈ ಪ್ರಮೋದ್ ಪರಮಚೆಡ್ಡಿಯೂ ಹೌದು. ಮೊನ್ನೆ ಮೊನ್ನೆವರೆಗೆ ಎರಡೆರಡು ಬಾರಿ ಕಾಂಗ್ರೆಸ್, ಜನತಾದಳಕ್ಕೆ ನೆಗೆದಾಡಿ ಅಂತಿಮವಾಗಿ ತನ್ನ ಮನಸ್ಥಿತಿಗೆ ಹೊಂದುವ ಮತಾಂಧ ಪಕ್ಷಕ್ಕೆ ಸೇರಿದ್ದಾನೆ. ಈತ ಜಿಲ್ಲಾ ಪರಿಷತ್ ಉಪಾಧ್ಯಕ್ಷನಾಗಿದ್ದಾಗ ಹಾರಾಡಲಾರಂಭಿಸಿದ್ದ ರಂಗ್‌ರಂಗೀಲಾ ಕತೆಗಳು ಇವತ್ತಿಗೂ ಹಾಗೇ ಮುಂದುವರಿಯುತ್ತಿದೆ. ಈ ಮ್ಯಾರಿಟ್-ಕ್ಯಾಲಿಬರ್ ನಿಂದಾಗಿಯೇ ಪ್ರಮೋದ್ ಅಸೆಂಬ್ಲಿ, ಪಾರ್ಲಿಮೆಂಟ್‌ಗೆ ಸ್ಪರ್ಧಿಸಿದರೂ ಗೆಲ್ಲಲಾಗದೇ ಲಾಗಾ ಹೊಡೆದಿದ್ದು. ಕಂತ್ರಿ ಬುದ್ಧಿಯಿಂದಾಗಿಯೇ ಆತ ಯಾವ ಪಕ್ಷ ಸೇರಿದರೂ ಭರ್ಕತ್ತಾಗಲಿಲ್ಲ. ಈಗ ತಾನು ಬಿಜೆಪಿಯ ಯಲ್ಲಾಪುರ ಕ್ಷೇತ್ರ ಟಿಕೆಟ್ ಆಕಾಂಕ್ಷಿ ಎಂದು ಹೇಳೋದೇ ದೊಡ್ಡ ತಮಾಷೆ ಎಂದು ಒರಿಜಿನಲ್ ಚೆಡ್ಡಿಗಳು ಬಿದ್ದು-ಬಿದ್ದು ನಗುತ್ತಿದ್ದಾರೆ.


ತನ್ನ ತೀವ್ರ ಸಮಯಸಾಧಕತನಕ್ಕೆ ಸೈದ್ಧಾಂತಿಕ ಸಂದಿಗ್ಧತೆಯ ಲೇಪ ಕೊಡುವ ಕುಕಲಾಪಾರಂಗತನಾದ ಪ್ರಮೋದ್ ಹೆಗಡೆ ಬಿಜೆಪಿ ಸೇರಿರುವುದು ಆತನ ನೈತಿಕ ಅಧಃಪತನದ ಸಂಕೇತ ಎಂಬ ಚರ್ಚೆ ಜಿಲ್ಲಾ ರಾಜಕಾರಣದ ಪಡಸಾಲೆಯಲ್ಲಿ ನಡೆದಿದೆ. ಬಿಜೆಪಿಯಲ್ಲಿ ಅನಂತ್ಮಾಣಿ ಒಬ್ಬನ ಬಿಟ್ಟರೆ ಮತ್ಯಾರೂ ಪ್ರಮೋದ್‌ನ ಪರಿಚಯ ಮಾಡದಂಥ ದುರಂತ ಎದುರಾಗಿದೆ. ಈತ ಶಾಸಕ ಹೆಬ್ಬಾರ್ ಜತೆಗಿನ ಲೇವಾದೇವಿಯಲ್ಲಿ ಎಡವಟ್ಟಾದ್ದರಿಂದಲೇ ಬಿಜೆಪಿ ಸೇರಿದ್ದು. ಅನಂತ್ಮಾಣಿ ನಂಬಿ ಚೆಡ್ಡಿ ಪಾಳೆಯಕ್ಕೆ ಹೊಕ್ಕಿರುವ ಪ್ರಮೋದ್ ಹೆಗಡೆ ಬಿಜೆಪಿ ಕ್ಯಾಂಡಿಡೇಟಾದರೂ ಸ್ವ-ಜಾತಿ ಹೈಗರು ಓಟು ಹಾಕೋದು ಅನುಮಾನ. ಯಲ್ಲಾಪುರ ಸೀಮೆಯ ಹೈಗರಿಗೆ ಪ್ರಮೋದ್‌ಗಿಂತ ಹೆಬ್ಬಾರ್‌ನೇ ಹತ್ತಿರತ್ತಿರ ಎಂಬುದು ವಾಸ್ತವ. ಅದ್ಯಾಕೋ ಇವತ್ತಿಗೂ ಯಲ್ಲಾಪುರ ಭಾಗದ ಹವ್ಯಕರು ಪ್ರಮೋದ್‌ನ ನಂಬುವುದೇ ಇಲ್ಲ.

ಯಲ್ಲಾಪುರ ಕ್ಷೇತ್ರದ ಅಸೆಂಬ್ಲಿ ಕಾಳಗದ ಅಖಾಡ ಈಗ ಮುಕ್ಕಾಲು ಪಾಲು ಹದಗೊಂಡಿದೆ. ಕಾಂಗ್ರೆಸ್‌ನಿಂದ ಶಿವರಾಮ ಹೆಬ್ಬಾರ್ ಅಭ್ಯರ್ಥಿಯಾಗೋದು ಗ್ಯಾರಂಟಿ. ಜೆಡಿಎಸ್ ಕಿಂಗ್ ಕುಮ್ಮಿ ಈಚೆಗೆ ಜಿಲ್ಲೆಗೆ ಬಂದಾಗ ಕಾಂಗ್ರೆಸ್‌ನಿಂದ ಒದ್ದೋಡಿಸಲ್ಪಟ್ಟ ರವೀಂದ್ರನಾಥ ನಾಯ್ಕ್ ಉರುಫ್ ಎ. ರವೀಂದ್ರ ನಾಯ್ಕ ಎಂಬ ಅಧಿಕಾರ-ದುಡ್ಡು ದಾಹದ ಪುಢಾರಿಯೇ ಯಲ್ಲಾಪುರದಲ್ಲಿ ತನ್ನ ಪಕ್ಷದ ಹುರಿಯಾಳೆಂದು ಘೋಷಿಸಿ ಹೋಗಿದ್ದಾರೆ. ಬಿಜೆಪಿ ಪೈಲ್ವಾನ್ ಯಾರೆಂದು ಗೊತ್ತಾದರೆ ಹಣಾಹಣಿಯ ಖದರು ಪಕ್ಕಾ ಆಗುತ್ತದೆ. ಆದರೆ ಬಿಜೆಪಿಯ ಗೊಂದಲ ನಾಮಪತ್ರ ಕೊಡುವ ಕಡೆಯ ದಿನದವರೆಗೂ ಮುಂದುವರಿಯುವ ಸಂಕೇತಗಳು ಬಿಜೆಪಿ ಬಿಡಾರದಿಂದ ನಿರಂತರವಾಗಿ ರವಾನೆ ಆಗುತ್ತಲೇ ಇದೆ. ಪ್ರತಿ ಚುನಾವಣೆ ಬಂದಾಗಲೂ ಯಾವುದಾದರೂ ಪಕ್ಷದಿಂದ ಕಣಕ್ಕಿಳಿವ ಚಟದ ರವೀಂದ್ರ ನಾಯ್ಕ ಈಗ ಯಲ್ಲಾಪುರ-ಮುಂಡಗೋಡಲ್ಲಿ ಟೆಂಟ್ ಹಾಕಿದ್ದಾನೆ. ಕಾಂಗ್ರೆಸ್‌ನಿಂದ ತನಗೆ ದ್ರೋಹವಾಯ್ತು..... ಅನ್ಯಾಯವಾಯ್ತೆಂದು ಕಂಡಕಂಡಲ್ಲಿ ಗೋಳೋ ಎಂದು ಅಳುವ ರವೀಂದ್ರ ನಾಯ್ಕ ಎಮ್ಮೆಲ್ಲೆ ಆಗುವ ಆಸೆಯಿಂದ ಕಳೆದ ಎರಡು ದಶಕಗಳ ಕಾಲ ಮಾಡಿದ ಒರಾಟ, ಹಾರಾಟ ಒಂದೆರಡಲ್ಲ. ಆದರೆ ಒಂದೂ ಆತನಿಗೆ ರಾಜಕೀಯವಾಗಿ ಭರ್ಕತ್ತು ಮಾಡದಿದ್ದರೂ ಎಲ್ಲ ಎಲೆಕ್ಷನ್‌ಗಳು ಆರ್ಥಿಕವಾಗಿ ಅಡಚಣೆ ದೂರಾಗಿಸಿದ್ದಂತೂ ಖರೆ.


ಜನಪರ ಹೋರಾಟಗಾರನೆಂಬ ಭ್ರಮೆ... ರವಿಗೆ ಚುನಾವಣೆಯಲ್ಲಿ ಬಿದ್ದಿರುವ ಮತ... ಢೋಂಗಿತನ, ಟೊಳ್ಳುತನ ಪರಿಚಯಿಸಿದೆ. ಆದ... ಮಾತ್ರ ನಿಂತಿಲ್ಲ. ಚುನಾವಣೆಯಲ್ಲಿ ಸೋ... ಗೊತ್ತಿದ್ದೂ ಸ್ಪರ್ಧೆಗಿಳಿವುದು ಆತನ ರೋ... ತಂತ್ರಗಾರಿಕೆ ಎಂದು ವ್ಯಾಖ್ಯಾನಿಸುವವರೂ ಇ... 'ಕಲ್ಪತರು' ಬ್ಯಾಂಕಿನಿಂದ ದೋಖಾ ಅನುಭವಿ... ದಂಡೇ ಜಿಲ್ಲೆಯಲ್ಲಿದೆ. ಅರಣ್ಯ... ಅತಿಕ್ರಮಣದಾರರಿಗೆ ಅಂಗೈಲೇ ಸ್ವರ್ಗ ತೋ... ರವಿ ನಾಯ್ಕ ಎರಡೆರಡು ಬಾರಿ ಸ್ಥಳೀಯ... ವಿಧಾನ ಪರಿಷತ್‌ಗೆ, ಎರಡೆರಡು ಬಾರಿ... ಸ್ಪರ್ಧಿಸಿ ಮಕಾಡೆ ಮಲಗಿದ್ದಾನೆ. ಎರಡು ಸ... ಬಂಡಾಯಗಾರನಾಗಿ ಪರಿಷತ್‌ಗೆ ಸ್ಪರ್ಧಿಸಿದ... ಕೆಲವೇ ಕೆಲವು ಮತಗಳಷ್ಟೇ. ಜೆಡಿಎಸ್‌ನಿಂದ... ಕ್ಷೇತ್ರದಲ್ಲಿ ಕ್ಯಾಂಡಿಡೇಟಾಗಿದ್ದ ರವಿ ನಾಯ್ಕ ಸೊ... ಮನೆಗೆ (ಕಾಂಗ್ರೆಸ್) ಬಂದಿದ್ದ. ಈಗ... ಜನತಾದಳದಲ್ಲಿ ಅಂಡಲೆಯುತ್ತಿದ್ದಾನೆ. ಅಲ್ಲಿ... ರಾಜಕೀಯದ ಚಕ್ರ ಬರೋಬ್ಬರಿ ಒಂ... ತಿರುಗಿದಂತಾಗಿದೆ.


ಮಹತ್ವಾಕಾಂಕ್ಷಿಯಾದ ಈತ ಯಾವ... ನಿಷ್ಠನಲ್ಲ. ಮ್ಯಾಗಿ ಈತನನ್ನು ಕರೆದು ಶಿರಸಿಯ... ಎದುರು ನಿಲ್ಲಿಸಿದ್ದರು. ಮ್ಯಾಗಿ ಇಟ್ಟ ನಂಬಿ... ಉಳಿಸಿಕೊಳ್ಳಲಾಗಲಿಲ್ಲ. ದೀಪಕ್ ಹೊನ್ನಾವ... ಅತ್ಯಾಪ್ತ ರೌಡಿ ಶಿರಸಿಯಲ್ಲಿ ಕಾಂಗ್ರೆಸ್ ಪರ... ಇದೇ ರವಿ ಕೈಕೊಟ್ಟನೆಂದು ಮ್ಯಾಗಿ ರಾಂ... ಮೊದಲೇ ದೇಶಪಾಂಡೆ ಕೆಂಗಣ್ಣಿಗೆ ತುತ್ತಾಗಿದ್ದ ರ... ಕೈಬಿಟ್ಟನಂತರ ಅನಾಥನಾಗಿ ಹೋದ. ಸ್ವ-... ಹರಿಪ್ರಸಾದ್, ಸೊರಕೆಯಂಥವರಿಗೂ ರವಿ... ಮೂಡಲೇ ಇಲ್ಲ. ಹಾಗಾಗಿ ಆತ ಗತಿಯಿ... ಸೇರಲು ಹವಣಿಸಿ ವಿಫಲನಾದ. ಸಂಸದ... ರವಿ ಬಿಜೆಪಿಗೆ ಬರೋದು ಬೇಡವಾಗಿತ್ತು... ಜೆಡಿಎಸ್ ಅಧ್ಯಕ್ಷನೂ-ಸಣ್ಣ ಮಾವನೂ ಆ... ನಾಯ್ಕರಿಂದ ವಸೀಲಿ ಮಾಡಿಸಿ ಜೆಡಿ... ಸೇರಿದ್ದಾನೆ. ಈ ರವಿ ನಾಯ್ಕ ಮತ್ತು ಪ್ರಮೋ... ಜಿಲ್ಲಾ ರಾಜಕಾರಣದ ಇತಿಹಾಸದಲ್ಲಿ ಎ... ಹಪಾಹಪಿಯ ಎರಡು ಸಂಕೇತ ಸ್ಥಾವರದ...


ರವಿ ನಾಯ್ಕನಿಂದ ಒಂದೇ ಒಂದು ಬಾ... ಪಡೆಯಲು ಸಾಧ್ಯವೇ ಇಲ್ಲ. ಇತ್ತ ಅಬ್ರಾಹ್ಮಣರ... ಅರ್ಹನೂ ಆಗಲಿಲ್ಲ. ಅರಣ್ಯ ಅತಿಕ್ರ... ಕುಟುಂಬದ ಮತಗಳೆಲ್ಲ ತನಗೇ ಎಂದು... ರವಿ ನಾಯ್ಕನ ಒಳ ಉದ್ದೇಶ ಕಾಂಗ್ರೆಸ್‌ನ... ಕಾಡಿದ ಶಾಸಕ ಹೆಬ್ಬಾರ್‌ಗೆ ಮುಳುಗು ನೀ... ಹಾಗೊಂದು ಕೌತುಕ ಚರ್ಚೆ ಈಗ ಮು... ನಡೆದಿದೆ. ಯಲ್ಲಾಪುರ-ಮುಂಡಗೋಡ-ಬನವಾ... ಎಲೆಕ್ಷನ್ ತಯಾರಿ ತಂತ್ರ ದಿನಕ್ಕೊಂದು... ಕುತೂಹಲ[illegible] ಕೆರಳಿಸುತ್ತದೆ. ■



ದೇಶಪಾಂಡೆ



ಮಾರ್ಗರೆಟ್ ಆಳ್ವ



ಎಲ್.ಟಿ. ಪಾಟೀಲ


ಪ್ರಮೋದ್ ಹೆಗಡೆ



ರವೀಂದ್ರ ನಾಯ್ಕ


ವಿ.ಎಸ್. ಪಾಟೀಲ್


ಅನಂತಕುಮಾರ್ ಹೆಗಡೆ


ವಿಶ್ವೇಶ್ವರ ಹೆಗಡೆ ಕಾ

ಮೇಲುಕೋಟೆ: ಪುಟ್ಟಣ್ಣಯ್ಯ-ಪುಟ್ಟರಾಜು ಜುಗಲ್‌ಬಂದಿ



ಎಂಎಲ್‌ಎ ಎಲೆಕ್ಷನ್ ಎಡತಾಕಿದಂತೆ ಲೋಕಲ್ ...ಟಿಕ್ಸ್ ರೋಚಕ ತಿರುವುಗಳತ್ತ ತಿರುಗಿ ನಿಲ್ಲುತ್ತಿದೆ. ...ಕ್ಕೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ...ನಸಭಾ ಕ್ಷೇತ್ರವೇನೂ ಹೊರತಲ್ಲ. ಇಲ್ಲಿ ರೈತಸಂಘದ ...ಣ್ಣಯ್ಯ ಹಾಲಿ ಶಾಸಕರಾಗಿದ್ದರೂ ಕ್ಷೇತ್ರದ ತುಂಬೆಲ್ಲ ...ದ ಪುಟ್ಟರಾಜುದ್ದೇ ಕಾರುಬಾರು. ಗ್ರಾಮ ...ಯ್ತಿಯಿಂದ ಹಿಡಿದು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ...ಚಾಯ್ತಿ ಸ್ಥಾನಗಳೆಲ್ಲ ಪುಟ್ಟರಾಜು ಬೆಂಬಲಿಗರ ...ಲ್ಲಿವೆ. ತನಗೆ ದಿಲ್ಲಿ ರಾಜಕಾರಣ ಒಗ್ಗಿ ಬರೋದೂ ... ತಾನು ಅಲ್ಲಿ ಬರ್ಕತ್ತಾಗೋದೂ ಇಲ್ಲ ಎಂಬುದು ...ರಾಜುಗೆ ಸ್ಪಷ್ಟವಾಗಿ ಮನದಟ್ಟಾಗಿದೆ. ಹಾಗಾಗಿ ಮತ್ತೆ ...ಲ್‌ಎ ಆಗಿ, ರಾಜ್ಯ ರಾಜಕಾರಣದಲ್ಲಿ ಸಚಿವಗಿರಿ ...ಕೊಳ್ಳುವ ಆಲೋಚನೆಯಲ್ಲಿರುವ ಪುಟ್ಟರಾಜು ...ಗಲೇ ಕ್ಷೇತ್ರದ ತುಂಬೆಲ್ಲಾ ಹವಾ ಎಬ್ಬಿಸಿದ್ದಾನೆ.


ಪುಟ್ಟರಾಜು ತಿಜೋರಿಯ ಮುಂದೆ ...ಪುಟ್ಟಣ್ಣಯ್ಯ ಸಪ್ಪೆ ಆಸಾಮಿ ಅನ್ನೋದ್ರಲ್ಲಿ ಎರಡು ...ಲ್ಲ. ಕಳೆದ ಬಾರಿ, ಅಂದರೆ 2013ರ ಚುನಾವಣೆಯಲ್ಲಿ ...ರಾಜುನ ಕಲ್ಲು ಕ್ವಾರಿಗಳ ಅಕ್ರಮಗಳನ್ನು ಮುಂದೆ ...ಡಿ, ಹಸಿರು ಶಾಲನ್ನು ಹಾರಾಡಿಸಿದ್ದರಿಂದ ...ಪುಟ್ಟಣ್ಣಯ್ಯ ಗೆಲ್ಲಲು ಸಾಧ್ಯವಾಗಿತ್ತು. ಹಾಗಾಗಿ ...ಬಿವೂ ಅದೇ ತಂತ್ರ ಹೆಣೆಯಲು ಪುಟ್ಟಣ್ಣಯ್ಯ ...ಗಾಗಿರೋದು ಇಬ್ಬರ ನಡುವೆ ಕೆಸರೆರಚಾಟದ ...ಲ್‌ಬಂದಿಗೆ ಕಾರಣವಾಗಿದೆ.

ಚಿನಕುರುಳಿ-ಹೊನಗಾನಹಳ್ಳಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಲ್ಲಿ ಬಹುಪಾಲು ಪುಟ್ಟರಾಜು ಕುಟುಂಬಕ್ಕೆ ಸೇರಿದವು. ದಿನಕ್ಕೆ ಲಕ್ಷಾಂತರ ಆದಾಯ ತಂದುಕೊಡುವ ಮೂಲಗಳವು. ಅವುಗಳ ಬಲದಿಂದಲೇ ಹುಟ್ಟೂರು ಚಿನಕುರುಳಿಯಲ್ಲಿ 35 ಕೋಟಿ ವೆಚ್ಚದಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಕಟ್ಟಲು ಪುಟ್ಟರಾಜುಗೆ ಸಾಧ್ಯವಾದದ್ದು. ಅಲ್ಲದೇ ಮೈಸೂರು-ಬೆಂಗಳೂರಿನ ರಿಯಲ್ ಎಸ್ಟೇಟ್ ದಂಧೆಗೂ ಕೈಹಾಕಿರುವ ಪುಟ್ಟರಾಜು ಆರ್ಥಿಕವಾಗಿ ದುಂಡಗಾಗಿದ್ದಾರೆ. ಆತನ ಈ ವ್ಯವಹಾರಗಳು ಮೇಲುಕೋಟೆಯ ಮಟ್ಟಿಗೆ ಬಹಿರಂಗ ಸತ್ಯಗಳು. ಅಲ್ಲಿ ನಡೆಯುವ ಅವ್ಯವಹಾರಗಳೂ ಅಷ್ಟೇ ಸುಸ್ಪಷ್ಟ. ಕೆಲದಿನಗಳ ಹಿಂದೆ ನಿಯಮಬಾಹಿರ ಚಟುವಟಿಕೆಯ ಕಾರಣಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೆ.ಎಂ.ನಾಗಭೂಷಣ್ 18 ಕ್ರಷರ್‌ಗಳ ಮಾಲೀಕರಿಗೆ 90.80 ಲಕ್ಷ ದಂಡ ವಿಧಿಸಿ ನೋಟಿಸ್ ನೀಡಿದ್ದರು. ಅವುಗಳಲ್ಲಿ ಪುಟ್ಟರಾಜು ಪಾಲುದಾರಿಕೆಯ ಎಸ್‌ಟಿಜಿ ಅಸೋಸಿಯೇಟ್ಸ್‌ನ ಪಾಲೇ 35.10 ಲಕ್ಷ ರೂಪಾಯಿಯಿತ್ತು!

ಇದನ್ನೇ ನೆಪ ಮಾಡಿಕೊಂಡ ಪುಟ್ಟಣ್ಣಯ್ಯ ಮೊನ್ನೆ ಒಂದು ಪತ್ರಿಕಾಗೋಷ್ಠಿ ಕರೆದು 'ಪಾಂಡವಪುರ ತಾಲ್ಲೂಕಿನಲ್ಲಿ 400ರಿಂದ 450 ಎಕರೆ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅದರಲ್ಲಿ ಸಂಸದ ಸಿ.ಎಸ್.ಪುಟ್ಟರಾಜು ಹಾಗೂ ಅವರ ಸಂಬಂಧಿಕರದ್ದೇ ಹೆಚ್ಚು ಪಾಲಿದೆ. ಚಿನಕುರುಳಿ ಮತ್ತು ಹೊನಗಾನಹಳ್ಳಿ ವ್ಯಾಪ್ತಿಯಲ್ಲೇ 15 ಎಕರೆ ಪ್ರದೇಶದಲ್ಲಿ ಅನುಮತಿ ಪಡೆದಿದ್ದರೂ 35 ಎಕರೆ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಬೇರೆ ಕಂಪನಿಗಳಿಗೆ ಕೇವಲ 5 ವರ್ಷ ಲೈಸೆನ್ಸ್ ನೀಡಿದ್ದರೆ, ಪುಟ್ಟರಾಜು ಕುಟುಂಬದವರಿಗೆ ಮಾತ್ರ 20 ವರ್ಷ ಅನುಮತಿ ನೀಡಿರೋದು ಆತ ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಕ್ಕೆ ಸಾಕ್ಷಿ. ಅರಣ್ಯ ಭೂಮಿಯಲ್ಲಿ ಗಣಿಗಾರಿಕೆ ಮಾಡುತ್ತಿದ್ದ ಆತನ ಕುಟುಂಬಸ್ಥರನ್ನು ಪ್ರಶ್ನಿಸಲು ಹೋದ ನಾಗಮಂಗಲ ಅರಣ್ಯಾಧಿಕಾರಿಯನ್ನು ಪುಟ್ಟರಾಜು ತನ್ನ ಬೆಂಬಲಿಗರು ಬೆದರಿಸಿ ಕಳುಹಿಸಿದ್ದಾರೆ. ಇಷ್ಟಲ್ಲದೆ ಪುಟ್ಟರಾಜು ತನಗೆ ಮನೆ ಇಲ್ಲವೆಂದು ಮೈಸೂರು, ಬೆಂಗಳೂರು, ಮಂಡ್ಯದಲ್ಲಿ ಸೈಟು ಹೊಡೆದಿದ್ದಾನೆ. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಕ್ರಮವಾಗಿ ಸೈಟು ಪಡೆದ ಹಿನ್ನೆಲೆಯಲ್ಲಿ ಸಿಬಿಐ ತನಿಖೆ ನಡೆಯುತ್ತಿದೆ. ಈಗ ಅಕ್ರಮ ಗಣಿಗಾರಿಕೆಗೆ ದಂಡ ಹಾಕಲಾಗಿದ್ದು ನೈತಿಕ ಹೊಣೆಹೊತ್ತು ಪುಟ್ಟರಾಜು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಲಿ' ಎನ್ನುವ ಆರೋಪ ಮಾಡಿದ್ದರು.

ಇದಕ್ಕೆ ಪ್ರತಿಯಾಗಿ ಇನ್ನೊಂದು ಪತ್ರಿಕಾಗೋಷ್ಠಿ ಕರೆದ ಪುಟ್ಟರಾಜು 'ಅಕ್ರಮ ಕಲ್ಲು ಗಣಿಗಾರಿಕೆ ತಡೆಯುತ್ತೇನೆಂದು ಹೇಳಿದ್ದ ಪುಟ್ಟಣ್ಣಯ್ಯ ಶಾಸಕರಾದ ನಂತರ ಅಕ್ರಮ ಕಲ್ಲುಗಣಿಗಾರಿಕೆ ಮೊದಲಿಗಿಂತ ಹೆಚ್ಚಾಗಿದೆ. ನಾನು ಶಾಸಕನಾಗಿದ್ದಾಗ ಕಾನೂನುಬದ್ಧವಾಗಿ 18 ಕ್ರಷರ್‌ಗಳು ಮಾತ್ರ ನಡೆಯುತ್ತಿದ್ದವು. ಆದರೀಗ ಹದಿನೆಂಟಿದ್ದ ಕ್ರಷರ್‌ಗಳ ಸಂಖ್ಯೆ ನಲವತ್ತೆಂಟಾಗಿದೆ. ಅಕ್ರಮ ಗಣಿಗಾರಿಕೆ ಬಗ್ಗೆ ಮಾತನಾಡುವ ಪುಟ್ಟಣ್ಣಯ್ಯ ತನ್ನ ಭಾಮೈದುನ ಪಿ.ವಿ.ರವಿಕುಮಾರ್ ಎಂಬಾತನ ಕೈಲಿ ಕಲ್ಲುಗಣಿಗಾರಿಕೆ ಮಾಡಲು 10 ಎಕರೆ ಜಾಗ ನೀಡುವಂತೆ ಸರ್ಕಾರಕ್ಕೆ ಅರ್ಜಿ ಗುಜರಾಯಿಸಿದ್ದಾರೆ. ಇದ್ಯಾವ ನ್ಯಾಯ? ಕೇರಳ ಮೂಲದ ಅಕ್ರಮ ಗಣಿದಾರರ ಜೊತೆ ಒಳಒಪ್ಪಂದ ಮಾಡಿಕೊಂಡಿರುವ ಪುಟ್ಟಣ್ಣಯ್ಯ ಅಂತವರಿಗೆ ಹೆಚ್ಚಿನ ಬಡ್ಡಿಗೆ ಸಾಲ ನೀಡುವುದಲ್ಲದೇ ಯಾವುದೇ ವ್ಯವಹಾರವನ್ನು ತನ್ನ ಬೆಂಬಲಿಗರ ಮೂಲಕ ನಡೆಸಬೇಕು, ಕ್ರಷರ್‌ಗಳಿಗೆ ಡೀಸೆಲನ್ನು ತಮ್ಮ ಪೆಟ್ರೋಲ್ ಬಂಕ್‌ನಿಂದಲೇ ಖರೀದಿಸಬೇಕು ಎನ್ನುವ ಷರತ್ತು ವಿಧಿಸಿದ್ದಾರೆ. ಇನ್ನು ಸೈಟುಗಳ ವಿಚಾರಕ್ಕೆ ಬರುವುದಾದರೆ ಪುಟ್ಟಣ್ಣಯ್ಯ ಶಾಸಕರಾದ ನಂತರ ಎಲ್ಲೆಲ್ಲಿ, ಎಷ್ಟೆಷ್ಟು ಸೈಟು ಮಾಡಿಕೊಂಡಿದ್ದಾರೆಂಬ ವಿವರ ನನ್ನ ಬಳಿ ಇದೆ. ಕ್ಯಾತನಹಳ್ಳಿ ರಸ್ತೆ ಜಾಗವನ್ನು ಅತಿಕ್ರಮಿಸಿಕೊಂಡಿದ್ದಾರೆ. ಇಂಥವರು ಬೇರೆಯವರ ಬಗ್ಗೆ ಮಾತನಾಡೋದು ತಮಾಷೆಯಾಗಿದೆ' ಎಂಬ ಜವಾಬು ಕೊಟ್ಟಿದ್ದಾರೆ.

ಯಾವಾಗ ಪುಟ್ಟರಾಜು ಇಂಥಾ ಪ್ರತ್ಯಾರೋಪ ಮಾಡಿದರೋ ಇತ್ತ ಪುಟ್ಟಣ್ಣಯ್ಯನ ಬತ್ತಳಿಕೆಯಿಂದ ಇನ್ನೊಂದಷ್ಟು ಅಸ್ತ್ರಗಳು ಹೊರಬಿದ್ದವು. ಅಕ್ರಮ ಗಣಿಗಾರಿಕೆ ನಡೆಸಿದ್ದಕ್ಕೆ ದಂಡ ಹಾಕಿಸಿಕೊಂಡಿರೋ ಪುಟ್ಟರಾಜು ಸ್ವಲ್ಪವೂ ಮಾನವಿಲ್ಲದೆ ನನ್ನ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅಷ್ಟೂ ಆರೋಪಗಳಿಗೆ ಸಾಕ್ಷ್ಯ ಇದ್ದರೆ ರಾಜೀನಾಮೆ ನೀಡಲು ನಾನು ಸಿದ್ಧ. ಅವರ ಆರೋಪಗಳಿಗೆ ಬೆಲೆ ತೆರಲು ಅವರು ಸಿದ್ಧರಿದ್ದಾರಾ? ಸರ್ಕಾರಕ್ಕೆ ಸೇರಬೇಕಿದ್ದ ಸುಮಾರು 30 ಕೋಟಿಯಷ್ಟು ರಾಯಲ್ಟಿ ಹಣವನ್ನು ಗ್ರಾಮ ಪಂಚಾಯಿತಿ ಸಭೆ ಕರೆದು ಮನ್ನಾ ಮಾಡಿಕೊಂಡಿರುವ ಹಿಂದಿರುವ ಹಕೀಕತ್ತಾದರೂ ಏನು? ಕಲ್ಲು ಹೊಡೆಯುವ ಸಾಮಾನ್ಯ



ಕುಟುಂಬದ ಪುಟ್ಟರಾಜು ಇವತ್ತು ಕೋಟಿಗಟ್ಟಲೆ ಆಸ್ತಿಗೆ ತೂಗುತ್ತಾರೆ. ಇದರ ಮೂಲವೇನೆಂದು ಬಹಿರಂಗಪಡಿಸಲಿ ಎಂಬ ಸವಾಲು ಹಾಕಿದ್ದಾರೆ.

ಮೊನ್ನೆ ಪಾಂಡವಪುರದಲ್ಲಿ ನಡೆದ ಸಭೆಯೊಂದರಲ್ಲಿ ಭಾಗವಹಿಸಿದ್ದ ಪುಟ್ಟರಾಜು ಇದಕ್ಕೆಲ್ಲ ಕೌಂಟರ್ ಎನ್ನುವಂತೆ 'ನಾನು ಜಿ.ಪಂ.ಸದಸ್ಯನಾಗಿ, ಶಾಸಕನಾಗಿ, ಸಂಸದನಾಗಿ ಕೆಲಸ ಮಾಡಿದ್ದೇನೆ. ಆದರೆ ಎಂದೂ ಪುಟ್ಟಣ್ಣಯ್ಯನ ತರ ಅವರ ಹೆಂಡತಿ ಕೈಲಿ ಚೀಟಿ ಬರೆಸಿಕೊಂಡು ಬಂದವರಿಗೆ ಕಾಮಗಾರಿ ನೀಡಲಿಲ್ಲ. ನನ್ನ ತಾತ-ಮುತ್ತಾತನ ಕಾಲದಿಂದಲೂ ಕಲ್ಲು ಹೊಡೆದು ಜೀವನ ಸಾಗಿಸುತ್ತಿದ್ದೇವೆ. ಅಕ್ರಮವಾಗಿ ಹಣ ಸಂಪಾದನೆ ಮಾಡುವ ಜಾಯಮಾನ ನನ್ನದಲ್ಲ. ನಾವು ಕಾರು ತೆಗೆದುಕೊಂಡಿದ್ದಕ್ಕೂ ದಾಖಲೆಯಿದೆ. ಎಸ್‌ಟಿಜಿ ಸ್ಕೂಲ್ ಮಾಡಲು ಕಾರ್ಪೊರೇಷನ್ ಬ್ಯಾಂಕಿನಲ್ಲಿ ಎಷ್ಟು ಸಾಲ ಪಡೆದಿದ್ದೇನೆ ಎಂಬುದನ್ನು ಹೋಗಿ ಪರಿಶೀಲಿಸಲಿ. ಚುನಾವಣೆ ಹತ್ತಿರವಾಗುತ್ತಿದೆ ಅನ್ನೋ ಕಾರಣಕ್ಕೆ ಹೀಗೆ ಇಲ್ಲಸಲ್ಲದ ಆರೋಪ ಮಾಡಿಕೊಂಡು ಜನರ ದಿಕ್ಕು ತಪ್ಪಿಸಲು ಹೊರಟಿರೋದು ಅವರ ನೈತಿಕ ದಿವಾಳಿತನವನ್ನು ತೋರಿಸುತ್ತೆ. ಬೇಕಿದ್ದರೆ ಬಹಿರಂಗ ಚರ್ಚೆಗೆ ಬರಲಿ ಅವರ ಸಂಪೂರ್ಣ ಜಾತಕ ಬಿಚ್ಚಿಡುತ್ತೇನೆ' ಎಂದೆಲ್ಲಾ ಅಬ್ಬರಿಸಿದ್ದಾರೆ. ಒಟ್ಟಿನಲ್ಲಿ ಇವರಿಬ್ಬರ ಮಾತಿನ ಸಮರ ಸದ್ಯಕ್ಕೆ ನಿಲ್ಲುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.

■ ವರದಿಗಾರ

ಬಸವಣ್ಣನ ಕೊಂದೋರ್‍ಯಾರು ಅಂತ ಗೊತ್ತಾಯ್ತು!



• ಬಿ.ಚಂದ್ರೇಗೌಡ

ಕಟ್ಟೆಪುರಾಣ

...ದ್ದಕ್ಕಿದ್ದಂತೆ ಧರ್ಮ ಸಿಂಗ್ ಹೊರಟುಹೋದ ...ಮಾತನಾಡುತ್ತಿರಬೇಕಾದರೆ ಸೀರ,

"ಧರಮ ಸಿಮ್ಮನ ತಿಥಿ ಯಾವತ್ಲ ಉಗ್ರಿ" ಎಂದ.

"ಯಾಕೆ ತಿಥಿಗೊಗ್ತಿಯ?"

"...ಳಿದೆ ಕಂಡ್ಯ."

"ಅವರು ತಿಥಿ ಮಾಡ್ತರೋ ಇಲ್ಲವ್ರೋ ಯಾರಿಗೊತ್ತಪ್ಪ"

"ಯಾಕೆ?"

"ಅವರು ರಜಪೂತರು ಕಣೊ. ಅವುರಲ್ಲಿ ತಿಥಿ ಕಾರ್ಯ ...ಇಲ್ಲವ್ರೊ ನನಿಗೇನು ಗೊತ್ತು."

"...ಜಪೂತರು ಅಂದ್ರೆ ರಾಜವಂಶನೆ" ಎಂದ ಕಾಳಮಾವ.

"...ಜವಂಶ ಏನಿಲ್ಲ ಕಣಮಾವ. ಒಟ್ಟಿನಲ್ಲಿ ಅವುರ ...ರ ಕಮ್ಮಿ. ಆದ್ರು ಜನ ಅವುನ್ನ ಗೆಲ್ಲುಸ್ತ ಬಂದ್ರು."

"...ಳೋಡಪ್ಪ ರಾಜಕಾರಣ ಮಾಡಕ್ಕೆ ನಮ್ಮ ಜಾತಿ ...ಜಾಸ್ತಿಯಿರಬೇಕು ಅಂತರೆ. ಆದ್ರೆ ಧರ್ಮಸಿಮ್ಮನ್ನ ...ದ್ರೆ ಅದ್ಯಲ್ಲ ಸುಳ್ಳು, ವಳ್ಳೆತನ ಇದ್ರೆ ಸಾಕು ಅಂತ ...ಲ್ಲ ತಿಳಕಬೇಕು" ಎಂದ ಕಾಳಮಾವ.


"...ಜ ಕಣ ಮಾವ. ಧರ್ಮಸಿಂಗ ಒಂಥರಾ ...ಡಿಯ ಇದ್ದಂಗೆ. ರಾಜಕಾರಣದಲ್ಲಿದ್ರು ಯಾರಿಗೂ ... ಅಂದೋನಲ್ಲ, ಯಾರ್‍ಯಾರ ತುಳಿಯಕ್ಕೆ ಮನಸು ...ಲ್ಲ ಯಲ್ಲಾ ಜಾತಿ ಜನಗಳಿಗೂ ಇವ್ರನು ನಮ್ಮೋನು ... ಬದುಕಿಬಿಟ್ಟು ಹೋದ."

"...ವರಾಜ ಅರಸು ಅಂಗೆ ಅಲವೆ ಇದ್ದಿದ್ದು, ಅವ್ರುಸ ...ಲ್ಲ ಬರಿ ನಮ್ಮೊರೆಯುಷ್ಟ ಇದ್ದಿದ್ದು" ಎಂದ ಸೀರ.

"...ಹು ಕಣೊ. ನಮ್ಮೊರೆ ಇದ್ರುವೆ ನಮ್ಮ ಜಾತಿ ... ಸೋಲಿಸಿ ಅರಸು ಗೆಲ್ಲಿಸಿಕೊಂಡು ಬಂದ್ರು ... ಅರಸು ಎಂಗಿದ್ದ ಲಕ್ಕ ಹಾಕು."

"...ೀಡು ಮತ್ತೆ ಇವತ್ತು ಅಂತ ರಾಜಕಾರಣ ...ತ."

"...ಚಿತದ ಕಣೊ. ನೋಡಾ ಕಡೂರಲ್ಲಿ ದತ್ತ ಅಂತ ...ವ್ಪನೆ. ಅವ್ರುನಿಗೆ ಲಿಂಗಾಯತರು, ಕುರುಬ್ರು ಯಲ್ಲ



ಸೇರಿ ಓಟು ಮಾಡಿ ತಮ್ಮ ಜಾತಿ ಕ್ಯಾಂಡೇಟ್ ಸೋಲಿಸಿ ಅವುನ್ನ ಗೆಲ್ಲುಸ್ತರೆ. ಆ ರಮೇಶ್‌ಕುಮಾರನೂ ಅಂಗೆಯ. ಜಾತಿ ಜನ ಸೋಲಿಸಿ ತಾನು ಗೆದ್ದು ಬತ್ತನೆ. ಇವತ್ತಿಗೂ ಅವತ್ತಿನ ರಾಜಕಾರಣ ನಡಿತಾ ಅದೆ. ಏನಪ್ಪ ಅಂದ್ರೆ ರಾಜಕಾರಣಿಗಳು ವಳ್ಳೊರಾಗಿರಬೇಕು" ಎಂದ ಉಗ್ರಿ.

"ಅದೇನೋ ನಿಜ ಕಂಡ್ಯ" ಎಂದಳು ಜುಮ್ಮಿ. ಆಗ ಕಾಣಿಸಿಕೊಂಡ ವಾಟಿಸ್ಸೆ.

"ಧರ್ಮಸಿಂಗನ ಸಾವಿನಿಂದ ವೀರಶೈವ ಲಿಂಗಾಯತ್ರ ಜಗಳ ದಲ್ಲಾಯ್ತು ಅಂತ ಮಾಡಿದ್ದೆ, ಅಂಗೇನು ಇಲ್ಲ ತಿರಗ ಹತ್ತಿಗಂಡದೆ" ಎಂದ.

"ಎಲ್ಲಿಗೆ ಬತ್ಲ ಅವುರ ಜಗಳ?" ಎಂದಳು ಜುಮ್ಮಿ.

"ಇನ್ನು ಕ್ಲೈಮ್ಯಾಕ್ಸಿಗೆ ಬಂದಿಲ್ಲ ಕಣಕ್ಕ. ಟಿವಿಲಿ ನೀನು ಲೈವಾಗಿ ನೋಡಬವುದು."

"ಅಂಗರೆ ಟಿವಿಲಿ ಜಗಳನೂ ಹಾಕ್ತರೆ."

"ಆ ಜಗಳ ನೋಡ್ತಾಯಿದ್ರೆ ನನಿಗೆ ಬಸವಣ್ಣನ ಕೊಂದೋರ್‍ಯಾರು ಅಂತ ಗೊತ್ತಾಯ್ತು ಕಣಕ್ಕ."

"ಬಸವಣ್ಣನ ಕೊಂದೋರು ಇನ್ನೂ ಇದ್ದಾರ್ಯೆ?" ಎಂದ ಕಾಳಮಾವ.

"ಊ ದೊಡಪ್ಪ, ಮನಸ್ಸು ವಿಷಯದಲ್ಲಿ ಯಾವ ಸಂತತಿನೂ ನಾಶವಾಗದಿಲ್ಲ. ಇವತ್ತು ಗಾಂಧಿ ಕೊಂದೋರು ಯಂಗೆ ಹೆಚ್ಚಗಂಡವುರೆ ಅಂತೀ. ಅದೇತರ ಬಸವಣ್ಣನ ಓಡಿಸಿಗಂಡೋಗಿ ವಡದು ಹೊಳಿಗಾಕಿದೊರು ಜಾಸ್ತಿಯಾಗ್ಯವುರೆ."

"ಯಾರ್‍ಲ ಅವುರು?"

"ಯಾರು ಲಿಂಗಾಯತರ ಮ್ಯಾಲೆ ತೋಳೇರಿಸಿ ಗಂಡೊಯ್ತರೆ ಅವುರೆ ದೊಡಪ್ಪ. ಅವುರ್‍ಯಂಗವುರೆ ಅಂದ್ರೆ ನಾವು ಟಿವಿ ವಳಗಡೆ ಕುಂತಿದ್ದಿವಿ, ಜನ ನೋಡ್ತ ಅವುರೆ ಅನ್ನೋ ನೆದರಿಲ್ದಂಗೆ ಅಂಗಿ ಬಿಚಗಂಡು ಲಿಂಗಾಯತ್ರ ವಡಿಯಕ್ಕೊಯ್ತರೆ ಅಂದ್ರೆ ಗ್ಯಾರಂಟಿ ಅವುರ ಕಡಿಯವುರೆ ಬಸವಣ್ಣನ್ನ ಕೊಂದಿದ್ದು ಅಂತ ಸಾಬೀತಾಯ್ತು."

"ಅದ್ಯಲ್ಲ ಅಂಗೇಳಕ್ಕೆ ಬರದಿಲ್ಲ ಕಣೊ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನನಿಗ್ಯಲ್ಲ ಗೊತ್ತದೆ. ಈ ವೀರಶೈವರು ತೋಳೇರಿಸಿಗಂಡು ಬಂದ್ರೆ ಲಿಂಗಾಯತ್ರ ವಚನ ಓದಿಕಂಡು ಬತ್ತರೆ. ಅದ್ಕೆ ಇವುರಿಗೆ ಉತ್ತರ ಕೊಡಕ್ಕಾಗದೆ ವಡಿಯಕ್ಕೊಯ್ತರೆ. ಇದರಲ್ಲೆ ಗೊತ್ತಾಯ್ತದೆ ಯಾರು ತಪ್ಪು ಯಾರು ಸರಿ ಅಂತ."

"ಅವುನ್ಯಾರ್ಲ ಸ್ವಾಮಿ ಮಾತೆ ಮಾದೇವಿಗೆ ಏನೋ ಬೋದವುನಂತೆ? ಅದೇನು ಬೋದ?" ಎಂದಳು ಜುಮ್ಮಿ.

"ಸಾಮಾನ್ಯ ಜನಗಳು, ಅಂದ್ರೆ ನಮ್ಮ ಸೀರ ಚಿಗಪ್ಪನಂಥೋರು, ಹೆಂಗಸರಿಗೆ ಏನಂತ ಬೈತರೊ ಅಂಗೆ ಬೋದುಬುಟ್ಟವುನೆ."

"ಸಾಮಿಯಾದೋನು ಅಂಗೆ ಬೋದ್ನೆ?"

"ಸ್ವಾಮಿಯಲ್ಲ ದೊಡಪ್ಪ, ಜಗದ್ಗುರು. ಅವುನು ಅಂದ್ರೆ ಅವುನ ಜಗತ್ತಿಗೆ ಅವುನೇ ಗುರು. ಅಂಥೋನು ವಬ್ಬ ಹೆಣ್ಣುಮಗಳಿಗೆ ನಿಂದ್ಯಲ್ಲ, ನನಿಗೊತ್ತು, ನೀನ್ಯಾವಾಗ್ಲೊ ಯಾರಿಗೋ ಲವ್ವಲ್ಯಟ್ರು ಬರದಿದ್ದೆ, ಅದು ನಂತಾವ ಅದೆ ಅಂದವುನೆ."

"ಅಂಥೋನು ಗುರುವಾಗಲಿಕ್ಕೆ ಯೋಗ್ಯನಲ್ಲ ಬುಡು."

"ಅದ್ಕೆ ಜನ ಅವುನ ಫೋಟೋಗೆ ಬೆಂಕಿ ಹಚ್ಚಿ ಸುಟ್ಟವುರೆ. ಅಂತೂ ಜಗದ್ಗುರುಗಳು ರಾಜಕಾರಣಿಗಳಿಗಿಂತ್ಲೂ ಅತ್ತತ್ತ ಅನ್ನಂಗಾಗ್ಯದ್ರಪ್ಪ."

"ಅದಿರ್‍ಲಿ ಕಣೊ ವಾಟಿಸ್ಸೆ, ಆ ಕುರುಬರ ಸ್ವಾಮಿ ಕುರುಬರಿಗೆ ಬೋದವುನಲ್ಲ ಅದ ಕೇಳಿಸಿಗಂಡ್ಯಾ?"

"ಕೇಳಿಸಿಗಂಡೆ ಕಣೊ ಉಗ್ರಿ. ಅವುನಪ್ಪ ಸ್ವಾಮಿ ಅಂದ್ರೆ. ಆ ಲಾಂಗ್ವೇಜ್ ಇನ್ನು ಮಡಿಕಂಡವುನಲ್ಲ, ಅಪ್ರಿಸಿಯೇಟ್ ಮಾಡಬೇಕು."

"ಅವುನೇನು ಬೋದವುನ್ಲ?"

"ಏನು ಬೋದವುನೆ ಗೊತ್ತೇನಕ್ಕ? ಈಗ ಸೀರ ಚಿಗಪ್ಪನ ವಲಕೆ ಯಾರೋ ಕುರುಬರೋನು ಕುರಿಬುಟ್ಟು ಮೇಯಿಸಿಬುಟ್ಟವುನೆ ಅಂತ ತಿಳಕೊ. ಆಗ ಸೀರ ಚಿಗಪ್ಪ ಏನು ಬೈತನೆ? ಅದ ತಿಳಕಂಬುಡು. ಜಾತಿಯಿಂದ ಹಿಡುದು ಅವ್ವ ಅಪ್ಪ ಹೆಡತಿವರಿಗೂ ಬೈತನಲ್ಲ ಅದೇ ಮಾತ ಕುರುಬರ ಸ್ವಾಮಿ ಕುರುಬರಿಗೆ ಬೋದವುನೆ."

"ಅಂಗರೆ ಸ್ವಾಮಿಗೋಳು ನಮ್ಮಂಗೆ ಆದರೇನ್ಲ?" ಎಂದ ಸೀರ.

"ಆಗಿಲ್ಲ ಚಿಗಪ್ಪ, ಅವುರು ಆಗದಕು ಮದ್ಲ ಯಾವ ಮಾತು ವಳಗಿದ್ವೋ ಅವು ಈಗ ಈಚೆಗೆ ಬಂದವೆ. ಅಷ್ಟೆ."

"ಅಂತೂ ವೀರಶೈವ ಲಿಂಗಾಯತ್ರ ಜಗಳದಲಿ ಜಗದ್ಗುರುಗಳು ಯಂಗವುರೆ ಅಂತ ಗೊತ್ತಾಯ್ತಾ ಅದೆ."


"ವಬ್ಬ ಕುರುಬರ ಸ್ವಾಮಿ ನಮಿಗೂ ಬ್ಯಾರೆ ಧರ್ಮ ಬೇಕು ಅಂದವುನಲ್ಲ, ಹಿಂಗಾದ್ರೆ ಯಂಗ್ಲ?"

"ಯಂಗೂ ಯಿಲ್ಲ, ಈ ವರ್ಸನೂ ಬರಗಾಲ ಮಡುದೆ ಒಂದು ಹದಕ್ಕೆ ಬತ್ತರೆ ತಗೊ." ■


ಚಿತ್ರದುರ್ಗದ ನೆಮ್ಮದಿಗೆ ಬೆಂಕಿ ಇಡಲಿರುವ ಕೇಸರಿ ಸ್ಕೆಚ್‌ಗಳ

ಚಿತ್ರದುರ್ಗದ ನೆಮ್ಮದಿಗೆ ಬೆಂಕಿ ಇಡಲು ಕೇಸರಿ ಸಂಘಟನೆಗಳು ಸಾಲುಸಾಲು ಅಜೆಂಡಾ ಹಾಕಿ ಕೂತಿವೆ. ಮುಂದಿನ ವರ್ಷ, ಹೆಚ್ಚೂಕಮ್ಮಿಯಾದರೆ ಇದೇ ಡಿಸೆಂಬರ್ ವೇಳೆಗೆ ಎಲೆಕ್ಷನ್ ಅಪ್ಪಳಿಸುವ ಸಾಧ್ಯತೆ ಇರೋದ್ರಿಂದ ಹಿಂದೂ ಮತಬ್ಯಾಂಕ್ ಕ್ರೋಢೀಕರಿಸಲು ಹಿಂದೂ ಮಹಾಸಭಾದ ಚೆಡ್ಡಿಗಳು ತರಹೇವಾರಿ ಯೋಜನೆಯೊಂದಿಗೆ ಅಣಿಯಾಗಿದ್ದಾರೆ. ಅವರ ಮೊದಲ ಅಸ್ತ್ರ ಮದಕರಿ ನಾಯಕನ ಪಟ್ಟಾಭಿಷೇಕದ ಆಚರಣೆ. ಆದಾದ ಮೇಲೆ ಗಣಪತಿಯ ದಾಂಧಲೆ ಇದ್ದೇ ಇದೆಯಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಬಿಜೆಪಿಗೆ ಹೇಳಿಕೊಳ್ಳುವಂತಹ ನೆಲೆಯಿಲ್ಲ, ನಾಯಕ ಸಮುದಾಯವೇ ನಿರ್ಣಾಯಕ ಸಂಖ್ಯೆಯಲ್ಲಿರುವ ಇಡೀ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆ. ಇದೀಗ ಅದೇ ನಾಯಕ ಸಮುದಾಯದ ಮೇಲೆ ಕಣ್ಣಿಟ್ಟಿರುವ ಚೆಡ್ಡಿಗಳು ಮದಕರಿ ನಾಯಕನ ನೆಪ ಮಾಡಿಕೊಂಡು ಕೋಮುದಳ್ಳುರಿ ಭುಗಿಲೇಳಿಸಲು ಸಜ್ಜಾಗಿದ್ದಾರೆ. ಅದ್ಯಾವ ಇತಿಹಾಸಕಾರ ಲೆಕ್ಕ ಇಟ್ಟಿದ್ದನೊ, ಅದ್ಯಾವ ಕಾಲದಲ್ಲಿ ನಡೆದುಕೊಂಡು ಬಂದಿತ್ತೋ ಗೊತ್ತಿಲ್ಲ; ನಾಯಕ ಸಮುದಾಯದ ಪಾಳೇಗಾರ ಮದಕರಿ ನಾಯಕನ 263ನೇ ಪಟ್ಟಾಭಿಷೇಕದ ವರ್ಷಾಚರಣೆಗೆ ಸ್ಕೆಚ್ ಹಾಕಿದ್ದಾರೆ. ಅದಕ್ಕೋಸ್ಕರ ಹಿಂದೂ ಮಹಾಸಭಾದ ಸೂರಿನಡಿ 'ರಾಜ ವೀರ ಮದಕರಿ ನಾಯಕ ಗೌರವ ಸಂರಕ್ಷಣಾ ವೇದಿಕೆ' ಹೆಸರಿನ ವೇದಿಕೆ ಹುಟ್ಟುಹಾಕಿ ಅದಕ್ಕೆ ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ನಾಯಕರ ಹುಡುಗ ಮಹಂತೇಶನನ್ನು ಅಧ್ಯಕ್ಷನನ್ನಾಗಿಸಿದ್ದಾರೆ. ಚಿತ್ರದುರ್ಗದ ಸಾಂಸ್ಕೃತಿಕ ಹಿನ್ನೆಲೆ ಗೊತ್ತಿದ್ದ ಎಂತವರಿಗೆ ಆದರೂ ಚುನಾವಣಾ ಸಮಯದಲ್ಲಿ



ಮಾದಾರ ಚೆನ್ನಯ್ಯ


ಸೈಟ್ ಬಾಬು


ಮಹಂತೇಶ್

ಇದ್ದಕ್ಕಿದ್ದಂತೆ ನೆನಪಾದ ಪಟ್ಟಾಭಿಷೇಕದ ಹಕೀಕತ್ತು ಅರ್ಥವಾಗುತ್ತಿದೆ.

ಬಿಸಿಲ ನಾಡಾಗಿದ್ದರೂ, ಬಡತನ ಬೇಗೆಯಿದ್ದರೂ ಒಂದುಕಾಲಕ್ಕೆ ನೆಮ್ಮದಿಯ ಬೀಡಾಗಿತ್ತು ಚಿತ್ರದುರ್ಗ. ಆದರೆ ಗಣಪತಿ ಉತ್ಸವದ ಹೆಸರಲ್ಲಿ ದಾಂಗುಡಿಯಿಟ್ಟ ಚೆಡ್ಡಿಗಳು ನಿಧಾನಕ್ಕೆ ಇಲ್ಲಿನ ಸೌಹಾರ್ದತೆಯ ವಾತಾವರಣವನ್ನೇ ಕದಡಿದರು. ಮುಸ್ಲಿಮರ ವಿರುದ್ಧ ಪ್ರಬಲ ನಾಯಕ ಸಮುದಾಯವನ್ನು ಎತ್ತಿಕಟ್ಟುವುದಕ್ಕೆಂದೇ ನೈಜ ಇತಿಹಾಸದಲ್ಲೇ ಇರದೆ ಅಧ್ಯಾಯವೊಂದನ್ನು ಸೃಷ್ಟಿಸಿ 'ಟಿಪ್ಪೂ ಸುಲ್ತಾನ, ಮದಕರಿ ನಾಯಕನಿಗೆ ವಿಷವಿಟ್ಟಿದ್ದ' ಎಂಬ ಪುಕಾರೆಬ್ಬಿಸಿದರು. ಈಗ ಮದಕರಿ ಪಟ್ಟಾಭಿಷೇಕ ಆಚರಿಸುತ್ತಿರುವುದೂ ಟಿಪ್ಪೂ ಜಯಂತಿಗೆ ಪೈಪೋಟಿ ಕೊಡುವುದಕ್ಕಲ್ಲದೆ ಮತ್ತಾವ ಪುರುಷಾರ್ಥಕ್ಕೂ ಅಲ್ಲ. ಅರೆಬರೆ ತಿಳಿದ ಯುವಕರಲ್ಲಿ, ಅದರಲ್ಲೂ ನಾಯಕ ಜನಾಂಗದ ಯುವಕರಲ್ಲಿ ಮುಸ್ಲಿಂ ದ್ವೇಷವನ್ನು ಹುಟ್ಟುಹಾಕಿ ಕೋಮುದಳ್ಳುರಿ ಹುಟ್ಟುಹಾಕಬೇಕೆನ್ನುವುದೇ ಇದರ ನಿಜವಾದ ಉದ್ದೇಶ. ಆಗಸ್ಟ್ 4ರಂದು ನಡೆಯಲಿರುವ ಈ ಆಚರಣೆಗೆ ಚೆಡ್ಡಿಗಳು ರಣೋತ್ಸಾಹದಲ್ಲಿ ಸಿದ್ಧವಾಗುತ್ತಿರುವುದು ಜನರಲ್ಲಿ ಆತಂಕ ಮೂಡಿಸಿದೆ. ಮದಕರಿ ನಾಯಕ ಒಂದು ಜಾತಿಗೆ ಸೀಮಿತವಾದವನಲ್ಲ, ಆತನ ಆಳ್ವಿಕೆಯಡಿ ಎಲ್ಲಾ ಸಮುದಾಯಗಳಿಗೂ ಪ್ರಾಶಸ್ತ್ಯವಿತ್ತು, ಹಾಗಾಗಿ ಮದಕರಿ ನಾಯಕನ ಹೆಸರಲ್ಲಿ ಇಂಥಾ ವಿಕೃತಿ ನಡೆಸಬಾರದೆಂದು ಪ್ರಜ್ಞಾವಂತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಚೆಡ್ಡಿಗಳಿಗೆ ಅದೆಲ್ಲ ಅರ್ಥವಾಗಬೇಕು. ಅವರಿಗೆ ಬೇಕಿರುವುದು ಕೋಮುಗಲಭೆ ಮತ್ತು ಅದು ಹೊತ್ತುತರುವ




ಹಿಂದೂ ಮಹಾಸಭಾ ಗಣಪತಿ ಮೆರವಣಿಗೆಯ ಉನ್ಮಾದ

ಭೀತಿ ತರುವ ಗಣಪ

ಇದು ಮದಕರಿ ಪಟ್ಟಾಭಿಷೇಕದ ವಿಚಾರ ಗಣಪತಿಯ ನೆಪದಲ್ಲು ಕೋಮು ಕಿತಾಪತಿಗೆ ತಾಲೀಮು ನಡೆಸಿದ್ದಾರೆ. 2006ಕ್ಕೂ ಮುಂಚೆ ಚಿ ಪಾಲಿಗೆ ಗೌರಿ ಗಣೇಶ ಹಬ್ಬವೆಂದರೆ ಖುಷಿ ಆದರೆ ಆದ್ಯಾವಾಗ ಹಿಂದೂ ಮಹಾಸಭಾದ ಜಿತೇಂದ್ರ ಎಂಬಾತ ಮೋಜಿಗಾಗಿ ಗಣ ಕೂರಿಸಿದನೊ ಅವತ್ತಿನಿಂದ ಗಣಪತಿ ಹ ಚಿತ್ರದುರ್ಗ ಬೆವೆತುಹೋಗುತ್ತದೆ. ಹಿಂದೂ ಮ ಗಣಪತಿ ಅಂತಲೇ ಕರೆಸಿಕೊಳ್ಳುವ ಗಣೇಶ ತಾನು ಕೂತ 21 ದಿನವೂ ಆತಂಕವನ್ನು ಹುಟ್ಟಿ ಕೊನೆಯ ದಿನ ಮೆರವಣಿಗೆಯ ನೆಪದಲ್ಲಿ ನಡೆ ರಣೋತ್ಸಾಹ ಅಕ್ಷರಶಃ ಕೋಮುಉತ್ಸವವೇ

ಎಲೆಕ್ಷನ್ ಹತ್ತಿರದಲ್ಲೇ ಇರೋದ್ರಿಂದ ಗಣಪತಿಯ ನೆಪದಲ್ಲಿ ಏನಾದರು ಮಾಡಲೇಬೇಕೆನ್ನುವುದು ಚೆಡ್ಡಿಗಳ ಲೆಕ್ಕಾಚಾರ ಇ ಹಾಗಾಗಿ ಗಣಪತಿ ಕೂರಿಸಲು ಈಗಾಗಲೇ ಬ 20 ಬೈ'ಠಕ್ಕು'ಗಳು ನಡೆದಿವೆ. ದುರ್ಗದ ತುಂಬ ಜಂಡಾ, ಬ್ಯಾನರುಗಳ ಆರ್ಭಟವಿರಬೇಕೆನ್ನುವ ಶುರುವಾಗಿದೆ. ಒಟ್ಟನಲ್ಲಿ ಗಣಪತಿ ಹಬ್ಬದ ಧಾರ್ಮಿಕ ವಿಕೃತ ಹವಾ ಎಬ್ಬಿಸಲು ಕೋಮು ಸನ್ನದ್ಧವಾಗಿದ್ದಾರೆ.

ಅಷ್ಟಕ್ಕೂ ಅದು ಹಿಂದೂ ಮಹಾಸಭಾ ಎಂಬ ಕೇಸರಿ ಗಣಪನೇ ಹೊರತು, ಯಾವ ಸಮು ಕಷ್ಟ ನಿವಾರಕನಂತೂ ಅಲ್ಲ. ದುರಂತವೆಂದರೆ ಮೆದುಳುಗಳ ಇಂತಹ ವಿಕೃತಗಳ ಅನು ನೆರವಾಗೋದು ಶೂದ್ರ ದೇಹಗಳು. ಕೋಮುದಳ್ಳುರಿ ಉದ್ಭವಿಸಿದರೆ ಸುಟ್ಟು ಕರಕಲ ರಕ್ತದ ಮಡುವಿನಲ್ಲಿ ಬಿದ್ದು ವಿಲವಿಲ ಒದ ಕೂಡಾ ಇದೇ ಶೂದ್ರ ದೇಹಗಳು!

ಸೈಟ್ ಸುರೇಶನ ದಂಧೆ

ಹಿಂದೂ ಮಹಾಸಭಾ ಕೂರಿಸುವ ಗಣಪತಿ ಕೋಮುತಲ್ಲಣವನ್ನು ತಂದಿಟ್ಟರೆ ಮತ್ತೊಂ ಖೂಳಬಾಕರಿಗೆ ಭರ್ಜರಿ ಭ್ರಷ್ಟಾಚಾರದ ಆಫರನ್ನೂ ತರುತ್ತಾನೆ. ಅದರ ಪ್ರಧಾನ ಫಲಾನುಭವಿ ವಿಶ್ವ ಪರಿಷತ್‌ನ ಅಧ್ಯಕ್ಷ ಸುರೇಶ್ ಬಾಬು ಅಲಿಯಾ ಬಾಬು. ಈತನಿಗೆ ಸಾಥ್ ನೀಡಲು ವಿಹೆಚ್

ಕುಷ್ಟಗಿ: ದೊಡ್ಡನಗೌಡನ ವಿರುದ್ಧ ಬಯ್ಯಾಪುರನ ಜಾತಿ ಚದುರ



ದೊಡ್ಡನಗೌಡ

ಕುಷ್ಟಗಿಯಲ್ಲಿ ಮುಂಬರುವ ಎಲೆಕ್ಷನ್‌ಗೆ ಜಾತಿ ಪ್ರಯೋಗಗಳು ಜೋರಾಗಿ ಕದಲುತ್ತಿವೆ. ಹಾಲಿ ಶಾಸಕ ಬಿಜೆಪಿಯ ದೊಡ್ಡನಗೌಡ ಪಾಟೀಲನ ಹಿಂದೆ ಆತನ ಇಡೀ ಕುರುಬ ಸಮುದಾಯವೇ ನಿಂತಿದೆ. ಅದಕ್ಕೆ ತಕ್ಕಂತೆ ಜಾತಿರಾಜಕಾರಣ ಮಾಡುತ್ತಿರುವ ದೊಡ್ಡನಗೌಡ ಬೇರೆ ಜಾತಿಗಳಿಗೆ ಕವಡೆ ಕಿಮ್ಮತ್ತು ಕೊಡುತ್ತಿಲ್ಲ, ಹಾಗಾಗಿ ಉಳಿದ ಜಾತಿಗಳೆಲ್ಲ ಒಟ್ಟಾಗಿ ಆತನ ವಿರುದ್ಧ ಸೆಡ್ಡು ಹೊಡೆಯುವ ಸೂಚನೆಗಳು ಕಾಣಿಸಲಾರಂಭಿಸಿದ್ದವು. ಇದರಿಂದ ಎಚ್ಚೆತ್ತುಕೊಂಡ ದೊಡ್ಡನಗೌಡ ತನ್ನ ಜಾತಿವ್ಯಾಮೋಹದಿಂದ ಹೊರಬರದಿದ್ದರೂ ಮಾಜಿ ಶಾಸಕ ಪಂಚಮಸಾಲಿ ಲಿಂಗಾಯತ ಸಮುದಾಯದ ಕೆ.ಶರಣಪ್ಪ ವಕೀಲ ಮತ್ತು ಆತನ ಮಗ ಕೆ.ಮಹೇಶ್‌ನನ್ನು ಮುಂದಿಟ್ಟುಕೊಂಡು ಲಿಂಗಾಯತ ವೋಟ್‌ಗಳ ಒಲೈಕೆಗೆ ಇಳಿದಿದ್ದ. ಅಲ್ಲದೇ ಆಚಾರ ದಿಗ್ಗಂವಿಯನ್ನು ತಾಲೂಕು ಬಿಜೆಪಿ ಅಧ್ಯಕ್ಷನನ್ನಾಗಿ ಮಾಡಿ ಬ್ರಾಹ್ಮಣ ವೋಟ್‌ಗಳಿಗೂ, ಶಶಿಧರ ಕವಲಿಯನ್ನು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿ ಬಣಜಿಗ ವೋಟ್‌ಗಳಿಗೂ ಗಾಳ ಹಾಕಲು ಹವಣಿಸುತ್ತಿದ್ದಾನೆ. ಆದರೆ ದೊಡ್ಡನಗೌಡನ ಜಾತಿವ್ಯಾಮೋಹ ಕಂಡು ರೋಸಿಹೋಗಿರುವ ಇತರೆ ಜಾತಿಗಳು ಅವನನ್ನು ಬೆಂಬಲಿಸೋದು ತೀರಾ ಡೌಟು.

ಹಾಗಂತ ಕಾಂಗ್ರೆಸ್‌ನ ಎದುರಾಳಿ ಅಮರೇಗೌಡ ಬಯ್ಯಾಪುರ ಕೈಕಟ್ಟಿ ಕೂತಿಲ್ಲ, ದೊಡ್ಡನಗೌಡನ ಜಾತಿತಂತ್ರಕ್ಕೆ ತಿರುಮಂತ್ರ ಹಾಕಿದ್ದಾರೆ, ಇತ್ತೀಚೆಗೆ ಇಡಿಯಾಗಿ ತಾಲ್ಲೂಕು ಕಾಂಗ್ರೆಸ್ ಘಟಕವನ್ನು ವಿಸರ್ಜಿಸಿದ ಬಯ್ಯಾಪೂರ ಅಳೆದುತೂಗಿ ಜಾತಿಆಧಾರದಲ್ಲಿ ಮುಂದಡಿ ಇಟ್ಟಿದ್ದಾರೆ. ಅದರಲ್ಲೂ ಕುಷ್ಟಗಿಯ ಮಾಜಿ ಶಾಸಕ ಹಸನಸಾಬ್ ದೋಟಿಹಾಳರ ಮಗ ಲಾಡ್ಲೇ ಮಸ್ತಾಕ್‌ನನ್ನು ತಾಲೂಕು ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷನಾಗಿ ನೇಮಿಸಿರೋದು ನಾಜೂಕಿನ ನಡೆಯಾಗಿದೆ. ಒಂದೆಡೆ ಮುಸ್ಲಿಂ ಮತಗಳನ್ನು ಸೆಳೆಯುವ ತಂತ್ರ ಮಾತ್ರವಲ್ಲದೇ ಮಾಜಿ ಶಾಸಕ ಹಸನಸಾಬ್ ಜೊತೆ ಹಳಸಿಹೋಗಿರುವ ತನ್ನ ಸಂಬಂಧವನ್ನು ಸುಧಾರಿಸಿಕೊಳ್ಳುವ ಹಕೀಕತ್ತೂ ಇದರ ಹಿಂದೆ ಇದೆ. 1999ರಲ್ಲಿ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದ ಹಸನಸಾಬ್‌ರು 2004ರ ಎಲೆಕ್ಷನ್‌ನಲ್ಲಿ ದೊಡ್ಡನಗೌಡನ ವಿರುದ್ಧ ಸೋಲುಂಡಿದ್ದರು.


2008ರ ವೇಳೆಗೆ ಕ್ಷೇತ್ರಗಳ ಮೀಸಲಾತಿ ಮರುವಿಂಗಡಣೆಯಿಂದ ಪಕ್ಕದ ಲಿಂಗಸೂರು ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದರಿಂದ ಅಲ್ಲಿನ ಬಯ್ಯಾಪುರ ಕುಷ್ಟಗಿಗೆ ಬಂದರು. ಹೀಗಾಗಿ ಒಂದೇ ಪಾರ್ಟಿಯ ಬಯ್ಯಾಪುರ, ಹಸನಸಾಬ್ ನಡುವೆ ಶೀತಲಸಮರ ಶುರುವಾಗಿ ಕೊನೆಗೆ ಬಯ್ಯಾಪುರ ಮೇಲುಗೈ ಸಾಧಿಸಿದ್ದರು.


ಆಗಿನಿಂದಲೂ ಹಸನಸಾಬ್‌ಗೆ ಬಯ್ಯಾಪುರ ಮೇಲೆ ಅಸಮಾಧಾನ ಇದ್ದೇ ಇತ್ತು. ಮುಂದಿನ ಎಲೆಕ್ಷನ್‌ನಲ್ಲಿ ಬಿಜೆಪಿಯ ದೊಡ್ಡನಗೌಡ ವಿರುದ್ಧ ಗೆಲ್ಲಬೇಕೆಂದರೆ ಹಸನಸಾಬ್‌ರ ಸಾಥ್ ಬೇಕೆಂಬುದನ್ನು ಮನಗಂಡಿರುವ ಬಯ್ಯಾಪುರ ತಮ್ಮ ನಡುವಿನ ವೈಮನಸ್ಸನ್ನು ತಗ್ಗಿಸಿಕೊಳ್ಳಲು ಇತ್ತೀಚಿನ ದಿನಗಳಲ್ಲಿ ಮುಂದಾಗಿದ್ದರು. ಅದರ ಭಾಗವಾಗಿ ಹಸನ ಸಾಬ್‌ರಿಗೆ ತುಂಗಭದ್ರಾ ಕಾಡಾ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ಕೊಡಿಸಲು ಬಯ್ಯಾಪೂರ ವಿಪರೀತ ಶ್ರಮ ಹಾಕಿದ್ದರು. ಅದು ಸಾಧ್ಯವಾಗಲಿಲ್ಲ, ಆನಂತರ ನಿಗಮ ಮಂಡಳಿ ನೇಮಕಾತಿಯಲ್ಲೂ ದೋಟಿಹಾಳ ಪರ ವಕಾಲತ್ತು ವಹಿಸಿದರು. ಆದರೆ ಬಯ್ಯಾಪುರಗೆ ಅಲ್ಲೂ ಯಶ ದಕ್ಕಲಿಲ್ಲ. ಆದರೆ ತನ್ನ ಪರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ಬಯ್ಯಾಪುರನತ್ತ ಹಸನ್‌ಸಾಬ್‌ರಲ್ಲಿ ಸಾಫ್ಟ್‌ಕಾರ್ನರ್ ಮೂಡಿಸುವಲ್ಲಿ ಆ ಪ್ರಯತ್ನಗಳು ಯಶಸ್ವಿಯಾಗಿದ್ದವು.



ಅಮರೇಗೌಡ ಬಯ್ಯಾಪುರ


ಈಗ ಲಾಡ್ಲೆ ಮಸ್ತಾಕ್‌ನ ನೇಮಕ ಅದನ್ನು ಗಟ್ಟಿಗೊಳಿಸಿದೆ. ಹಾಗಾಗಿ ಮುಸ್ಲಿಂ ಮತಗಳು ಸಾ ಬಯ್ಯಾಪುರನತ್ತ ತಿರುಗಿ ನಿಂತಿವೆ.


ಇನ್ನು ಪಂಚಮಸಾಲಿ ಸಮಾಜದ ದೇ ಬಳೂಟಗಿಯನ್ನು ಕುಷ್ಟಗಿ ಬ್ಲಾಕ್ ಕಾಂಗ್ರೆಸ್ ಕ


ಹಸನ್‌ಸಾಬ್ ದೋಟಿಹಾಳ


ಕೆ. ಶರಣಪ್ಪ


ದೇವೇಂದ್ರಪ್ಪ ಬಳೂಟಗಿ




ಲಾಡ್ಲೆ ಮಸ್ತಕ್

ರ್ಶಿ ವಿಶಲ್, ಪ್ರಭಂಜನ ರೆಡ್ಡಿ, ಭಜರಂಗ ದಳದ ಸಂಚಾಲಕ ಬದರೀನಾಥ ಆಣೆಯಾಗಿರುತ್ತಾರೆ. ಗಣಪತಿ ಲ್ಲಿ ರಾಜಕಾರಣಿಗಳಿಂದ, ಸಿರಿವಂತರಿಂದ, ಮಾರ್ವಾಡಿ ದ ಕಾಂಟ್ರಾಕ್ಟರುಗಳಿಂದ ಸಾಕಷ್ಟು ಸುಲಿಗೆ ಮಾಡುವ ಇದುವರೆಗೆ ಆದಾಯ-ಖರ್ಚಿನ ಬಾಬತ್ತನ್ನೇ ರಿಸಿಲ್ಲ.

ಗೆ ನೋಡಿದರೆ ಸೈಟ್ ಬಾಬು ಯಾವುದೇ ದ ಅನುಯಾಯಿಯಲ್ಲ, ಅವನದೇನಿದ್ದರೂ ರೊಕ್ಕದ . 1980ರಲ್ಲಿ ಇವನ ತಂದೆ ಮುದ್ದಪ್ಪ ಚಿತ್ರದುರ್ಗದ ಸರ್ಕಲ್ ಹತ್ತಿರ ಬಳೆ ಮಾರುತ್ತಿದ್ದರು. ಅಲ್ಲಿ ಕಸ ಕೊಂಡಿದ್ದ ಸುರೇಶ್ ಬಾಬು 1995ರಿಂದ ಕಂಡವರ ಗಳಿಗೆ ಬೇಲಿ ಸುತ್ತುವ ಕಲೆ ಕರಗತ ಮಾಡಿಕೊಂಡು ದ ಪರಿಗೆ ದುರ್ಗವೇ ನಿಬ್ಬೆರಗಾಗಿ ಹೋಗಿದೆ. ಗಳನ್ನು ಲೇಔಟ್ ಸೈಟ್‌ಗಳನ್ನಾಗಿಸಿ ಜಮೀನು ರಿಗೇ ಯಾಮಾರಿಸುವ ಸೈಟ್ ಬಾಬು ಇವತ್ತು ಗೆ ತೂಗುತ್ತಾನೆ. ಇಂತಿಪ್ಪ ಬಾಬು 2011ರಿಂದ ಮಹಾಸಭಾ ಗಣಪತಿಗೆ ವಕ್ಕರಿಸಿಕೊಂಡು ಅಲ್ಲೂ ಕಮಾಯಿ ಕಾಣುತ್ತಿದ್ದಾನೆ.

2011ರಿಂದ ಸೈಟ್‌ಬಾಬು ಹಿಂದೂ ಮಹಾಸಭಾ ಯ ಲೆಕ್ಕಪತ್ರವನ್ನು ಇದುವರೆಗೂ ನೀಡಿಲ್ಲ. 11ರಿಂದ ಇಲ್ಲಿಯವರೆಗೆ ಕೋಟ್ಯಾಂತರ ಲೆಕ್ಕವದು. ರೊಕ್ಕಕ್ಕಿಂತಾ ಖರ್ಚಿನ ಲೆಕ್ಕವೇ ಹೆಚ್ಚಾಗಿರುವಂತೆ ಮಂಡಿಸುವುದರಲ್ಲಿ ಬಾಬು ನಿಸ್ಸೀಮ. ಅಂದಹಾಗೆ, ಹಿಂದೂ ಗಣಪನಿಗೆ ಹಿಂದೂ ಜಾಗರಣಾ ಕೆಯವರೇ ಮುಂದಾಳತ್ವ ವಹಿಸುವುದು ಸಹಜ. 2011ರಿಂದ ಇದಕ್ಕೆ ವಕ್ಕರಿಸಿದ ಬಾಬು ಈ ಟನೆಯವನೇ ಆಗಿರಲಿಲ್ಲ. ಹಾಗಾಗಿ ಕಳೆದ ದಿಂದೀಚೆಗೆ ಸಂಘಟನೆಯಲ್ಲಿ ಬಾಬು ವಿರುದ್ಧ ದನಿಗಳು ವು. ಎಚ್ಚೆತ್ತುಕೊಂಡ ಬಾಬು ಅದ್ಯಾವನ ಕೈಕಾಲು ನೋ ಗೊತ್ತಿಲ್ಲ, ಆರು ತಿಂಗಳ ಹಿಂದಷ್ಟೇ ವಿಹೆಚ್‌ಪಿಗೆ ನಾಗಿ ನೇಮಕಗೊಂಡಿದ್ದಾನೆ. ಅಲ್ಲಿಗೆ ದುರ್ಗದ ಸ್ಥರ ಪಾಲಿಗೆ ಬಾಬುವನ್ನು ಅಧಿಕೃತ ಬ್ಲಾಕ್‌ಮೇಲರ್ ಚೆಡ್ಡಿಗಳು ಅಧಿಕೃತ ಘೋಷಿಸಿದಂತಾಗಿದೆ. ರ್ವಾಡಿಗಳನ್ನು ಬೆದರಿಸಿ ವಸೂಲಿ ಮಾಡುವ ಕಲೆಯಲ್ಲಿ ಗೆ ಅವನೇ ಸಾಟಿ. ಒಟ್ಟಿನಲ್ಲಿ 2006ರಲ್ಲಿ ಜಿತೇಂದ್ರ ನ ಬಾಲಕನಿಂದ ಮೋಜಿಗಾಗಿ ಶುರುವಾದ ಗಣಪ ತ್ತು ದುರ್ಗದ ಪಾಲಿಗೆ ನೆಮ್ಮದಿಯ ಘಾತುಕ, ಸೈಟ್ ಬುನಂತಹ ನಮಕ್‌ಹರಾಮಿಗಳ ಪಾಲಿಗೆ ಖಜಾನೆ. ದು ಅಚ್ಚರಿಯೆಂದರೆ ಈ ಹಿಂದೂ ಮಹಾಸಭಾ ಪತಿಗೆ ಆರೆಸ್ಸೆಸ್ ಕೈಗೊಂಬೆಯಂತಿರುವ ಮಾದಾರ ಸ್ವಾಮಿಯೇ ದಂಡನಾಯಕ. ಎಲ್ಲಾ ಹೈವೇ ಜಾತಿ ಮಠಗಳೂ ಇದರ ಸೂತ್ರಧಾರರು.

■ ಟಿ.ಎನ್. ಷಣ್ಮುಖ

ನ್ನಾಗಿ ಮಾಡಿರುವ ಬಯ್ಯಾಪುರ ದೊಡ್ಡನಗೌಡನಿಗೆ ಏಟನ್ನೇ ಕೊಟ್ಟಿದ್ದಾರೆ. 1999ರಲ್ಲಿ ಜೆಡಿಯುನಿಂದ ನಸಭಾ ಚುನಾವಣೆಗೆ ಸ್ಪರ್ಧಿಸಲು ಸಜ್ಜಾಗಿದ್ದ ಂದ್ರಪ್ಪನಿಗೆ ರಾಯರೆಡ್ಡಿಯ ಕೈ ಚಳಕದಿಂದ ಟಿಕೆಟ್ ಪ್ಪಿ.

ಷ್ಟಗಿ ತಾಲೂಕಿನ ರಾಜಕಾರಣದಲ್ಲಿ ಕಳೆದ 30 ಗಳಿಂದ ಸಕ್ರಿಯವಾಗಿರುವ ದೇವೇಂದ್ರಪ್ಪ ಪಂಚಮಸಾಲಿ ಗಳನ್ನು ಸೆಳೆಯುವ ಚಾರ್ಮ್ ಉಳಿಸಿಕೊಂಡಿದ್ದಾರೆ. ಈ ರಾಷ್ಟ್ರೀಯ ಹಣ್ಣು ಬೆಳೆಗಾರರ ಸಂಘದ ಧ್ಯಕ್ಷರಾಗಿ ಅವರು ಹಲವು ರೈತಪರ ಹೋರಾಟಗಳಲ್ಲಿ ಂಡು ಚಲಾವಣೆಯಲ್ಲಿದ್ದಾರೆ. ಅವರನ್ನು ಬ್ಲಾಕ್ ವನ್ನಾಗಿಸಿರೋದು ವರ್ಕ್‌ಔಟ್ ಆಗಲಿದೆ.

ದೇರೀತಿ, ತಾಲ್ಲೂಕಿನಲ್ಲಿ ಮೂವತ್ತು ಸಾವಿರಕ್ಕೂ ಇರುವ ವಾಲ್ಮೀಕಿ ಓಟುಗಳನ್ನು ವಶಪಡಿಸಿಕೊಳ್ಳುವ ಗಿ ಚೆಂದಪ್ಪ ತಳವಾರನನ್ನು ಹನುಮಸಾಗರ ಬ್ಲಾಕ್ ಸ್ ಕಮಿಟಿಗೆ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿರುವ ಪೂರ ಸಿರ್ಧಾರ ಕೈಹಿಡಿಯಲಿದೆ.


ಕೆಂದರೆ 1990ರಲ್ಲಿ ಜಿಲ್ಲಾ ಪಂಚಾಯತಿ ಗಿ ಪ್ರವರ್ಧಮಾನಕ್ಕೆ ಬಂದ ಚೆಂದಪ್ಪ 1994ರ ಸಭಾ ಚುನಾವಣೆಯಲ್ಲಿ ಬಂಗಾರಪ್ಪನ ಕೆಸಿಪಿ ದ ಸ್ಪರ್ಧಿಸಿ 10 ಸಾವಿರ ಮತ ಗಳಿಸಿ ಗಮನ ದ್ದ. ಇಂದಿಗೂ ವಾಲ್ಮೀಕಿ ಸಮಾಜದಲ್ಲಿ ಚೆಂದಪ್ಪ ಪ ಮಾತಿಗೆ ಒಂದು ತೂಕವಿದೆ. ಇನ್ನು ಮಹೇಶ ರರನ್ನು ತಾಲೂಕು ಯುವ ಕಾಂಗ್ರೆಸ್‌ನ ರ್ಶಿಯನ್ನಾಗಿ ನೇಮಕ ಮಾಡಿರುವ ಬಯ್ಯಾಪುರ ಮತಗಳ ಮೇಲೆ ಕಣ್ಣಿಟ್ಟಿದ್ದಾರೆ.

ಲ್ಲಿ ಸ್ವಜಾತಿ ಕುರುಡು ಪ್ರೇಮದಲ್ಲಿ ಇತರೆ ವಿರೋಧ ಕಟ್ಟಿಕೊಂಡಿರುವ ದೊಡ್ಡನಗೌಡ ಗೆ ತಕ್ಕ ಪಾಠ ಕಲಿಸಲು ಸರಿಯಾದ ಜಾತಿ ವೇ ಬಯ್ಯಾಪುರ ರೆಡಿ ಮಾಡಿಕೊಂಡಿದ್ದಾರೆ. ದೊಡ್ಡನಗೌಡನ ನಿದ್ದೆಗೆಡುವಂತೆ ಮಾಡಿರೋದು

■ ವರದಿಗಾರ

ಕೊಡಗು: ನಾಡದ್ರೋಹಿ ನಾಚಪ್ಪನ ಸುಳ್ಳಿನ ಕಂತೆಗಳು!


ಕೊಡಗಿನ ಸುಳ್ಳುಗಾರ ನಾಚಪ್ಪ ಮತ್ತೆ ಸುದ್ದಿಗೆ ಬಂದಿದ್ದಾನೆ. ಅದು ಸದ್ಯ ಭುಗಿಲೆದ್ದಿರುವ ನಾಡಧ್ವಜದ ವಿಚಾರದಲ್ಲಿ, ಕರ್ನಾಟಕ ಸರ್ಕಾರ ಪ್ರಸ್ತಾಪಿಸಿರುವ ರಾಜ್ಯದ ಪ್ರತ್ಯೇಕ ಧ್ವಜದ ವಿಚಾರ ಮುಂದಿಟ್ಟುಕೊಂಡು ಪ್ರತ್ಯೇಕ ಧ್ವಜ ಸಂವಿಧಾನ ಬಾಹಿರವಾದುದು ಎಂದಿದ್ದಾನಲ್ಲದೆ, ಕರ್ನಾಟಕ ಬೇಕಿದ್ದರೆ ಪ್ರತ್ಯೇಕ ರಾಷ್ಟ್ರವಾಗಿ ಹೋಗಲಿ ಎಂಬ ಕಾಂಟ್ರೊವರ್ಸಿ ಹೇಳಿಕೆ ನೀಡಿದ್ದಾನೆ. ಸಾಲದ್ದಕ್ಕೆ ರಾಜ್ಯ ಸರ್ಕಾರದ ಈ ರಾಷ್ಟ್ರವಿರೋಧಿ ಕೃತ್ಯದ ಶಮನಕ್ಕೆ ಕೊಡಗು, ತುಳುನಾಡು ಸೇರಿದಂತೆ, ಐದು ವಿಭಿನ್ನ ಪ್ರಾಂತ್ಯಗಳನ್ನು ವಿಂಗಡಿಸಿ, ಪ್ರತ್ಯೇಕ ರಾಜ್ಯದ ಘೋಷಣೆ ಮಾಡಬೇಕೆಂಬ ಪುಕ್ಕಟೆ ಸಲಹೆ ಕೊಟ್ಟು 'ಕೊಚ್ಚೆಯಲ್ಲಿ ಮೀನು ಹಿಡಿಯುವ' ಕಾರ್ಯಕ್ಕೆ ಮುಂದಾಗಿದ್ದಾನೆ. ಕರ್ನಾಟಕ ಸರ್ಕಾರವು ಪ್ರತ್ಯೇಕ ದೇಶದ ವಿಚಾರವನ್ನಾಗಲಿ, ಒಕ್ಕೂಟ ವ್ಯವಸ್ಥೆಯಿಂದ ಹೊರಹೋಗುವ ವಿಚಾರವನ್ನಾಗಲಿ ಯಾವುದೇ ಸಂದರ್ಭದಲ್ಲಿ ಪ್ರಸ್ತಾಪಿಸಿಲ್ಲ, ಅಂತದ್ದರಲ್ಲಿ ಈ ನಾಚಪ್ಪ ಕರ್ನಾಟಕ ಪ್ರತ್ಯೇಕ ರಾಷ್ಟ್ರವಾಗಲಿ ಎನ್ನುತ್ತಾನಲ್ಲ, ಅವನದು ದೇಶದ ಐಕ್ಯತೆ ಧಕ್ಕೆ ತರುವಂತಹ ಸ್ಟೇಟ್‌ಮೆಂಟ್ ಅಲ್ಲವೇ? ಚೆಡ್ಡಿಗಳೇಕೆ ಅವನ ವಿರುದ್ಧ ತಿರುಗಿಬೀಳದೆ ಮುಗುಮ್ಮಾಗಿದ್ದಾರೆ. ಕರ್ನಾಟಕ ರಾಜ್ಯದ ವಿರುದ್ಧ ಇಂತಹ ಚಿಲ್ಲರೆ ಹೇಳಿಕೆಗಳನ್ನು ನೀಡುತ್ತಾ, ತನ್ನ ಸಂಘಟನೆಯನ್ನು ಜೀವಂತವಾಗಿ ಇಟ್ಟುಕೊಂಡು ಚಂದಾ ವಸೂಲಿ ಮಾಡುವ ನಾಚಪ್ಪನ ಅಸಲಿಯತ್ತು ಕೊಡಗಿನ ಮತ್ತು ಕರ್ನಾಟಕದ ಜನತೆ ತಿಳಿಯಬೇಕಾಗಿದೆ. ತನ್ನ ವಿರುದ್ಧ ಮಾತನಾಡಿದವರ ಬಗ್ಗೆ ಮತ್ತು ಬರೆದವರ ಬಗ್ಗೆ ನಕ್ಸಲೀಯ ಹಣೆಪಟ್ಟಿ ಕಟ್ಟುವ ಚಟವಿರುವ ಎನ್.ಯು. ನಾಚಪ್ಪ, ಜನರನ್ನು ತನ್ನತ್ತ ಆಕರ್ಷಿಸಲು ಹೂಡಿದ ಹೊಸ ನಾಟಕವಷ್ಟೆ ಇದು.


ಬ್ರಿಜೇಶ್

ಕೊಡಗು ಜಿಲ್ಲೆ ಪ್ರತ್ಯೇಕ ರಾಜ್ಯವಾಗಬೇಕು ಎಂದು 1990ರ ವೇಳೆ ಹೋರಾಟ ಆರಂಭಿಸಿ, ಕೊನೆಗೆ 'ಕೊಡವ ಜನಾಂಗಕ್ಕೆ' ಸ್ವಾಯತ್ತ ನಾಡು ಆಗಬೇಕು ಎಂದು ರೂಪಾಂತರಗೊಂಡು ತನ್ನ ಮೂಲಸ್ವರೂಪ ಹಾಗೂ ಆರಂಭದ ಬೆಂಬಲ ಕಳೆದುಕೊಂಡಿರುವ 'ಕೊಡವ ನ್ಯಾಷನಲ್ ಕೌನ್ಸಿಲ್'ನ ಸ್ವಯಂಘೋಷಿತ ಸರ್ವಸ್ವೂ ಆಗಿರುವ ಎನ್.ಯು. ನಾಚಪ್ಪ ಮಹಾನ್ ಸುಳ್ಳುಗಾರ ಎನ್ನುವುದಕ್ಕೆ ಹಲವು ನಿದರ್ಶನಗಳಿವೆ.

ಕೈಯಲ್ಲಿ ಯಾವ ಉದ್ಯೋಗವೂ ಇಲ್ಲದ ಅಪ್ಪಟ ನಿರುದ್ಯೋಗಿ ನಾಚಪ್ಪ ಆರಂಭದಲ್ಲಿ ಲಿವಾಕ್ ಅರ್ಥಾತ್ ಲಿಬರೇಷನ್ ವಾರಿಯರ್ಸ್ ಆಫ್ ಕೊಡಗು ಸಂಘಟನೆ ಹುಟ್ಟುಹಾಕಿ ಚಲಾವಣೆಗೆ ಬಂದವನು. ಅಲ್ಲಿ ಸಾಕಷ್ಟು ಅವಾಂತರ ಮಾಡಿಕೊಂಡ ಆತ ತನ್ನ ಸಂಘಟನೆಯ ಹೆಸರನ್ನು ಕೆ.ಆರ್.ಎಂ.ಎಂ. (ಕೊಡಗು ರಾಜ್ಯ ಮುಕ್ತಿ ಮೋರ್ಚಾ) ಎಂದು ಬದಲಿಸಿಕೊಂಡು ಸದ್ಯ ಕೊಡವ ನ್ಯಾಷನಲ್ ಕೌನ್ಸಿಲ್ ಎಂಬ ಸಂಘಟನೆಯಲ್ಲಿ ಭಾನ್ಗಡಿಗಳನ್ನು ನಡೆಸುತ್ತಿದ್ದಾನೆ. ಈ ಸಂಘಟನೆಯಲ್ಲಿ ಕೆಲವೇ ಕೆಲವು ಖಾಯಂ ಚೇಲಾಗಳನ್ನು ಗುಡ್ಡೆ ಹಾಕಿಕೊಂಡಿರುವ ಆತ ವಸೂಲಿಯನ್ನೇ ದಂಧೆ ಮಾಡಿಕೊಂಡಿರುವುದು ರಹಸ್ಯವೇನಲ್ಲ. ತನ್ನ ವಸೂಲಿ ಕಾರ್ಯಕ್ಕೆ ಅನುಕೂಲವಾಗುವಂತೆ ಆಗೊಮ್ಮೆ, ಈಗೊಮ್ಮೆ ಸುಳ್ಳುಗಳ ವಿವಾದ ಎಬ್ಬಿಸುವುದು ನಾಚಪ್ಪನ ಖಯಾಲಿ.

ಕೊಡಗಿನಿಂದ ಕರ್ನಾಟಕಕ್ಕೆ 600 ಕೋಟಿ ರೂಪಾಯಿ ಆದಾಯವಿದೆ, ಅದನ್ನು ರಾಜ್ಯ ಸರ್ಕಾರ ಕೊಡಗಿಗೇ ವ್ಯಯಿಸಬೇಕು ಎಂಬ ಮೊದಲ ಸುಳ್ಳಿನ ಮೂಲಕ ಕೊಡವರ ಗಮನಸೆಳೆದ ಆತ ಇಲ್ಲಿಯವರೆಗೂ 600 ಕೋಟಿ ಆದಾಯಕ್ಕೆ ವಿವರಣೆ ನೀಡಿಲ್ಲ, ನಂತರ, ಕೊಡಗು ಹಿಂದೆ 'ಸಿ' ರಾಜ್ಯವಾಗಿತ್ತು, ಒಂದಷ್ಟು ಷರತ್ತುಗಳನ್ನು ವಿಧಿಸಿಯೇ ವಿಲೀನವಾದದ್ದು, ಆ ಷರತ್ತುಗಳ ಪಾಲನೆಯಾಗಿಲ್ಲ ಎಂಬ ಇನ್ನೊಂದು ಹಸಿ ಸುಳ್ಳನ್ನು ಉದುರಿಸಿದ್ದ. ಆ ಷರತ್ತುಗಳು ಯಾವುವು ಅಂತ ಇದುವರೆಗೆ ಬಾಯ್ಬಿಟ್ಟು ಹೇಳಿಲ್ಲ. ಇನ್ನೊಮ್ಮೆ, ಕೊಡಗು ಪ್ರತ್ಯೇಕ ರಾಜ್ಯವಾದರೆ ಕಾವೇರಿ ನದಿವಿವಾದದಲ್ಲಿ ಕೊಡಗು ರಾಜ್ಯಕ್ಕೆ 55 ಟಿ.ಎಂ.ಸಿ. ನೀರು ಸಿಗುತ್ತೆ, ಅದನ್ನು ಮಾರಾಟ ಮಾಡಿಕೊಂಡು ಕೊಡಗನ್ನು ಸ್ವರ್ಗವನ್ನಾಗಿಸಬಹುದು ಎಂಬ ಡೋಂಗಿ ಮಾತು ತೇಲಿಬಿಟ್ಟಿದ್ದ. ಅದ್ಯಾವುದೋ ನೆಪ ಮಾಡಿಕೊಂಡು


ನಾಚಪ್ಪ

ರಾಷ್ಟ್ರಪತಿಗಳನ್ನು ಭೇಟಿಯಾದ ಫೋಟೊ ತೋರಿಸಿ, ಪತ್ರಿಕೆಗಳಲ್ಲಿ ಪ್ರಿಂಟಾಕಿಸಿ ಪ್ರತ್ಯೇಕ ರಾಜ್ಯಕ್ಕೆ ರಾಷ್ಟ್ರಪತಿಗಳ ಸಮ್ಮತಿ ದೊರಕಿದೆ, ಇನ್ನೇನು ಘೋಷಣೆಯಾಗಲಿದೆ ಎಂಬ ಪುಕಾರೆಬ್ಬಿಸಿದ್ದ. ಆವಾಗಂತು ತಾನೇ ಮುಖ್ಯಮಂತ್ರಿ ಎಂಬ ಉಮೇದಿನಲ್ಲಿ ತನ್ನದೇ ಮಂತ್ರಿಮಂಡಲದ ಪಟ್ಟಿ ತಯಾರಿಸಿಕೊಂಡು ಅಲೆದಾಡಿದ್ದನ್ನು ನೆನಪಿಸಿಕೊಂಡು ಜನ ಈಗಲೂ ನಗಾಡುತ್ತಾರೆ. ವಿಚಿತ್ರವೆಂದರೆ ಆತನ ಕಲ್ಪಿತ ಮಂತ್ರಿಮಂಡಲದಲ್ಲಿ ಸ್ಥಾನ ಪಡೆದಿದ್ದ ಮಂದಿ ಅದನ್ನು ನಂಬಿ ಒಂದಷ್ಟು ದಿನ ನಾಚಪ್ಪನಿಗೆ ಕಪ್ಪ ಒಪ್ಪಿಸಿದ್ದೂ ಉಂಟು. ಕೆಲವರು ಈಗಲೂ ಸಲ್ಲಿಸುತ್ತಿದ್ದಾರೆ ಎಂಬ ವರದಿಯಿದೆ.


ವಿಶಾಲ ಮೈಸೂರು ರಚನೆಯ ಸಂದರ್ಭದಲ್ಲಿ ಕೊಡಗು 'ಸಿ' ರಾಜ್ಯವಾಗಿದ್ದದ್ದು ವಾಸ್ತವಾಂಶ. ಆ ಸಂದರ್ಭದಲ್ಲಿ ಕೊಡಗು ರಾಜ್ಯದ ವಿಲೀನದ ವಿಚಾರವನ್ನೇ ಮುಂದಿಟ್ಟುಕೊಂಡು ಚುನಾವಣೆ ನಡೆದಿತ್ತು. ಕೊಡಗು ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಕಾಂಗ್ರೆಸ್ ಪಕ್ಷದ ಸಿ.ಎಂ. ಪೂಣಚ್ಚನವರು. ನಂತರ ಇವರು ಭಾರತದ ರೈಲ್ವೆ ಸಚಿವರಾಗಿಯೂ, ಹಲವು ರಾಜ್ಯಗಳ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದರು. ಕೊಡಗನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳಬೇಕು ಎಂಬ ವಿಚಾರವನ್ನು ತನ್ನ ಪ್ರಣಾಳಿಕೆಯಾಗಿಸಿದ್ದ ಕೊಡಗಿನ ಪ್ರತ್ಯೇಕತಾವಾದಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಪಂದ್ಯಂಡ ಬೆಳ್ಯಪ್ಪನವರು ಕಾಂಗ್ರೆಸ್‌ಗೆ ವಿರುದ್ಧವಾಗಿ ತನ್ನದೇ ಒಂದು ಪಕ್ಷವನ್ನು ಕಣಕ್ಕೆ ಇಳಿಸಿದ್ದರು. 24 ಶಾಸಕರಿದ್ದ ಕೊಡಗು ರಾಜ್ಯದ ಚುನಾವಣೆಯಲ್ಲಿ 15 ಶಾಸಕರು ಕಾಂಗ್ರೆಸ್ ಪಕ್ಷದಿಂದಲೂ, 9 ಶಾಸಕರು ಪ್ರತ್ಯೇಕ ಪಕ್ಷದಿಂದಲೂ ಆಯ್ಕೆಯಾಗಿದ್ದರು. ಹಾಗಾಗಿ ಕೊಡಗು ರಾಜ್ಯವನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳುವುದಕ್ಕೆ ಆ ಕಾಲಘಟ್ಟದಲ್ಲಿಯೇ ಸೋಲು ಉಂಟಾಗಿತ್ತು.

ನಂತರ ಕೊಡಗನ್ನು ಕರ್ನಾಟಕದಲ್ಲಿ ವಿಲೀನಗೊಳಿಸುವ ವಿಚಾರ ಕೊಡಗು ವಿಧಾನಸಭೆಯಲ್ಲಿ ಪ್ರಸ್ತಾಪವಾದಾಗ, 15 ಕಾಂಗ್ರೆಸಿಗರಲ್ಲದೆ, 7 ಮಂದಿ ಪ್ರತ್ಯೇಕ ಪಕ್ಷದವರೂ ಬೆಂಬಲ ಸೂಚಿಸಿದ್ದರು. ಹಾಗೆ ಒಟ್ಟು 22 ಮಂದಿ ಶಾಸಕರ ಬೆಂಬಲದಿಂದಲೇ ಕೊಡಗು ರಾಜ್ಯ ಕರ್ನಾಟಕದಲ್ಲಿ ವಿಲೀನವಾದದ್ದು. ಯಾವ ಪಂದ್ಯಂಡ ಬೆಳ್ಯಪ್ಪ ಪ್ರತ್ಯೇಕ ಪಕ್ಷವನ್ನು ಸ್ಥಾಪಿಸಿದ್ದರೋ ಅವರು ಕೂಡ ವಿಲೀನದ ಪರವಾಗಿ ಮತ ಚಲಾಯಿಸಿದ್ದು ವಿಶೇಷ. ಕೆ.ಪಿ. ಕರುಂಬಯ್ಯ ಮತ್ತು ಪಿ.ಸಿ. ಉತ್ತಪ್ಪ ಎಂಬುವವರು ಮಾತ್ರ ವಿಲೀನದ ವಿರುದ್ಧ ಮತ ಚಲಾಯಿಸಿದ್ದರು. ಪರಿಣಾಮವಾಗಿ 1956ರಲ್ಲಿ 'ವಿಶಾಲ ಮೈಸೂರು ರಾಜ್ಯ' ಉದಯವಾಗಿತ್ತು, ಆ ಕಾಲಘಟ್ಟದಲ್ಲಿಯೇ ವಿಲೀನಕ್ಕೆ ಕೊಂಚ ವಿರೋಧವಿತ್ತಾದರು ಜನಾಭಿಪ್ರಾಯಾಗುವಲ್ಲಿ ಅದು ಸೋತಿತ್ತು, ಭಾಷಾವಾರು ಪ್ರಾಂತ್ಯ ರಚನೆಯ ವಿಚಾರ ಆಗಿನ ಪ್ರಧಾನಿ ಜವಹರಲಾಲ್ ನೆಹರು ಮತ್ತು ಗೃಹಮಂತ್ರಿ ಸರ್ದಾರ್ ವಲ್ಲಭಾಯಿ ಪಟೇಲರ ಕಲ್ಪನೆಯಾಗಿತ್ತು, ಪ್ರತಿರೋಧಿಸಿದ ಹೈದರಾಬಾದ್ ಹಾಗೂ ಕಾಶ್ಮೀರವನ್ನು ಕೂಡ ಅವರು ಭಾರತ ಒಕ್ಕೂಟದಲ್ಲಿ ಸೇರಿಸಿಕೊಂಡಿದ್ದರು. ಸಿ.ಎಂ. ಪೂಣಚ್ಚ ಆಗ ನಿಮಿತ್ತ ಮಾತ್ರವಾಗಿದ್ದರು. ಅದನ್ನು ಜನರೂ ಸ್ವೀಕರಿಸಿದ್ದರು. ಯಾವ 'ಸಿ' ರಾಜ್ಯಗಳ ಭಾಷೆ ಮತ್ತು ಸಂಸ್ಕೃತಿ ನೆರೆ ರಾಜ್ಯದ ಜೊತೆಯಲ್ಲಿ ಹೊಂದಾಣಿಕೆಯಾಗುತ್ತಿತ್ತೋ ಅಂತಹ ರಾಜ್ಯಗಳು ವಿಲೀನವಾಗಬೇಕು ಎಂಬುದಾಗಿ ಅಖಿಲ ಭಾರತ ಮುಖ್ಯಮಂತ್ರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿತ್ತು, ಇಂಥಾ ಇತಿಹಾಸವೇ ಗೊತ್ತಿರದ ನಾಚಪ್ಪ ನಾಚಿಕೆಬಿಟ್ಟು ಮುಂಖಾನುಮುಂಖ ಸುಳ್ಳುಗಳನ್ನು ಮಂಗುತ್ತಿದ್ದಾನೆ.

ಆಗ ಕೊಡಗಿನ ಸಿಎಂ ಆಗಿದ್ದ ಪೂಣಚ್ಚನವರು ಕೊಡಗನ್ನು ಮೈಸೂರಿನಲ್ಲಿ ವಿಲೀನಗೊಳಿಸುವ ಮೂಲಕ ಅಪಾರವಾದ ಆಸ್ತಿ ಹೊಂದಿದರು ಮತ್ತು ಅಧಿಕಾರ ಪಡೆದರು ಎಂಬ ಆರೋಪವನ್ನೂ ನಾಚಪ್ಪ ಮಾಡಿದ್ದ. ಇದಕ್ಕೆ ತಕ್ಕ ಜವಾಬು ಕೊಟ್ಟಿರುವ ಪೂಣಚ್ಚನವರ ಪುತ್ರ ಕರ್ನಲ್ ಸಿ.ಪಿ. ಮುತ್ತಣ್ಣ 'ಕೊಡಗು ಮೈಸೂರಿನಲ್ಲಿ ವಿಲೀನವಾಗಲು ಕಾರಣಗಳು ಏನು ಎಂಬುದರ ಬಗ್ಗೆ ತಮ್ಮ ಬಳಿ ದಾಖಲೆ ಇದೆ. ಆತನ ರೀತಿಯಲ್ಲಿ ಜನರಿಂದ ವಂತಿಗೆಯನ್ನು ಸಂಗ್ರಹಿಸಿಕೊಂಡು ಬದುಕುವ ಕುಟುಂಬ ನಮ್ಮದಲ್ಲ' ಎಂದು ಜಾಡಿಸಿದ್ದರು. ವಿಪರ್ಯಾಸವೆಂದರೆ ಇದೇ ಮುತ್ತಣ್ಣನ ಬಳಿ ನಾಚಪ್ಪ ಒಂದಾನೊಂದು ಕಾಲದಲ್ಲಿ ಕೊಡವ ಟ್ರಂಪ್‌ಕಾರ್ಡ್ ಬಳಸಿ 3,000 ರೂಪಾಯಿ ದೇಣಿಗೆ ಗಿಂಜಿಕೊಂಡು ಬಂದಿದ್ದ ತಮ್ಮ ತಂದೆಯನ್ನು ದೂಷಿಸಿದ್ದಾಗಿ ಅವರು ನಾಚಪ್ಪನನ್ನು ಜಾಡಿಸಿದ್ದಾರೆಯೇ ವಿನಾ ಸೈದ್ಧಾಂತಿಕವಾಗಿ ಅವರೂ ಕೂಡ ನಾಚಪ್ಪನ ಚಿಂತನೆಗಳನ್ನೇ ಹೊಂದಿದ್ದಾರೆ ಎಂಬುದಕ್ಕೆ ಇದೇ ಸಾಕ್ಷಿ.

ನಾಚಪ್ಪನ ಗೂರ್ಖಾಗಿರಿ

ಕೊಡಗು ಜಿಲ್ಲೆಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕು, ಕೊಡಗಿಗೆ ಸ್ವಾಯತ್ತತೆ ನೀಡಬೇಕೆಂದು ಇತ್ತೀಚೆಗೆ ತನ್ನ 'ಸಿ.ಎನ್.ಸಿ.' ಸಂಘಟನೆ ವತಿಯಿಂದ ರಾಷ್ಟ್ರಪತಿಗಳಿಗೆ ಮತ್ತು ಪ್ರಧಾನಿಗಳಿಗೆ ಮನವಿ ನೀಡಿದ್ದ ನಾಚಪ್ಪ ಅದನ್ನು ಸಮರ್ಥಿಸಿಕೊಳ್ಳಲು ಗೂರ್ಖಾ ಜನಾಂಗವನ್ನು ಬಳಸಿಕೊಂಡಿದ್ದ, ಗೂರ್ಖಾ ಜನಾಂಗಕ್ಕೂ, ತಮಗೂ ಸಾಮ್ಯತೆ ಇದೆ ಅನ್ನೋದು ಅವನ ವಾದ. ಎರಡು ಜನಾಂಗವೂ ಮಾರ್ಷಲ್ ರೇಸ್‌ಗೆ ಸೇರಿದೆ; ಕೊಡವ ಜನಾಂಗಕ್ಕೆ ಕೋವಿಯನ್ನು ಹೊಂದುವ ಹಕ್ಕು ಇದ್ದರೆ, ಗೂರ್ಖಾ ಜನಾಂಗಕ್ಕೆ ಕುಕ್ರಿ ಹೊಂದುವ ಹಕ್ಕು ಇದೆ; ಗೂರ್ಖಾ ಎಂದರೆ ಮನೆ ಕಾಯುವವರು ಮತ್ತು ಊರು ಕಾಯುವವರು ಎಂಬ ಸಾರ್ವತ್ರಿಕ ಅಭಿಪ್ರಾಯವಿದೆ ಅದೇ ರೀತಿ ಕೊಡವ ಜನಾಂಗದವರು ಸೈನ್ಯದಲ್ಲಿದ್ದುಕೊಂಡು ದೇಶ ಕಾಯುತ್ತಾರೆ; ಎಂಬೆಲ್ಲಾ ಅರ್ಥವಿಲ್ಲದ ತರ್ಕಗಳನ್ನು ಮುಂದಿಟ್ಟು ಬಂದಿದ್ದ, ಅವನ ಪ್ರಯತ್ನಕ್ಕೆ ಬೆಂಬಲ ಸಿಗುವ ಬದಲು ಅತ್ಯಂತ ಘನತೆಯಿಂದ ಬದುಕುತ್ತಿರುವ ತಮ್ಮನ್ನು ಗೂರ್ಖಾಗಳಿಗೆ ಹೋಲಿಸಿ ಅವಮಾನ ಮಾಡಿದ್ದಾನೆ ಅಂತ ಕೊಡವರು ರೊಚ್ಚಿಗೆದ್ದಿದ್ದರು!


ವೀಣಾ

ಇನ್ನು ನಾಚಪ್ಪ ತನ್ನ ಮನವಿಯುದ್ದಕ್ಕೂ 'ಕೊಡವ ಟ್ರೈಬ್ಸ್' ಎಂದು ಹೇಳಿಕೊಂಡಿದ್ದಾನೆ. ಕೊಡವರು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನಾಂಗವಲ್ಲ, ಆದರೆ ನಾಚಪ್ಪ ಸ್ವಯಂ ಮೀಸಲಾತಿ ಘೋಷಿಸಿಕೊಂಡಿದ್ದಾನೆ. ಆ ಪಟ್ಟಿಗೆ ತಮ್ಮನ್ನು ಸೇರಿಸಬೇಕು ಎಂದು ನಾಚಪ್ಪ ಕೇಂದ್ರ ಸರಕಾರಕ್ಕೆ ಈ ಹಿಂದೆ ಮನವಿ ನೀಡಿದ್ದ ಅದನ್ನು ಆಧರಿಸಿ ಗಣತಿ ಮಾಡಲು ಕೇಂದ್ರ ಸರಕಾರ ಆದೇಶ ನೀಡಿತ್ತು, ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡವ ಜನಾಂಗದವರು ಪರಿಶಿಷ್ಟ ವರ್ಗಕ್ಕೆ ಸೇರಿದವರಲ್ಲ ಹಾಗಾಗಿ ಗಣತಿಯ ಅಗತ್ಯವಿಲ್ಲ ಎಂಬ ಆದೇಶ ನೀಡಿದ್ದರು.

ಮನವಿಯಲ್ಲಿ 1952ರಿಂದ 1956ರವರೆಗೆ ಕೊಡಗು 'ಸಿ' ರಾಜ್ಯವಾಗಿತ್ತು, ಉತ್ತಮವಾದ ಆಡಳಿತವಿತ್ತು, ಪಶ್ಚಿಮ ಬಂಗಾಳ ಗೂರ್ಖಾಗಳನ್ನು ಶೋಷಿಸಿದಂತೆ ಕರ್ನಾಟಕವು ಕೊಡವರನ್ನು ಶೋಷಣೆ ಮಾಡಿದೆ, ಗೂರ್ಖಾಗಳೂ 1980ರಲ್ಲಿ ಶಸ್ತ್ರಾಸ್ತ್ರ ಹಿಡಿದು ಹೋರಾಡಿದರೆ ತಾವು ಶಾಂತಿಯುತವಾಗಿ ಹೋರಾಟ ಮಾಡುತ್ತಿದ್ದೇವೆ ಎಂಬ ಅಪ್ಪಟ ನಾಡದ್ರೋಹಿ ಹೇಳಿಕೆ ಗೀಚಿದ್ದಾನೆ. ಅಸಲಿಗೆ ನಾಚಪ್ಪ ಲಿವಾಕ್ ಸಂಘಟನೆಯನ್ನು ಆರಂಭಿಸಿದ್ದೇ ಎಲ್.ಟಿ.ಟಿ.ಇ. ಮಾದರಿಯಲ್ಲಿ, ಆ ವೇಳೆಯಲ್ಲಿ ಕೊಡಗಿನ ಒಂದು ಭಾಗದಲ್ಲಿ ಶಸ್ತ್ರಾಸ್ತ್ರ ತರಬೇತಿ ನೀಡಲಾಗುತ್ತಿದೆ ಎಂಬ ಮಾಹಿತಿ ಗುಪ್ತಚರ ಇಲಾಖೆಗೆ ತಲುಪಿತ್ತು, ಪ್ರತ್ಯೇಕತೆಯ ಹೋರಾಟ ಎಂದರೆ ರೋಲ್‌ಕಾಲ್ ನಡೆಸುವುದು ಎಂದೇ ಭಾವಿಸಿದ್ದ ನಾಚಪ್ಪ ಕೊಡಗಿನ ಗೋಣಿಕೊಪ್ಪಲಿನಲ್ಲಿ ಗೂಂಡಾಗಿರಿಯ ಮೂಲಕ ಅಂಗಡಿ ಮಳಿಗೆಯೊಂದನ್ನು ತೆರವುಗೊಳಿಸಲು ಹೋಗಿ, ಪೊಲೀಸರಿಂದ ಗೂಸಾ ತಿಂದಿದ್ದೇ ಅಲ್ಲದೆ, ಕುಶಾಲನಗರದಲ್ಲಿ ಪ್ರತ್ಯೇಕತೆಯ ವಿರುದ್ಧ ಹೋರಾಟ ಮಾಡುತ್ತಿದ್ದ ಷಣ್ಮುಗಂ ಎಂಬ ವ್ಯಕ್ತಿಯನ್ನು ಗುಂಡಿಕ್ಕಿ ಕೊಲೆ ಮಾಡಿದ ಪ್ರಕರಣದಲ್ಲಿ ಆರೋಪಿಯಾಗಿದ್ದ. ಪೊಲೀಸರು ಮತ್ತು ನ್ಯಾಯಾಲಯದ ಭಯದಿಂದ ಇನ್ಮುಂದೆ ಗಾಂಧಿ ಮಾರ್ಗದಲ್ಲಿ ಹೋರಾಟ ನಡೆಸುತ್ತೇನೆಂದು ಘೋಷಿಸಿಕೊಂಡ ನಾಚಪ್ಪ ಇವತ್ತು ತನ್ನ ಹೇಡಿತನವನ್ನೇ ಶಾಂತಿಯುತ ಹೋರಾಟ ಎಂಬುದಾಗಿ ಬಿಂಬಿಸಿಕೊಳ್ಳಲು ಹೊರಟಿದ್ದಾನೆ. ಇತ್ತೀಚಿನ ದಿನಗಳಲ್ಲಿ ನವೆಂಬರ್ 1ರಂದು ನವದೆಹಲಿಯಲ್ಲಿ ಕರ್ನಾಟಕದ ವಿರುದ್ಧ ಪ್ರತಿಭಟನೆ ಮಾಡುವ ಈತನ ಮೇಲೆ ಕರ್ನಾಟಕ ರಕ್ಷಕರ ದೃಷ್ಟಿ ಬೀಳದಿರುವುದೇ ಅಚ್ಚರಿ!

■ ಬಿ.ಎನ್. ಮನು ಶೆಣೈ

ಮಾತೆ ಮಹಾದೇವಿ: ಯಡ್ಡಿ ಲಿಂಗಾಯತ ಅ



ಸಂದರ್ಶನ

■ ರಾ. ಸೋಮನಾಥ್

ಏನೋ ಹೊಸ ನಿರೀಕ್ಷೆ. ಎಂಥದೋ ಭರವಸೆ. ಎಪ್ಪತ್ತೂರರ ಈ ಇಳಿವಯಸ್ಸಿನಲ್ಲೂ ಕ್ಷೀಣಿಸದ ಹಳೆಯ ಹಠ. ಗೆಲ್ಲಲಾಗದ ಯಾವುದೋ ಯುದ್ಧವೊಂದರ ಪೂರ್ವಸಜ್ಜಿಕೆಯಂತಿತ್ತು ರಾಜಾಜಿನಗರದ ಬಸವಮಂಟಪ. ವಿಶಾಲಹಾಲ್‌ನ ನಾಲ್ಕೂ ಗೋಡೆಗಳ ಶೋಕೇಸಿನ ತುಂಬೆಲ್ಲ ಲಿಂಗಾನಂದ ಅಪ್ಪಾಜಿಯವರು ಬರೆದ ಪುಸ್ತಕಗಳು, ಅವರ ಭಾಷಣದ ಸಿಡಿಗಳು, ಸುತ್ತ ಶಿವಶರಣರ ಕೈಂಕರ್ಯದ ವಿವಿಧ ರೇಖಾಚಿತ್ರಿಕೆಗಳು ಮತ್ತು ನಡುವಿದ್ದ ಪೀಠದಲ್ಲಿ ಮಾತಾಜಿ. ಅಂದರೆ ಮಾತೆ ಮಹಾದೇವಿಯವರು. ಜೂನ್ 14ರ ವೀರಶೈವ ಮಹಾಸಭಾದ ಅಭಿನಂದನಾ ಸಮಾರಂಭದಲ್ಲಿ 'ಪ್ರತ್ಯೇಕ ಧರ್ಮ ಘೋಷಣೆ'ಗೆ ಮುಖ್ಯಮಂತ್ರಿ ಸಿದ್ದಾಮಯ್ಯನವರು ಕೊಟ್ಟ ಸರ್ಕಾರಿ ಸಮರ್ಥನೆಯೆಂಬುದು ಹೇಗೆ ಇಡೀ ಕರ್ನಾಟಕದ ಲಿಂಗಾಯತ ಸಮೂಹವನ್ನು ಸ್ಥಿತ್ಯಂತರವೊಂದರ ಅಂಚಿಗೆ ತಂದು ನಿಲ್ಲಿಸಿದೆಯೆಂಬುದಕ್ಕೆ ಮಾತೆ ಮಹಾದೇವಿಯವರೇ ಪುರಾವೆಯಂತಿದ್ದರು. ಜುಲೈ 11ರಂದು ಬೀದರ್‌ನಲ್ಲಿ ಅವರ ಸ್ವತಂತ್ರ ಧರ್ಮದ ರ್‍ಯಾಲಿಗೆ ಸೇರಿದ್ದು ಬರೋಬ್ಬರಿ ಒಂದು ಲಕ್ಷ ಮಂದಿ ಲಿಂಗಾಯತರು. ಬೇರೆಲ್ಲ ಮಠಾಧೀಶರು, ಪೀಠಾಧಿಪತಿಗಳು ತಂತಮ್ಮದೇ ಪ್ರತಿಷ್ಠೆ, ಲೆಕ್ಕಾಚಾರಗಳಲ್ಲಿ ಮುಳುಗಿದ್ದರೆ ಮಾತೆ ಮಹಾದೇವಿಯವರ ಮಾತುಗಳಲ್ಲೇ ಸ್ಪಷ್ಟತೆ, ಛಲ ಮತ್ತು ಹೋರಾಟದ ಹುಮ್ಮಸ್ಸು ಗೋಚರವಾಯಿತು....

ನೋಡಿ... ನಿಮ್ಮ ಸಂಪಾದಕರಿದ್ದಾರಲ್ಲ; ಗೌರಿ ಲಂಕೇಶ್ ಅವರ ತಂದೆ ಪಿ.ಲಂಕೇಶ್‌ರು ಬದುಕಿದ್ದಾಗಲೂ ನನ್ನನ್ನು ಟೀಕಿಸಿದ್ದುಂಟು. ಆದರೆ ಲಿಂಗಾಯತ ಧರ್ಮದೆಡೆಗಿನ ನನ್ನ ಬದ್ಧತೆಯನ್ನಾಗಲಿ ವೈದಿಕಶಾಹಿಯ ವಿರುದ್ಧದ ನನ್ನ ಹೋರಾಟವನ್ನಾಗಲಿ ಯಾವತ್ತಿಗೂ ಲಂಕೇಶರು ಪ್ರಶ್ನಿಸಲಿಲ್ಲ, ಈಗಲೂ ಅಷ್ಟೇ...

** ಬೇರೆಲ್ಲ ಮಠಾಧೀಶರಿಗೆ ಏಕೆ ನಿಮ್ಮ ಮೇಲೆ ಅಷ್ಟೊಂದು ಅಸಹನೆ? ಕನಿಷ್ಠ ನಿಮ್ಮ ಬದ್ಧತೆ ಮತ್ತು ಹೋರಾಟವನ್ನಾದರೂ ಗೌರವಿಸಬೇಕಿತ್ತಲ್ಲವೆ?*

- ಇದು ನಿಮ್ಮ ಪ್ರಶ್ನೆಯಷ್ಟೇ ಅಲ್ಲ, ಕರ್ನಾಟಕದ ಪ್ರತಿಯೊಬ್ಬ ಪ್ರಜ್ಞಾವಂತರ ಪ್ರಶ್ನೆ ಕೂಡ. ಅನೇಕ ಮಂದಿ ಮಠಾಧೀಶರು, ಜಗದ್ಗುರುಗಳಿಗೆ ನನ್ನ ಬದ್ಧತೆಯ ನಿಷ್ಠೂರತೆ ಮತ್ತು ಹೋರಾಟದ ನೇರವಂತಿಕೆಯನ್ನು ಸಹಿಸಲಾಗುತ್ತಿಲ್ಲ, ನಾನು ಈಗಲೂ ಅದನ್ನೇ ಹೇಳುತ್ತಿದ್ದೇನೆ. ವೀರಶೈವ ಮಹಾಸಭಾದವರು ಈಗ ಮನವಿ, ಹೋರಾಟದ ಬಗ್ಗೆ ಮಾತಾಡುತ್ತಿದ್ದಾರೆ ನಿಜ. ನಾವು ಪ್ರತ್ಯೇಕ ಧರ್ಮವನ್ನು ಅಕ್ಷರಶಃ ಆಚರಣೆಗೆ ತಂದು ಯಾವ ಕಾಲವಾಯಿತು? ಲಿಂಗಾನಂದ ಅಪ್ಪಾಜಿಯವರು 1960ಕ್ಕೂ ಮೊದಲೇ ಸ್ವತಂತ್ರ ಧರ್ಮದ ಪರಿಕಲ್ಪನೆ ಕೊಟ್ಟವರು. ನನ್ನ ಬಗ್ಗೆ ಅದಷ್ಟೇ ಮಂದಿ ಮಠಾಧೀಶರು, ಜಗದ್ಗುರುಗಳಿಗೆ ಏನೇ ಅಸಹನೆಯಿದ್ದರೂ ವೈದಿಕಶಾಹಿ ಅಮಾನವೀಯತೆಯ ವಿರುದ್ಧ ಬಸವಣ್ಣನವರಿಗಿದ್ದ ಸಿಟ್ಟಿನ ಕಣದಷ್ಟಾದರೂ ಸಿಟ್ಟಿದ್ದಿದ್ದೇ ಆಗಿದ್ದರೆ ನನ್ನ ಮೇಲಿನ ಅಸಹನೆಗಿಂತಲೂ ಸ್ವತಂತ್ರ ಧರ್ಮದ ಅನಿವಾರ್ಯತೆಯ ಪ್ರಶ್ನೆಯೇ ಮುಖ್ಯವೆನಿಸಬೇಕಿತ್ತಲ್ಲವೆ?

** ಈ ನಿಟ್ಟಿನಲ್ಲಿ ಲಿಂಗಾಯತ ಮಠಾಧೀಶರೂ ಸೇರಿದಂತೆ ಒಂದು ಜಾತಿಯಾಗಿ ಲಿಂಗಾಯತ ಸಮೂಹ ಆತ್ಮವಂಚನೆಗೆ ಬಿದ್ದು ವೈದಿಕಶಾಹಿ ವ್ಯವಸ್ಥೆಯಲ್ಲಿ ಜೀರ್ಣಗೊಂಡಿದೆ ಎಂದೇ ಅರ್ಥವೆ?*

- ನೋಡಿ ಲಿಂಗಾಯತರೇನೂ ಮೇಲೆ ಬಿದ್ದು ಬಿಜೆಪಿ ಸೇರಲಿಲ್ಲ, ಅದು ಕಾಂಗ್ರೆಸ್ ತಂದಿಟ್ಟ ಅನಿವಾರ್ಯತೆ. ಬೇರೆ ಬೇರೆ ಆಯೋಗಗಳನ್ನು, ಕಾಯ್ದೆ ಕಾನೂನುಗಳನ್ನು ತಂದು ಲಿಂಗಾಯತರನ್ನು ದಮನ ಮಾಡಿಕೊಂಡೇ ಬಂದರು. ಅದೆಷ್ಟು ಅಂತ ಸಹಿಸೋದು. ಆ ಹೊತ್ತಿಗೆ ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಇದ್ದದ್ದು ಜನತಾದಳ ಮಾತ್ರ. ಅದೂ ತನ್ನ ಅಸ್ತಿತ್ವ ಕಳೆದುಕೊಂಡ ನಿರ್ವೀರ್ಯವಾದ ಮೇಲೆ ಉಳಿದದ್ದು ಬಿಜೆಪಿಯೊಂದೇ. ಬಲವಾದ ಪ್ರಾದೇಶಿಕ ಪಕ್ಷವೊಂದು ಇಲ್ಲಿದ್ದಿದ್ದರೆ ಲಿಂಗಾಯತರೇಕೆ ಬಿಜೆಪಿಯನ್ನು ಅವಲಂಬಿಸುತ್ತಿದ್ದರು? ಬಿಜೆಪಿಯನ್ನು ರಾಜಕೀಯವಾಗಿ ಬೆಂಬಲಿಸಿದ ಮಾತ್ರಕ್ಕೆ ಲಿಂಗಾಯತರೆಲ್ಲ ವೈದಿಕಶಾಹಿಯನ್ನಾಗಲಿ, ಬ್ರಾಹ್ಮಣಶಾಹಿಯನ್ನಾಗಲಿ ಬೆಂಬಲಿಸಿದಂತೇನಲ್ಲ....

** ಈಗ ನೋಡಿ ಖುದ್ದು ಯಡಿಯೂರಪ್ಪನವರೇ ಬಿಜೆಪಿ ರಾಜ್ಯಾಧ್ಯಕ್ಷನಾಗಿ ಪ್ರತ್ಯೇಕ ಧರ್ಮದ ಬೇಡಿಕೆಯನ್ನು ವಿರೋಧಿಸುತ್ತಿದ್ದಾರಲ್ಲ?*

- ಯಡಿಯೂರಪ್ಪ ಹುಟ್ಟಿನಿಂದಷ್ಟೇ ಲಿಂಗಾಯತ. ವ್ಯಕ್ತಿತ್ವದಿಂದ ಮಾನಸಿಕವಾಗಿ ಆತ ವೈದಿಕ. ಇಂಥವರು ಲಿಂಗಾಯತರಲ್ಲಿ ತುಂಬಾ ಜನ ಇದ್ದಾರೆ. ಯಡಿಯೂರಪ್ಪ ಯಜ್ಞ ಯಾಗಾದಿ, ಹೋಮಹವನಗಳು ಮಾಟಮಂತ್ರದಲ್ಲಿ ತೊಡಗಿರುವುದು ರಹಸ್ಯವೇನಲ್ಲ, ಈ ಬಗ್ಗೆ ಪತ್ರಿಕೆ, ಸಾಮಾಜಿಕ ಜಾಲತಾಣಗಳಲ್ಲೇ ಸಾಕಷ್ಟು ಫೋಟೋಗಳು ವರದಿಗಳು ಬಂದಿವೆ. ಆತ ಲಿಂಗಾಯತನಲ್ಲ ಎಂದಮೇಲೆ ವೈದಿಕನಾಗಿ ಆತನಿಗೆ ಲಿಂಗಾಯತರ ಮೇಲೆ ಯಾವುದೇ ಅಧಿಕಾರವಿಲ್ಲ.

** ಆದರೂ ಲಿಂಗಾಯತ ಸಮೂಹ ಬಿಜೆಪಿ, ಆರ್‌ಎಸ್‌ಎಸ್, ಸಂಘ ಪರಿವಾರದ ಜೊತೆ ಕೈಜೋಡಿಸುವುದು ಆಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ ಬಸವಣ್ಣನಿಗೆ, ಮಾನವೀಯತೆಗೆ ದ್ರೋಹ ಬಗೆದಂತಲ್ಲವೆ?*



- ನಿಮ್ಮ ಮಾತನ್ನು ಒಪ್ಪುತ್ತೇನೆ. ಲಿಂಗಾಯತನಾದವನು ಯಾವುದೇ ಕಾರಣಕ್ಕೂ ವೈದಿಕಶಾಹಿ ಜೊತೆ ಕೈಜೋಡಿಸುವುದು ಮಾನವೀಯತೆಗೆ ಮಾತ್ರವಲ್ಲ, ಬಸವಧರ್ಮಕ್ಕೂ ದ್ರೋಹ ಬಗೆದಂತೆಯೇ. ಆದರೆ ಪರ್ಯಾಯವೆಲ್ಲಿದೆ ನೀವೇ ಹೇಳಿ. ಆಂಧ್ರದಲ್ಲಾಗಲಿ, ತಮಿಳುನಾಡಿನಲ್ಲಾಗಲಿ ಪ್ರಾದೇಶಿಕ ಪಕ್ಷಗಳು ತಲೆಎತ್ತಿ ನಿಲ್ಲಲು ಇದೇ ಕಾರಣವಾಯಿತು. ಎಷ್ಟೋ ಮಂದಿ ಲಿಂಗಾಯತ ನಾಯಕರಿಗೆ ಬಿಜೆಪಿಯಲ್ಲಿರುವುದು ಇಷ್ಟವಿಲ್ಲ, ಬಿಜೆಪಿಯದು ಬ್ರಾಹ್ಮಣಶಾಹಿ ಎಂಬ ಸ್ಪಷ್ಟ ತಿಳಿವಳಿಕೆ ಅವರಿಗಿದೆ. ಆದರೂ ಉಸಿರುಗಟ್ಟಿಕೊಂಡು ಬಿಜೆಪಿಯಲ್ಲಿದ್ದಾರೆ. ಪರ್ಯಾಯ ಮಾರ್ಗವಿದ್ದಿದ್ದರೆ ಅವರ್‍ಯಾರೂ ಬಿಜೆಪಿಯಲ್ಲಿರುತ್ತಿರಲಿಲ್ಲ.

** ಈಗ ಸಿದ್ದರಾಮಯ್ಯ ಲಿಂಗಾಯತರನ್ನು ದಮನಿಸುತ್ತಿದ್ದಾರೆಂದು ನಿಮಗನಿಸುತ್ತಾ?*

- ಇಲ್ಲ, ಸಿದ್ದರಾಮಯ್ಯ ಲಿಂಗಾಯತ ವಿರೋಧಿಯಲ್ಲ, ಬಸವ ಜಯಂತಿಯಂದೇ ಅವರು ಪ್ರಮಾಣವಚನ ಸ್ವೀಕರಿಸಿದ್ದು, ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿಯ ಹೆಸರಿಟ್ಟದ್ದು, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರ ಕಡ್ಡಾಯಗೊಳಿಸಿದ್ದು ಮತ್ತು ಈಗ ಸ್ವತಂತ್ರ ಧರ್ಮದ ಬೇಡಿಕೆಯನ್ನು ಬೆಂಬಲಿಸುತ್ತಿರುವುದು ಅವರ ಮಾನವೀಯತೆ, ಬಸವಣ್ಣ ಮತ್ತು ಲಿಂಗಾಯತರ ಬಗೆಗಿರುವ ಗೌರವವನ್ನು ಸೂಚಿಸುತ್ತದೆ. ಸ್ವತಃ ಲಿಂಗಾಯತರಾಗಿದ್ದೂ ಯಾರೇ ಮುಖ್ಯಮಂತ್ರಿಗಳು ಮಾಡದ್ದನ್ನು ಸಿದ್ದರಾಮಯ್ಯ ಮಾಡಿದ್ದಾರೆ. ಲಿಂಗಾಯತರು ಅವರಿಗೆ ಕೃತಜ್ಞರಾಗಿದ್ದಾರೆ.



** ಯಡಿಯೂರಪ್ಪ ಮೊದಲಿನಿಂದಲೂ ನಿಮ್ಮ ಅನುಯಾಯಿಯಲ್ಲವೆ? ಹಾಗಿದ್ದೂ ಪ್ರತ್ಯೇಕ ಧರ್ಮದ ನಿಮ್ಮ ಹೋರಾಟದ ವಿರುದ್ಧ ನಿಂತಿದ್ದೇಕೆ?*

- ಯಡಿಯೂರಪ್ಪ ನನ್ನ ಅನುಯಾಯಿಯಾಗಲಿ ಭಕ್ತರಾಗಲಿ ಅಲ್ಲ, ಅವರು ಸಿದ್ದಗಂಗೆಯ ಪರಮ ಭಕ್ತ. ಇತ್ತೀಚೆಗೆ ನನ್ನ ಆರೋಗ್ಯ ತೀರಾ ಹದಗೆಟ್ಟು ನಾನು ಕೊಲಂಬಿಯಾ ಆಸ್ಪತ್ರೆಗೆ ದಾಖಲಾಗಿದ್ದೆ, ಆಗ ಆಸ್ಪತ್ರೆಗೆ ಬಂದು ನನ್ನ ಆರೋಗ್ಯ ವಿಚಾರಿಸಿಕೊಂಡು ಹೋದರಷ್ಟೇ. ಅದು ಬಿಟ್ಟರೆ ನಮಗೂ ಅವರಿಗೂ ಯಾವತ್ತೂ ಯಾವುದೇ ಸಂಬಂಧವಿರಲಿಲ್ಲ.

** ಸದ್ಯ ತಾವೇನು ಸ್ವತಂತ್ರ ಧರ್ಮಕ್ಕಾಗಿ ಬೀದಿಗಿಳಿದಿದ್ದೀರೋ, ಕೇಂದ್ರದಲ್ಲಿ ಕಟ್ಟರ್ ವೈದಿಕಶಾಹಿ, ಬ್ರಾಹ್ಮಣಶಾಹಿ ಮೋದಿ ಸರ್ಕಾರವಿದೆಯಲ್ಲ; ಹೇಗೆ ಸಾಧ್ಯ?*

- ಮೊದಲು ರಾಜ್ಯ ಸರ್ಕಾರದಿಂದ ನಿರ್ಣಯವಾಗಲಿ ನೋಡೋಣ. ಈಗಲೇ ದುಸ್ಸಾಧ್ಯವೆಂದು ಭಾವಿಸೋದು ಬೇಡ. ರಾಜ್ಯ ಸರ್ಕಾರದಿಂದ ಮೊದಲು ಶಿಫಾರಸ್ಸು ಹೋಗಲಿ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮೂರ್‍ನಾಲ್ಕು ಬಾರಿ ಮನವಿ ಕೊಟ್ಟಿದ್ದೀವಿ.

** ಅದು ಶಾಮನೂರು ನೇತೃತ್ವದ ವೀರಶೈವ ಮಹಾಸಭಾದವರು ಕೊಟ್ಟ ಮನವಿಯೇ ಹೊರತು ತಾವು ಕೊಟ್ಟಿದ್ದಲ್ಲ?*

- ಇಲ್ಲ ನಾವೂ ಕೊಟ್ಟಿದ್ದೀವಿ. 2013ರಲ್ಲಿ ದೆಹಲಿಯ ಜಂತರ್‌ಮಂತರ್‌ನಲ್ಲಿ ನಾವು ಲಿಂಗಾಯತ ಧರ್ಮ ಮಹಾಸಭಾ ವತಿಯಿಂದ ಸಮ್ಮೇಳನ ಮಾಡಿದ್ದೆವು. ಆಗ ರೆಹಮಾನ್ ಖಾನರು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದರು. ದಿಗ್ವಿಜಯ್‌ಸಿಂಗ್ ಕೂಡ ನಮ್ಮ ಬೇಡಿಕೆಯನ್ನು ಬಹಳ ಮೆಚ್ಚಿಕೊಂಡರು. ಅಮಿತ್ ಶಾ ಈಗೇನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೋ ಅವರೂ ಸಹ ಅವತ್ತು ನಮ್ಮ ಬೇಡಿಕೆಯನ್ನು ಬಹಳ ಮೆಚ್ಚಿಕೊಂಡು ನಮ್ಮ ಜೈನಧರ್ಮಕ್ಕೆ ಏನು ಪ್ರತ್ಯೇಕ ಧರ್ಮದ ಸ್ಥಾನಮಾನ ಸಿಕ್ಕಿದೆಯೋ ಅದು ನಿಮಗೂ ಸಿಗಬೇಕು ಅಂದಿದ್ದರು.

** ಅಮಿತ್ ಶಾ ಜೈನರೇ...?*

- ಹೌದು. ನಾವೂ ಅವರನ್ನು ಬ್ರಾಹ್ಮಣರು ಅಂದುಕೊಂಡಿದ್ದೆವು. ಮೊನ್ನೆ ಗೊತ್ತಾಯಿತು ಅವರು ಜೈನರು ಅಂತ.

** ಇಷ್ಟೆಲ್ಲಾ ಹಿರಿಯರು ಒಪ್ಪಿಕೊಂಡ ಮೇಲೂ ಪ್ರತ್ಯೇಕ ಧರ್ಮಕ್ಕೇನು ತೊಂದರೆ?*

- ಅವತ್ತು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ರೆಹಮಾನ್ ಖಾನರು ಇದನ್ನು ಸಚಿವ ಸಂಪುಟದಲ್ಲಿಟ್ಟು ಖಂಡಿತ ನಿರ್ಣಯ ಮಾಡ್ತೀವಿ ಅಂದಿದ್ದರು. ಇನ್ನೇನು ಕ್ಯಾಬಿನೆಟ್ ಮೀಟಿಂಗ್‌ನಲ್ಲಿಟ್ಟು ಸ್ವತಂತ್ರ ಧರ್ಮದ ಸ್ಥಾನಮಾನ ಕಲ್ಪಿಸಬೇಕೆನ್ನುವಷ್ಟರಲ್ಲಿ ಅದರ ಮರುದಿನವೇ ಚುನಾವಣೆಯ ಘೋಷಣೆಯಾಯಿತು. ದಿಗ್ವಿಜಯ್‌ಸಿಂಗ್ ಸೇರಿದಂತೆ ಅನೇಕರು ಅವತ್ತು ಚುನಾವಣಾ ನೀತಿಸಂಹಿತೆ ನಮ್ಮ ಕೈಕಟ್ಟಿ ಹಾಕಿತೆಂದು ತುಂಬಾ ಬೇಸರ ಮಾಡಿಕೊಂಡರು. ನೀವು ಇನ್ನೂ ಬೇಗ ಬಂದಿದ್ದರೆ ಖಂಡಿತಾ 'ಸ್ವತಂತ್ರ ಧರ್ಮ' ಸಾಧ್ಯವಾಗುತ್ತಿತ್ತು ಅಂತಲೂ ನೊಂದುಕೊಂಡರು.

** ಆದರೆ ಈಗಿರುವುದು ಕಾಂಗ್ರೆಸ್ ಸರ್ಕಾರ ಅಲ್ಲವಲ್ಲ? ಪಕ್ಕಾ ಹಿಂದೂತ್ವವಾದಿ ಪ್ರಭುತ್ವ, ಮೋದಿ ಅಮಿತ್ ಶಾರಂಥ ಉಗ್ರ ವೈದಿಕರಿರುವಾಗ ಹಿಂದೂ ಧರ್ಮದಿಂದ ಪ್ರತ್ಯೇಕವಾಗಲು ಬಿಡುವುದುಂಟೆ?*

- ನೋಡೀ... ಮೋದಿ ಎಷ್ಟೇ ಬಿಜೆಪಿ, ಹಿಂದೂತ್ವದ ಪ್ರತಿಪಾದಕರೆಂದರೂ ಬಿಜೆಪಿ, ಆರ್‌ಎಸ್‌ಎಸ್‌ನ ಪ್ರತಿಯೊಂದನ್ನೂ ಪಾಲಿಸುತ್ತಿಲ್ಲ, ಅವರು ವಿಚಾರ... ಸಂಘಪರಿವಾರದ ಸಿದ್ಧಾಂತವನ್ನು ಮಕ್ಕ... ಪ್ರತಿಪಾದಿಸುತ್ತಿಲ್ಲ ಅನ್ನುವುದೇ ನಮ್ಮ ಆಶಾವಾದ... ಎಲ್ಲಾ ಲಿಂಗಾಯತ ಸ್ವಾಮಿಗಳು ಒಟ್ಟಾಗಿ... ಮೋದಿಯವರನ್ನಾಗಲಿ, ಅಮಿತ್ ಶಾರನ್ನಾಗಲಿ ಒಪ್ಪಿ... ಕಷ್ಟವೇನಲ್ಲ.

** ಆದರೆ ನಿಮ್ಮ ಜೊತೆ ಮಿಕ್ಕ ಮಠಾಧೀ... ಕೈಜೋಡಿಸಬೇಕಲ್ಲ?*

- ಈಗ ಅನೇಕ ಗುರುಗಳೂ ಸ್ವಾಮಿಗಳೂ... ಕೊಡುತ್ತಿದ್ದಾರಲ್ಲ! ನಾಗನೂರು ರುದ್ರಾಕ್ಷಿ ಮಠದ ... ಸ್ವಾಮಿಗಳು, ಗದುಗಿನ ತೋಂಟದಾರ್ಯರು, ಬ... ಮೃತ್ಯುಂಜಯ ಸ್ವಾಮಿಗಳು ಇತ್ಯಾದಿಯೆಲ್ಲ... ಹೇಳುತ್ತಿದ್ದರು. ಈಗ ಧೈರ್ಯವಾಗಿ ಹೇಳಿಕೆ ಕೊಡು... ಆಗಸ್ಟ್ 22ಕ್ಕೆ ಬೆಳಗಾವಿಯಲ್ಲಿ ಈ ಕುರಿತಂತೆ... ಸಮಾವೇಶ ಮಾಡುತ್ತಿದ್ದೇವೆ.

** ಆದರೆ ಈ ಸ್ವಾಮಿಗಳೆಲ್ಲ ಅನೇಕ ವಿಷ... ತಮ್ಮ ಜೊತೆ ಭಿನ್ನಾಭಿಪ್ರಾಯ ಹೊಂದಿ... ಮಾತಾಜೀ...?*

- ನೋಡಿ, ನಮ್ಮಲ್ಲೇನಾಗಿದೆಯೆಂದರೆ, ಪ್ರತಿಯೊ... ತಮ್ಮ ವೈಯಕ್ತಿಕ ಪ್ರತಿಷ್ಠೆಗಾಗಿ ಹೊಡೆದಾಡುತ್ತಿದ... ಹೊರತು ಸಮಷ್ಟಿಗಾಗಿ ಒಟ್ಟಾಗಬೇಕೆಂಬ ಪ್ರ... ಅದೇ ಬಂದಿರೋದು ದೊಡ್ಡ ತಪ್ಪು, ಕ್ರೈಸ್ತರಿಗೇ... ತೊಂದರೆ ಬಂದರೆ ಅವರು ಪ್ರೊಟೆಸ್ಟಂಟು ಕ್ಯಾಥ... ಎಂಬುದನ್ನು ಮರೆತು ಒಂದಾಗ... ಮುಸ್ಲಿಮರಿಗೇನಾದರೂ ಸಮಸ್ಯೆಯಾದರೆ ಅವರು ... ಸುನ್ನಿ ಎಂಬುದನ್ನು ಮರೆತು ಹೋರಾಟಕ್ಕಿಳಿ... ಆದರೆ ನಮ್ಮ ಸಮಾಜದಲ್ಲಿ ವೈಯಕ್ತಿಕ ಪ್ರತಿ... ದೊಡ್ಡದು ಮಾಡುತ್ತಿದ್ದಾರೆ. ಇದು ದುರಂತ... ನಾವೆಲ್ಲರೂ ಸೇರಿಕೊಂಡೇ ಲಿಂಗಾಯತ ಸಮನ್ವಯ... ಮಾಡುತ್ತಿದ್ದೇವೆ.

** ಇದಕ್ಕೆ ಎಲ್ಲರೂ ಸಹಮತಿಸಬೇಕಲ್ಲ...!*

- ಬಸವ ಕೇಂದ್ರ, ಬಸವ ಸೇನೆ, ಬಸವ... ಇತ್ಯಾದಿ ಸಂಘಟನೆಗಳು ಸೇರಿದಂತೆ ಎ... ಆಹ್ವಾನಿಸುತ್ತಿದ್ದೇನೆ. ಎಲ್ಲರೂ ಕಣ್ಣು ತೆರೆಯುತ್ತಿದ್ದಾರ... ತೊಂದರೆ ತಾಪತ್ರಯಗಳು ಬರುತ್ತಿದ್ದಂತೆ ... ಹಿಂದೇಟು ಹಾಕುತ್ತಾರೆ. ಇದನ್ನು ಕಂಡೇ ಸ... ಸ್ವಾಮಿಗಳು, ಸಿದ್ಧಗಂಗೆ ಸ್ವಾಮಿಗಳಂಥವರೂ ... ತಾಳಿರುವುದು.

** ಸುತ್ತೂರು, ಸಿದ್ಧಗಂಗೆ ಮಠಗಳದ್ದು ವೀರ... ಲಿಂಗಾಯತರಾ?*

- ಅವರದ್ದು ಲಿಂಗಾಯತ ಧರ್ಮ ಅಂದರ... ಮಾರ್ಗವೇ. ಆದರೂ ವೀರಶೈವರ ಬಗ್ಗೆ ... ಭಯವಿದೆ.


** ವೀರಶೈವರ ಬಗ್ಗೆ ಏಕಿಷ್ಟು ಭೀತಿ?*

- ಅವರದ್ದು ಅಗ್ರೆಸ್ಸೀವ್ ಕರ್ಮಠತೆ. ಆ... ಮಲ್ಲಿಕಾರ್ಜುನ ಪಂಡಿತಾರಾಧ್ಯರ ಪ್ರಹಸನದ ಬ... ಬರೆದಿದ್ದೇನೆ. ಎದುರು ಬಂದ ವ್ಯಕ್ತಿಯೊಬ್ಬ 'ಹ... ಅಂತ ಮಂತ್ರ ಪಠಿಸಿದ್ದಕ್ಕೆ ತಮ್ಮ ಶಿಷ್ಯರನ್ನು ಬಿಟ್ಟು... ಶಿರಚ್ಛೇದ ಮಾಡಿಸಿಬಿಡುತ್ತಾರೆ. ಇದರ ವಿರುದ... ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕ್ರೌರ್ಯದ ವಿರು... ಕೈಗೊಂಡದ್ದು ಇದೆ. ಇದು ವೀರಶೈವರ ದ... ಆಧಿಪತ್ಯಕ್ಕೊಂದು ಉದಾಹರಣೆಯಷ್ಟೆ. ... ಶಿವನಿಂದೆಯನ್ನು ಮಾಡಿದರೂ ಅವರ ಕತ್ತು ಕತ್ತರ... ಎಂಬಂಥ ಕಟ್ಟಳೆಯನ್ನವರು ಪಾಲಿಸುತ್ತಲೇ ಬ...

** ವೀರಶೈವರನ್ನು ಹೊರಗಿಟ್ಟು ಪ್ರತ್ಯೇ... ಲಿಂಗಾಯತ ಮಹಾಸಭಾ ಅಥವಾ ಲಿಂಗಾಯತ ... ಸ್ಥಾಪಿಸುವ ಬಗ್ಗೆ ನಿಮ್ಮ ಸಹಕಾರವಿದೆಯೆ?*

- ಅದು ಆಳಂದದ ಶಾಸಕರಾದ ಬಿ.ಆರ್. ಪಾ... ಹೇಳಿಕೆ. ನಾವು ಈಗಾಗಲೇ ಲಿಂಗಾಯತ ಮಹಾಸಭಾ ಅಂತ ಮಾಡಿದ್ದೇವೆ. ಆ ಹೆಸರಿಟ್ಟು... ಹಾಗೆ ಅವರಿಗೆ ತಿಳಿಸುತ್ತೇವೆ. ಸ್ವತಂತ್ರ ಧರ್ಮದ ವಿಷ... ಯಾವುದೇ ಪ್ರತಿಷ್ಠೆ ಸ್ವಾರ್ಥಕ್ಕೂ ಆಸ್ಪದ ನೀಡದ... ಜೊತೆಗೂ ಸಹಕರಿಸಲು ನಾವು ಸಿದ್ಧರಿ... ಸಿದ್ದರಾಮಯ್ಯನವರಂಥ ಬಸವತತ್ವದ ಅನುಯಾಯಿ... ಮುಖ್ಯಮಂತ್ರಿ ಆಗಿರುವಾಗಲೇ ಪ್ರತಿಯೊಬ್ಬ ಲಿಂಗಾ... ಈ ಅವಕಾಶವನ್ನು ಬಳಸಿಕೊಳ್ಳುವಂತೆ ಈ ... ಕರೆ ನೀಡುತ್ತಿದ್ದೇನೆ....

ಲಿಂಗಾಯತ ಭುಗಿಲು ಯಡ್ಡಿಗೆ ದಿಗಿಲು





ಏನೇ ಆದ್ರೂ ಈ ಲಿಂಗಾಯತರು ಯಡಿಯೂರಪ್ಪನ್ನ ಬಿಟ್ಟು ಕೊಡೋದುಂಟಾ? ಕಾಂಗ್ರೆಸ್‌ನವ್ರು ಅದೇನೇ ಲಗಾಟ ಹೊಡೀಲಿ ಬಸವಣ್ಣನ ಭಜನೆಯನ್ನೇ ಮಾಡ್ಲಿ ಲಿಂಗಾಯತರು ಸಾವತ್ತಿದ್ರೂ ಲಿಂಗಾಯತರೇ...!

ವಿಧಾನಸೌಧದ ಕಾರಿಡಾರ್, ಶಾಸಕರ ಭವನದ ಹರಟೆ ಕಟ್ಟೆಗಳಲ್ಲಿ ಸರ್ವೇಸಾಮಾನ್ಯವಾಗಿ ಕೇಳಿಬರುವ ಇಂಥ ಮಾತುಗಳಲ್ಲಿ ವಾಸ್ತವವಿಲ್ಲ ಅಂದವರ್‍ಯಾರು? ಹೌದು, ಯಡ್ಡಿ ಲಿಂಗಾಯತರ ಪಾಲಿನ ಪ್ರಶ್ನಾತೀತ ಮಾಸ್ ಲೀಡರ್. 2013ರ ವಿಧಾನಸಭಾ ಚುನಾವಣೆಯಲ್ಲೇ ಇದು ಸಾಬೀತಾಗಿಹೋಗಿದೆ. ಆ ಚುನಾವಣೆಯಲ್ಲಿ ಕಾಂಗ್ರೆಸ್ ಒಟ್ಟು ಶೇ. 36ಕ್ಕೂ ಅಧಿಕ ಮತಗಳನ್ನು ಪಡೆದು ಅಧಿಕಾರಕ್ಕೆ ಬಂತು. ಅಂದರೆ 121 ಸ್ಥಾನಗಳನ್ನು ಗೆದ್ದು ಮಿಕ್ಕಂತೆ 42 ಕ್ಷೇತ್ರಗಳಲ್ಲಿ ತೀರಾ ಕಮ್ಮಿ ಅಂತರದಿಂದ ಸೋತಿತ್ತು. ಇದಕ್ಕೆ ಹೋಲಿಸಿದರೆ ಬಿಜೆಪಿ ಪಡೆದದ್ದು ಶೇ.20ರಷ್ಟು. ಅಂದರೆ 40 ಸ್ಥಾನಗಳು.

ಆದರೆ ಇದು ಮೈನಸ್ ಯಡಿಯೂರಪ್ಪ ಬಿಜೆಪಿಯ ಶೇಕಡಾವಾರು. ಯಡ್ಡಿಯನ್ನು ಹೊರತುಪಡಿಸಿ ಲೆಕ್ಕ ಹಾಕಿದರೆ ಕರ್ನಾಟಕದಲ್ಲಿ ಬಿಜೆಪಿಗಿಂತಲೂ ಜೆಡಿಎಸ್ ಹೆಚ್ಚು ಶಕ್ತಿಶಾಲಿಯಾಗಿ ಕಾಣಿಸುತ್ತದೆ. ಆವತ್ತು ಜೆಡಿಎಸ್ ಕೂಡ ಬಿಜೆಪಿಯಷ್ಟೇ ಅಂದರೆ ನಲವತ್ತು ಸ್ಥಾನಗಳನ್ನು ಪಡೆದಿತ್ತು. ಅಂದರೆ ಶೇಕಡಾವಾರು ಲೆಕ್ಕಾಚಾರದಲ್ಲಿ ಬಿಜೆಪಿಗಿಂತಲೂ ಜೆಡಿಎಸ್ 1 ಪರ್ಸೆಂಟ್ ಮುಂದಿತ್ತು!

ಈಗ 2013ರ ಲೆಕ್ಕಾಚಾರ ಹೇಳಹೊರಟರೆ ಬಿಜೆಪಿಗಳೇ ನಕ್ಕುಬಿಟ್ಟಾರು. ಏಕೆಂದರೆ ಬಿಜೆಪಿಯೀಗ ಹೆಚ್ಚೂಕಮ್ಮಿ ಕಾಂಗ್ರೆಸ್‌ನ ಸರಿಸಮಕ್ಕೆ ಬಂದು ನಿಂತಿದೆ. ಇದು ಯಡಿಯೂರಪ್ಪ ತನ್ನ ಕೆಜೆಪಿಯನ್ನು ವಿಸರ್ಜಿಸಿ ಬಿಜೆಪಿಗೆ ಪುನರ್‌ಪ್ರವೇಶ ಪಡೆದ ನಂತರದ ಲೆಕ್ಕಾಚಾರ. 2013ರ ಚುನಾವಣೆಯಲ್ಲಿ ಯಡ್ಡಿಯ ಕೆಜೆಪಿಯಿಂದ ಗೆದ್ದದ್ದು 6 ಮಂದಿಯಾದರೆ ಹೆಚ್ಚೂಕಮ್ಮಿ 40 ಸ್ಥಾನಗಳಲ್ಲಿ ಕೆಜೆಪಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಸರಿಸಮನಾದ ಪೈಪೋಟಿ ನೀಡಿತ್ತು, ಅದು ಪಡೆದ ಒಟ್ಟು ಮತಗಳ ಶೇಕಡಾವಾರು 10.58 ಪರ್ಸೆಂಟ್. ಜೊತೆಗೆ ಗಣಿಕಳ್ಳರ ಪಕ್ಷವಾದ ಬಿಎಸ್‌ಆರ್ ಕಾಂಗ್ರೆಸ್‌ನ ಶೇ.3.40ರಷ್ಟು ಮತಗಳನ್ನೂ ಬಿಜೆಪಿಗೆ ಸೇರಿಸಿಬಿಟ್ಟರೆ ಅದು ಕಾಂಗ್ರೆಸ್‌ನ ಸರಿಸಮಕ್ಕೆ ಬಂದು ನಿಲ್ಲುತ್ತದೆ. ಕಳೆದ ಲೋಕಸಭಾ ಚುನಾವಣೆಯ ಆಧಾರವೇ ಲೆಕ್ಕ ಹಾಕಿದರೂ ಬಿಜೆಪಿ ಕಾಂಗ್ರೆಸ್ಸಿಗಿಂತ ಹೆಚ್ಚಿನ ಪಾಲು ಮತಗಳಿಸಿದೆ.

ಈ ಎಲ್ಲಾ ಲೆಕ್ಕ ಹಾಕಿಯೇ ಬಿಜೆಪಿ, ಆರ್‌ಎಸ್‌ಎಸ್, ಸಂಘ ಪರಿವಾರಗಳು ಇನ್ನೇನು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದೇಬಿಟ್ಟೆವೆಂಬಂತೆ ಹಾರಾಡಿದ್ದು ಚೀರಾಡಿದ್ದು ಬೆಂಕಿ ಹಚ್ಚಲು ಹೊರಟಿದ್ದು?

ಅಂದರೆ ಒಬ್ಬ ಯಡ್ಡಿಯನ್ನು ತನ್ನ ರಾಜ್ಯಾಧ್ಯಕ್ಷನನ್ನಾಗಿ ಮಾಡಿಬಿಟ್ಟರೆ ಕೆಜೆಪಿಯ ಹತ್ತು ಪರ್ಸೆಂಟ್ ಗ್ಯಾರಂಟಿಯಾದ ಹಾಗೆಯೇ ಎಂಬ ಬಿಜೆಪಿಯ ಲೆಕ್ಕಾಚಾರವೇ ಲಿಂಗಾಯತರು ಉತ್ತದರ ಪ್ರಶ್ನಾತೀತ (?) ನಾಯಕ ಯಡ್ಡಿಯೂರಪ್ಪನ ಕುರಿತಂತೆ ಮೇಲಿನ ಮಾತಿನ ಮೂಲ. ಲಿಂಗಾಯತರು ಯಾವುದೇ ಕಾರಣಕ್ಕೂ ಯಡಿಯೂರಪ್ಪನನ್ನು ಬಿಟ್ಟುಕೊಡಲಾರರು ಎಂಬ ಬಿಜೆಪಿಯ ಆದೇ ಆತ್ಮವಿಶ್ವಾಸಕ್ಕೆ ಈಗ ಕಲ್ಲು ಬಿದ್ದಿದೆ. ಅದು ಸ್ವತಂತ್ರ ಧರ್ಮದ ಬಂಡೆಕಲ್ಲು. ನಿನ್ನೆಮೊನ್ನೆಯ ತನಕ ಉತ್ತರ ಕರ್ನಾಟಕದ ಲಿಂಗಾಯತರ ಪಟ್ಟಿಗೆ ಯಡ್ಡಿಯ ಹೊರತಾಗಿ ಬೇರೆ ಯಾರೂ ಕಾಣಿಸುತ್ತಿರಲಿಲ್ಲ, ಆದರೆ ಕಳೆದೆರಡು ವಾರದಿಂದ ಎಂ.ಬಿ. ಪಾಟೀಲ್ ಎಂಬ ಬಿಸಿರಕ್ತದ ನಾಯಕನೊಬ್ಬ ಪಕ್ಕಾ ಉತ್ತರ ಕರ್ನಾಟಕದ 'ಜವಾರಿ ಕನ್ನಡದಲ್ಲಿ' ಬಸವಣ್ಣನನ್ನು ಕೊಂಡಾಡುವ ರೀತಿ, ಶಿವಶರಣರ ವಚನಗಳನ್ನು ಸಂದರ್ಭಗಳವಾಗಿ ಪ್ರಯೋಗಿಸಿದ ರೀತಿ ಮತ್ತು ಪ್ರತ್ಯೇಕ ಲಿಂಗಾಯತ ಧರ್ಮಕ್ಕಾಗಿ ಉತ್ತರ ಕರ್ನಾಟಕದಾದ್ಯಂತ ಓಡಾಡುವ, ಸಂಘಟಿಸುವ, ಮಾತಾಡುವ ರೀತಿಯಲ್ಲೇ ಯಡ್ಡಿಗೊಬ್ಬ ಪ್ರತಿಸ್ಪರ್ಧಿಯ ಎಲ್ಲಾ ಲಕ್ಷಣಗಳನ್ನೂ ಪ್ರದರ್ಶಿಸಿದಂತಾಗಿದೆ.

ಬೆಂಗಳೂರಿನ ಹರಟೆಕಟ್ಟೆಗಳ ಮಾತಿರಲಿ, ಸದ್ಯ ಉತ್ತರ ಕರ್ನಾಟಕದ ಲಿಂಗಾಯತರ ಖಾನಾವಳಿಗಳ ವರಸೆಯೇ ಬೇರೆಯಾಗಿದೆ. ಯಡ್ಡಿ ಹೇಗೆ ಲಿಂಗಾಯತರ ನಾಯಕನೋ ಅದೇರೀತಿ ಒಂದಷ್ಟು ಮಂದಿ ಲಿಂಗಾಯತರಾದರೂ ಶಾಮನೂರು ಶಿವಶಂಕರಪ್ಪನವರನ್ನು ತಮ್ಮ ನಾಯಕನೆಂದು ಒಪ್ಪಿರಲೇಬೇಕಲ್ಲವೆ? ಗುಲ್ಬರ್ಗ ಮತ್ತು ಆಳಂದದ ಭಾಗದಲ್ಲಿ ಬಿ.ಆರ್. ಪಾಟೀಲ್ ಕೆಲಮಂದಿ ಲಿಂಗಾಯತರಿಗಾದರೂ ಯಡ್ಡಿಗಿಂತ ಹೆಚ್ಚು ಆಪ್ತವಾಗಿರಲೇಬೇಕಲ್ಲವೇ? ಅದೇ ರೀತಿ



ಒಂದಷ್ಟು ಮಂದಿ ಲಿಂಗಾಯತರಿಗಾದರೂ ಎಸ್.ಆರ್. ಪಾಟೀಲ್ ಯಡ್ಡಿಗಿಂತ ಹೆಚ್ಚು ಸಮೀಪವಿರಲೇಬೇಕಲ್ಲವೆ?

ಬಿಜೆಪಿಯ ಕಾರಣಕ್ಕಲ್ಲದೆ ಹೋದರೂ ಯಡ್ಡಿ ಕಾರಣಕ್ಕೆ ಹೇಗೆ ಯಡಿಯೂರಪ್ಪ ತಮ್ಮ ನಾಯಕನೆಂದು ಲಿಂಗಾಯತರು ಭಾವಿಸಿದ್ದಾರೋ ಅದೇ ರೀತಿ ಕಾಂಗ್ರೆಸ್, ಜೆಡಿಎಸ್ ಇತ್ಯಾದಿ ನೋಡದೆಯೂ ಶಾಮನೂರು, ಬಿ.ಆರ್. ಪಾಟೀಲ್, ಎಸ್.ಆರ್. ಪಾಟೀಲ್, ಜಿ.ಟಿ. ಪಾಟೀಲ್ ಮತ್ತು ಎಂ.ಬಿ. ಪಾಟೀಲ್‌ರನ್ನು ತಮ್ಮ ಜಾತಿ ನಾಯಕನೆಂದು ನಂಬುವ ಲಿಂಗಾಯತರೂ ಇದ್ದೇ ಇರುತ್ತಾರೆ. ಹಿಂದೆಲ್ಲಾ ಇಷ್ಟೊಂದು ಬಹಿರಂಗವಾಗಿ ಹೇಳಿಕೊಳ್ಳುತ್ತಿರಲಿಲ್ಲ. ಆದರೆ ಈಗ ಶುರುವಾದ ಸಣ್ಣ ಬದಲಾವಣೆಯೆಂದರೆ ಒಂದಷ್ಟು ಮಂದಿ ಲಿಂಗಾಯತರು ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಸಣ್ಣಪುಟ್ಟ ಊರುಗಳ ಲಿಂಗಾಯತರು ಎಂ.ಬಿ. ಪಾಟೀಲ್, ಬಿ.ಆರ್. ಪಾಟೀಲ್, ಎಸ್.ಆರ್. ಪಾಟೀಲ್, ಜಿ.ಟಿ. ಪಾಟೀಲ್ ಮುಂತಾದ ಹೆಸರುಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲಾರಂಭಿಸಿದ್ದಾರೆ!

ಇದು ಬಹಳ ಹಿಂದಿನ ಬದಲಾವಣೆಯೇನಲ್ಲ. ನಿನ್ನೆಮೊನ್ನೆಯ ಅಂದರೆ ಜೂನ್ 14ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ವೀರಶೈವ ಮಹಾಸಭಾದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಲಿಂಗಾಯತ ಸಮೂಹದವತಿಯಿಂದ ಅರ್ಪಿಸಿದ ಅಭಿನಂದನೆಯ ನಂತರ ಹುಟ್ಟಿಕೊಂಡ ಹೊಸ ಬೆಳವಣಿಗೆ. ಆವತ್ತು ಸಿದ್ದರಾಮಯ್ಯ ವೀರಶೈವ-ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನವನ್ನು ಸರ್ಕಾರದ ಪರವಾಗಿ ಸಮರ್ಥಿಸಿಕೊಂಡದ್ದು ಅಕ್ಷರಶಃ ಲಿಂಗಾಯತ ಸಮೂಹವನ್ನೇ ಬೀದಿಗಿಳಿಸಿಬಿಟ್ಟಿತು. ಜೇನುಗೂಡಿಗೆ ಬಿದ್ದ ಕಲ್ಲಿನಂತೆ ಅದು ಕಲ್ಲೋಲವನ್ನೇ ಸೃಷ್ಟಿಸಿತು. ಅಲ್ಲಿಯತನಕ ಲಿಂಗಾಯತರಿಗೊಬ್ಬನೇ ದೊಣ್ಣೆನಾಯಕನಂತಿದ್ದ ಯಡಿಯೂರಪ್ಪ ಪ್ರತ್ಯೇಕ ಧರ್ಮದ ವಿರುದ್ಧ ಕೊಟ್ಟ ಹೇಳಿಕೆಯಿತ್ತಲ್ಲ; ಅದು ಲಿಂಗಾಯತರ ಪೈಕಿ ಕೆಲವರನ್ನಾದರೂ ಮುಖಗಂಟಿಕ್ಕುವಂತೆ ಮಾಡಿತ್ತು.

ಲಿಂಗಾಯತ, ವೀರಶೈವ, ಪಂಚಮಶಾಲಿ, ಜಂಗಮ, ವಿರಕ್ತ, ಗುರುಪರಂಪರೆ ಇತ್ಯಾದಿ ಏನೇ ಪಂಥಗಳು, ವಿಭಾಗ, ಜಾತಿ... ಉಪಜಾತಿಗಳಿದ್ದರೂ ಜನಾಂಗವಾಗಿ ಲಿಂಗಾಯತರೆಂದೂ ಒಬ್ಬರನ್ನೊಬ್ಬರು ಬಿಟ್ಟುಕೊಟ್ಟವರಲ್ಲ. ಆದರೆ ಜೂನ್ 14ರ ವೀರಶೈವ ಮಹಾಸಭಾ ಮುಖ್ಯಮಂತ್ರಿಗೆ ಅಭಿನಂದನಾ ಸಮಾವೇಶದ ನಂತರ ಉತ್ತರ ಕರ್ನಾಟಕದ ಸಾಂಸ್ಕೃತಿಕ ಲಕ್ಷಣವೇ ಪಲ್ಲಟಗೊಳ್ಳತೊಡಗಿದೆ. ಅವರಿಗೀಗ ಎಮ್.ಬಿ. ಪಾಟೀಲ್ ಸಿಡಿಲಮರಿಯಂತೆ ಕಾಣಿಸುತ್ತಿದ್ದಾರೆ. ಅವರ ಮಾತುಗಾರಿಕೆ ಶಿವಶರಣರ ಮಹಿಮೆಯನ್ನು ನೆನಪಿಸುತ್ತದೆ. ಯಾವ ಮಾತೆ ಮಹಾದೇವಿ, ಯಾವ ನಿಜಗುಣಾನಂದ ಸ್ವಾಮೀಜಿ, ಯಾವ ಸಿದ್ದೇಶ್ವರರು, ಯಾವ ತೋಂಟದಾರ್ಯರು ಇತ್ಯಾದಿ ಬಸವಪಥದ ಸಮರ್ಥಕರಿಗೂ ಕಮ್ಮಿಯಿಲ್ಲದಂತೆ ಎಂ.ಬಿ. ಪಾಟೀಲ್ ಲಿಂಗಾಯತ ಧರ್ಮವನ್ನು ಪ್ರತಿಪಾದಿಸುವ ರೀತಿ, ವೀರಶೈವ ಮಹಾಸಭಾಕ್ಕೆ ಪರ್ಯಾಯವಾಗಿ ಲಿಂಗಾಯತ ಮಹಾಸಭಾಕ್ಕೆ ಚಾಲನೆ ಕೊಡುವ ಸಂಕಲ್ಪ ಇತ್ಯಾದಿಗಳೆಲ್ಲವೂ ಎಂಥದೋ ಭರವಸೆಯಂತಿದೆ.

ಎಂ.ಬಿ. ಪಾಟೀಲರಿಗೆ ಹೋಲಿಸಿದರೆ ಯಡ್ಡಿ ಪಕ್ಕಾ ಬ್ರಾಹ್ಮಣನಂತೆ ವ್ಯಕ್ತವಾಗುತ್ತಾರೆ. ಅವರಿಗೆ ಉತ್ತರ ಕರ್ನಾಟಕದ ಜವಾರಿ ಕನ್ನಡ ಗೊತ್ತಿಲ್ಲ, ಎಂ.ಬಿ. ಪಾಟೀಲರ ಉತ್ತರ ಕರ್ನಾಟಕದ ಒರಟು ಕನ್ನಡ, ವ್ಯಕ್ತಿತ್ವ ಎಲ್ಲವೂ ಯಡ್ಡಿಗೊಬ್ಬ ಪರ್ಯಾಯ ನಾಯಕ ಹುಟ್ಟಿಕೊಂಡ ಲಕ್ಷಣಗಳಂತೂ ಸ್ಪಷ್ಟವಾಗುತ್ತಿವೆ. ಕೇವಲ ಎಂ.ಬಿ. ಪಾಟೀಲ್ ಮಾತ್ರವೇ ಅಲ್ಲ, ಆಳಂದದ ಬಿ.ಆರ್. ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಎಸ್.ಆರ್. ಪಾಟೀಲ್, ಶಾಮನೂರು ಶಿವಶಂಕರಪ್ಪ ಇತ್ಯಾದಿಗಳೆಲ್ಲರೂ ಲಿಂಗಾಯತರ ಕಣ್ಣಿಗೆ ಯಡ್ಡಿಗೆ ಪರ್ಯಾಯವೆಂಬಂತೆ ತಲೆ ಎತ್ತಿದ್ದಾರೆ.

ಇದೆಲ್ಲದರ ಒಟ್ಟು ಪರಿಣಾಮವೇ ಉತ್ತರ ಕರ್ನಾಟಕದ ಲಿಂಗಾಯತರು ಮತ್ತು ದಕ್ಷಿಣದ ಲಿಂಗಾಯತರೆಂಬ ಹೊಸ ವೈರುಧ್ಯ!

ಯಡ್ಡಿಯೇನಿದ್ದರೂ ಈಗ ದಕ್ಷಿಣದ ಲಿಂಗಾಯತ ಅಂದರೆ ಮೈಸೂರು ಪ್ರಾಂತ್ಯದ ಲಿಂಗಾಯತರ ನಾಯಕ ಮಾತ್ರ!

ಇಂಥದೊಂದು ಸದ್ದಿಲ್ಲದ ಪರಿವರ್ತನೆಗೆ ಕಾರಣವಾಗಿದ್ದು ಜೂನ್ 14ರ ಅರಮನೆ ಮೈದಾನದ ವೀರಶೈವ ಮಹಾಸಭಾದ ವತಿಯಿಂದ ಮುಖ್ಯಮಂತ್ರಿಗೆ ಸಲ್ಲಿಸಿದ ಸ್ವತಂತ್ರ ಧರ್ಮದ ಮನವಿ ಪತ್ರ. ಬಹುಶಃ ಖುದ್ದು ಸಿದ್ದರಾಮಯ್ಯನವರಿಗೂ ಪ್ರತ್ಯೇಕ ಧರ್ಮದ ಬೇಡಿಕೆಗೆ ತಾನು ಸ್ಪಂದಿಸಿದ ರೀತಿಯೇ ಮುಂದೊಮ್ಮೆ ಕಲ್ಲೋಲವುಂಟುಮಾಡೀತೆಂಬ ನಿರೀಕ್ಷೆಯಿರಲಿಲ್ಲವೇನೊ.

ಸದ್ಯ ವೀರಶೈವ ಮತ್ತು ಲಿಂಗಾಯತ ಎಂಬ ಎರಡು ವೈರುಧ್ಯಗಳು ಅದರೊಳಗೇ ಉದ್ಭವಿಸಿ ನಿಂತ ರೀತಿ ಕೂಡ ಲಿಂಗಾಯತರನ್ನು ಇಬ್ಭಾಗಿಸುವ ಎಲ್ಲಾ ಲಕ್ಷಣಗಳನ್ನು ದಟ್ಟವಾಗಿಸಿದೆ. ಹಾಗೊಮ್ಮೆ ವೀರಶೈವರು ಯಡ್ಡಿಯನ್ನು ಬೆಂಬಲಿಸಿದರೆ ಅಥವಾ ವೀರಶೈವರ ಬೆಂಬಲಕ್ಕೆ ಯಡ್ಡಿ ಅಥವಾ ಬಿಜೆಪಿ ನಿಂತರೂ ಸಾಕು ಲಿಂಗಾಯತರು ಅದರ ವಿರುದ್ಧ ನಿಲ್ಲುತ್ತಾರೆ ಅಥವಾ ವೀರಶೈವರೇನಾದರೂ ಕಾಂಗ್ರೆಸ್ ಅಥವಾ ಜೆಡಿಎಸ್ ಜೊತೆ ಗುರುತಿಸಿಕೊಂಡರೆಂದರೆ ಲಿಂಗಾಯತರು ಬಿಜೆಪಿಯನ್ನು ಅಪ್ಪಲಿದ್ದಾರೆ. ಇದರರ್ಥ ಲಿಂಗಾಯತ ಸಮೂಹದ ಒಂದು ಗುಂಪು ಯಾರ ಜೊತೆಗಿರುತ್ತೋ ಮತ್ತೊಂದು ಪಂಥ ಅದರ ವಿರುದ್ಧ ನಿಲ್ಲುತ್ತದೆ. ಈ ಪೈಕಿ ಯಾವುದು ಸಂಭವಿಸಿದರೂ ಅದರ ಲಾಭ ಮಾತ್ರ ಕಾಂಗ್ರೆಸ್ಸಿಗೇ.

ವಿಶೇಷವೆಂದರೆ ಈ ಎಲ್ಲಾ ಸಂಘರ್ಷ ಮತ್ತು ಆಂತರಿಕ ತುಮಲಕ್ಕೆ ಯಡ್ಡಿ ಮತ್ತು ಬಿಜೆಪಿಯೇ ತಲೆಕೊಡಬೇಕು ತಲೆದಂಡ ತೆರಬೇಕು. ಏಕೆಂದರೆ ಪ್ರತ್ಯೇಕ ಧರ್ಮದ ಪ್ರಶ್ನೆ ಉದ್ಭವವಾದಾಗಿನಿಂದಲೂ ಹಿಂದೂತ್ವ, ವೈದಿಕ ಧರ್ಮ, ಶಿವಶರಣರ ವಚನಗಳ ಬಗ್ಗೆ ಲಿಂಗಾಯತ ಸಮೂಹದ ಕೆಲವರಲ್ಲಾದರೂ ಪ್ರಶ್ನೆಗಳು ಹುಟ್ಟಿಕೊಳ್ಳಲಾರಂಭಿಸಿದೆ. ಬಸವಣ್ಣನನ್ನು ಕೊಂದವರೇ ಈಗ ಬಿಜೆಪಿ ರೂಪ ತಾಳಿ ವೈದಿಕ ಪ್ರಭುತ್ವ ಸ್ಥಾಪಿಸಿದ್ದಾರೆಂಬ ಸತ್ಯ ಈ ಪೈಕಿ ಕೆಲವರಿಗಾದರೂ ಗೋಚರಿಸಲೇಬೇಕಲ್ಲವೇ? ಇಂಥವರ ಸಂಖ್ಯೆ ಕಮ್ಮಿಯೆಂದರೂ ಲಿಂಗಾಯತ ಸಮೂಹದ ಶೇ. ಐದರಷ್ಟಾದರೂ ಇಲ್ಲದಿದ್ದೀತೆ?

ಪ್ರತ್ಯೇಕ ಧರ್ಮದ ಪ್ರಶ್ನೆಯೆಂಬುದು ಹುಟ್ಟಹಾಕಿದ ಇಂಥದೊಂದು ಪರಿವರ್ತನೆಯೇ ಶಿವಶರಣರ ಆಶಯವನ್ನೂ ಜೀವಂತವಾಗಿಡುತ್ತದೆ ಮತ್ತು ಬ್ರಾಹ್ಮಣವಾದ ಬಿಜೆಪಿಯ ವಿರುದ್ಧ ಅಂತವರನ್ನು ಸೆಟೆದು ನಿಲ್ಲಿಸುತ್ತದೆ. ಅಂದರೆ ಯಡಿಯೂರಪ್ಪನ ಕೆಜೆಪಿಯ ಲಿಂಗಾಯತ ಮತಬ್ಯಾಂಕಿನಲ್ಲಿ ಶೇ. 5 ರಷ್ಟು ಬಿಜೆಪಿಗೆ ಕೊರತೆಯಾದರೂ ಸಾಕು ಬಿಜೆಪಿ ಪಾಲಿಗದು ಮರಣಶಾಸನವೆ.

ಬಹುಶಃ ಭಾರತದ ಪ್ರಸ್ತುತ ರಾಜಕಾರಣ ಮತ್ತು ಕರ್ನಾಟಕದಲ್ಲಾಗುತ್ತಿರುವ ಬೆಳವಣಿಗೆಗಳನ್ನು ಗಮನಿಸಿದ ಯಾರಿಗಾದರೂ ಸೂಕ್ಷ್ಮವೊಂದು ಅರ್ಥವಾಗಲೇ ಬೇಕು. ಅದು ಇನ್ನೇನು ಚುನಾವಣೆ ಸಮೀಪಿಸುತ್ತಿದ್ದಂತೆ ಭಾರತದ ಬೇರೆಲ್ಲಾ ರಾಜ್ಯಗಳಲ್ಲಾದಂತೆ ಅಧಿಕಾರಸ್ಥ ಪಕ್ಷ ರಕ್ಷಣಾತ್ಮಕ ತಂತ್ರಗಾರಿಕೆಯನ್ನೂ ವಿರೋಧ ಪಕ್ಷಗಳು ದಾಳಿಯ ಹುಮ್ಮಸ್ಸನ್ನೂ ಪಡೆದುಕೊಳ್ಳುವುದು ಸಹಜ ತಾನೆ? ಆದರೆ ಕರ್ನಾಟಕದಲ್ಲಿ ವಿರೋಧಿ ಬಿಜೆಪಿಯೇ ರಕ್ಷಣೆಯ ಆಟಕ್ಕಿಳಿದಿದೆ. ಕಾಂಗ್ರೆಸ್ ಒಂದರನಂತರ ಮತ್ತೊಂದು ವಿಕೆಟ್ಟುಗಳನ್ನುದುರಿಸಿ ದಾಳಿಯೆಸಗುತ್ತಿದೆ.

ತೀರ ಇತ್ತೀಚೆಗೆ ನಡೆದ ಹಿಂದಿ ವಿರೋಧಿ ಹೋರಾಟವನ್ನೇ ಲೆಕ್ಕಕ್ಕೆ ತೆಗೆದುಕೊಂಡರೂ ಬಿಜೆಪಿ ಈ ವಿಷಯದಲ್ಲಿ ಬಾಲ ಮುದುರಿಕೂರಬೇಕಾಯಿತು. ಏಕೆಂದರೆ ಆರ್‌ಎಸ್‌ಎಸ್, ಬಿಜೆಪಿ, ಸಂಘ ಪರಿವಾರಗಳು ಆ ಕಾಲದಿಂದಲೂ ಹಿಂದಿ ಹೇರಿಕೆ, ಏಕರಾಷ್ಟ್ರ, ಭಾಷಾವಾರು ರಾಜ್ಯಗಳ ರದ್ಧತಿಯನ್ನು ಪ್ರತಿಪಾದಿಸುತ್ತಲೇ ಬಂದಿದ್ದವು. ಕನ್ನಡಿಗರನ್ನು ಬೆಂಬಲಿಸಿದರೆ ತನ್ನ ಸಿದ್ಧಾಂತವನ್ನೇ ವಿರೋಧಿಸಿದಂತಾಗುತ್ತದೆ ಮತ್ತು ಬಹಿರಂಗವಾಗಿ ಹಿಂದಿ ಹೇರಿಕೆಯ ಪರ ನಿಂತರೆ ಕನ್ನಡಿಗರಿಂದ ಆಕ್ರೋಶ ಎದುರಿಸಬೇಕಾಗುತ್ತದೆ. ಇದು ಬಿಜೆಪಿಯ ರಾಜಕೀಯ ಫಜೀತಿ. ಒಳಗಿಂದೊಳಗೇ ಅದು ಹಲವು ಹಿಂದಿ ಐಪಿಎಸ್‌ಗಳ ಮೂಲಕ ಕನ್ನಡ ಪರ ಹೋರಾಟಗಾರರ ಮೇಲೆ ಇಲ್ಲದ ಕಾಯ್ದೆ ಸೆಕ್ಷನ್ನುಗಳನ್ನು ಪ್ರಯೋಗಿಸಲೆತ್ನಿಸಿತು. ಆ ಮೂಲಕ ಕಾಂಗ್ರೆಸ್ ಸರ್ಕಾರದ ವಿರುದ್ಧ ಕನ್ನಡಿಗರನ್ನೇ ಎತ್ತಿಕಟ್ಟುವುದು ಬಿಜೆಪಿ ತಂತ್ರವಾಗಿತ್ತು. ಆದರೆ ಅಂತಹ ಅಧಿಕಾರಿಗಳನ್ನೇ ಎತ್ತಂಗಡಿ ಮಾಡಿದ ಸಿದ್ದರಾಮಯ್ಯ ಕನ್ನಡಿಗರ ಕಣ್ಮಣಿಯಾದರು.

ಕರ್ನಾಟಕಕ್ಕೆ ಪ್ರತ್ಯೇಕ ಕನ್ನಡ ಬಾವುಟದ ವಿಷಯದಲ್ಲೂ ಇದೇ ಆಯಿತು. ಯಾವ ಮುಸ್ಲಿಂ ದ್ವೇಷ, ಮೀಸಲಾತಿ ದ್ವೇಷ, ದಲಿತ ಮತ್ಸರಗಳ ಮೂಲಕ ಬಿಜೆಪಿ ಹಿಂದೂ ಓಟ್‌ಬ್ಯಾಂಕ್ ಕಟ್ಟಹೊರಟಿತ್ತೋ ಅದಕ್ಕೆ ಸಿದ್ದರಾಮಯ್ಯ ಕನ್ನಡಿಗರ ಸ್ವಾಭಿಮಾನದ ಓಟ್‌ಬ್ಯಾಂಕ್ ಆರಂಭಿಸಿ ಎದುರೇಟು ಕೊಟ್ಟರು. ಕೋಮುಗಲಭೆಗಳ ಮೂಲಕ ಕರ್ನಾಟಕಕ್ಕೆ ಬೆಂಕಿ ಹಚ್ಚುತ್ತೇನೆಂದ ಯಡ್ಡಿ, ಕರಂದ್ಲಾಜೆಯ ಉತ್ತರ ಪ್ರದೇಶದ ಮಾದರಿ ಬೆಂಕಿ ರಾಜಕಾರಣ ಕರ್ನಾಟಕದ ಮಟ್ಟಿಗೆ ಠುಸ್ ಪಟಾಕಿಯಾಯಿತು. ಇದರ ಹೊರತಾಗ್ಯೂ ಬಿಜೆಪಿ ನಂಬಿದ್ದು ಲಿಂಗಾಯತರ ಓಟ್ ಬ್ಯಾಂಕನ್ನು. ಲಿಂಗಾಯತರನ್ನು ಮುಂದಿಟ್ಟುಕೊಂಡು ಶಿವಶರಣರ ಸಮಾಧಿಯ ಮೇಲೆ ಕೂತು ಹಿಂದೂತ್ವದ ಪುಷ್ಕಳಭೋಜನ ಸವಿಯುವ ಬ್ರಾಹ್ಮಣಶಾಹಿ ಬಿಜೆಪಿಯ ಷಡ್ಯಂತ್ರವನ್ನು ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವಂತೆ ಸಿದ್ದು ಪ್ರತ್ಯೇಕ ಧರ್ಮದ ಅಸ್ತ್ರ ಪ್ರಯೋಗಿಸಿದ್ದಾರೆ. ಮಹಿಳಾ ವಿವಿಗೆ ಅಕ್ಕ ಮಹಾದೇವಿಯ ಹೆಸರು, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರ ಮತ್ತು ಬಸವ ಜಯಂತಿಯ ದಿನದ ಪ್ರಮಾಣವಚನ ಎಲ್ಲವೂ ಲಿಂಗಾಯತರ ಪಾಲಿಗೆ ಸಿದ್ದು ನಂಬಿಕೆಗೆ ಪಾತ್ರನನ್ನಾಗಿಸಿಬಿಟ್ಟಿದೆ. ಲಿಂಗಾಯತನಾಗಿಯೂ ಹಿಂದೂತ್ವದ ವೈದಿಕರ ಜೊತೆ ನವವೈದಿಕನಂತೆ ಕಾಣುವ ಯಡ್ಡಿಯ ಮುಂದೆ ಸಿದ್ದರಾಮಯ್ಯ ಲಿಂಗವನ್ನಪ್ಪಿ ಬಂದ ನವಲಿಂಗಾಯತನಂತೆ ಕಾಣಿಸುತ್ತಿದ್ದಾರೆ. ಎಂ.ಬಿ. ಪಾಟೀಲ್ ಥರದವರು ಯಡ್ಡಿಗಿಂತಲೂ ವಿಶ್ವಾಸಾರ್ಹ ಲಿಂಗಾಯತ ನಾಯಕನಾಗಿ ಹೊರಹೊಮ್ಮಿದ್ದಾರೆ. ಪ್ರತ್ಯೇಕ ಧರ್ಮದ ಲಿಂಗಾಯತರ ಆಕ್ರೋಶದೆದುರು ಬಿಜೆಪಿಯ ಹಿಂದೂತ್ವದ ಬತ್ತಳಿಕೆಯೇ ಖಾಲಿ ಹೊಡೆಯುತ್ತಿದೆ.

■ ರಾ. ಸೋಮನಾಥ್







ಪುರೋಹಿತರ ಕ್ರೌರ್ಯಕ್ಕೆ..

02 ⏮

"ಮುರುಕಿಯ ಮದಿಕೆಯ ನೋಣ ಮುತ್ತಿಕೊಂಡಿಪ್ಪಂತೆ
ಕಪ್ಪುಳ್ಳ ಹೊಲದಲ್ಲಿ ಪಶುಗಳು ನೆರೆದಿಪ್ಪಂತೆ
ಅನ್ನ ಉದಕ ಹೊನ್ನು ವಸ್ತ್ರವುಳ್ಳ ದೊರೆಯ ಬಾಗಿಲಲ್ಲಿ
ಬಹುಭಾಷೆಯ ಹಿರಿಯರುಗಳು ನೆರೆದುಕೊಂಡಿಪ್ಪರು
ಗುಹೇಶ್ವರಾ ನಿಮ್ಮ ಶರಣರು ಆಶಾಪಾಶವಿರಹಿತರು"

ಇಂಥ ಪರಾವಲಂಬಿ ಜಂಗಮ ಸಮಾಜಕ್ಕೆ ನಿಷ್ಠುರವಾಗಿ ಏನಾದರೂ ಹೇಳಲು ಸಾಧ್ಯವೆ? ಈ ಜಾತಿ ಜಂಗಮನಿಗೆ ಭಕ್ತನ ತಪ್ಪುಗಳನ್ನು ತಿಳಿಸಿಕೊಡುವ ಸಾಮರ್ಥ್ಯವಿರುತ್ತದೆಯೆ? ತಾನೇ ಹಂಗಿಗನಾದಾಗ ಇನ್ನೊಬ್ಬರಿಗೆ ನಿಷ್ಠುರವಾಗಿ ಹೇಳುವ ಗುಣವಾದರೂ ಹೇಗೆ ಅಳವಡಿಸಿಕೊಳ್ಳಲು ಸಾಧ್ಯ. ಆಶಾಪಾಶಾ ವಿರಹಿತನಾದ ಜಂಗಮ ನ್ಯಾಯ ನಿಷ್ಠುರಿ ದಾಕ್ಷಿಣ್ಯ ಪರನಲ್ಲ; ಲೋಕವಿರೋಧಿ ಶರಣನಾರಿಗೂ ಅಂಜಲಾರ. ಆದರೆ ವೇಷಧಾರಿಗಳಾದ ಇಂದಿನ ಜಂಗಮರು ಶರಣರೆ ಆಗಿಲ್ಲ, ಇನ್ನು ಇವರು ಜಂಗಮರಾಗುವ ಪರಿ ಇನ್ನೆಂತೊ?

"ಜಂಗಮದ ಘನವನು ಜಂಗಮದ ನಿಲುವನು
ಅರಿಯದೆ ಕೆಟ್ಟರಲ್ಲಾ ಶಿವ ಶಿವಾ!
ಜಂಗಮವೆಂದಡೆ ನಿಷ್ಕಳಂಕನು ನೋಡಾ!
ಜಂಗಮವೆಂದಡೆ ನಿರಪೇಕ್ಷನು ನೋಡಾ!
ಜಂಗಮವೆಂದಡೆ ನಿರ್ದೋಷನು ನೋಡಾ!
ಜಂಗಮವೆಂದಡೆ ನಿಷ್ಪ?ಹನು ನೋಡಾ!
ಜಂಗಮವೆಂದಡೆ ಅಕ್ರೋಧ, ಸತ್ಯ ವಚನನು ನೋಡಾ!
ಜಂಗಮವೆಂದಡೆ ದಯಾಪರನು ಧರ್ಮಗುಣನು ನೋಡಾ!
ಜಂಗಮವೆಂದಡೆ ಶಾಂತಜ್ಞಾನಮೂರ್ತಿ ತಾನೆ ನೋಡಾ
ಅಖಂಡೇಶ್ವರಾ"

ಪ್ರಸ್ತುತ ವಚನದ ಒಂದು ಸಾಲನ್ನೂ ಪೂರೈಸಲಾಗದ ಇಂದಿನ ಗುರುಗಳು (?) ತಮ್ಮನ್ನು ತಾವು ಜಂಗಮವೆಂದು ತಿಳಿದುಕೊಂಡಿದ್ದಾರೆ. ದಯವಿಲ್ಲದ ಧರ್ಮ ಅದಾವುದಯ್ಯಾ? ಎಂದು ಹೇಳಿದ್ದರೂ ದಯೆ, ಕರುಣೆ, ಪ್ರೀತಿ ಹಾಗೂ ತತ್ವ ನಿಷ್ಠೆ ಇಲ್ಲದ ಸಮಾಜವೇ ತನ್ನ ತಂದೆತಾಯಿ ಬಂಧುಗಳೆಂದು ತಿಳಿಯದ, ತನ್ನ ರಕ್ತ ಸಂಬಂಧಿಗಳನ್ನು ಮಠಗಳ ತುಂಬೆಲ್ಲ ಇಟ್ಟುಕೊಂಡಿರುವ ಲೋಕಸೇವೆಯಲ್ಲಿ ಲೋಪವೆಸಗುತ್ತಿರುವ ವ್ಯಕ್ತಿಗಳು ಇಂದು ಜಂಗಮರಾಗಿದ್ದಾರೆ. ಈ ಜಂಗಮರಲ್ಲಿ ಸ್ವಯ ಜಂಗಮರಿಲ್ಲ, ಚರಜಂಗಮರಿಲ್ಲ, ಪರಜಂಗಮರಂತೂ ಈಗಿಲ್ಲ. ಇಂದು ಕಾಶಿಗೆ, ಶಿವಯೋಗಮಂದಿರಕ್ಕೆ ಹೋಗಿ ಸಂಸ್ಕೃತ ಭಾಷೆಯ ನಾಲ್ಕೆಂಟು ಶಾಸ್ತ್ರಗಳನ್ನು ಕಲಿತು ಬಂದ ಕಾಸಿನ ಜಂಗಮರಾಗಿದ್ದಾರೆ. ನಾಲ್ಕೆಂಟು ಸುಳ್ಳು ಸೊಟ್ಟು ಮಂತ್ರಗಳನ್ನು ಕಲಿತು ಸಮಾಜದ ಜನಗಳೆದುರು ಹೇಳುತ್ತ ಶವಸಂಸ್ಕಾರ, ಇಷ್ಟಲಿಂಗ ಧಾರಣ, ಜಾವಳ, ಮದುವೆ, ಗೃಹಪ್ರವೇಶ ಮುಂತಾದ ಸಂದರ್ಭದಲ್ಲಿ ಕರ್ಮಠತನವನ್ನು ಹೇಳುವ ವೈದಿಕರಾಗಿದ್ದಾರೆ. ಪಂಚಾಂಗ ಜೋತಿಷ್ಯ, ಪುರಾಣಗಳನ್ನು ಹೇಳುತ್ತ ಹೊಟ್ಟೆ ಹೊರೆಯುವವರಾಗಿದ್ದಾರೆ. ಪುರೋಹಿತರಾಗಿದ್ದಾರೆ.

ಹಾನಗಲ್ ಕುಮಾರ ಸ್ವಾಮಿಗಳಿಗೆ ವಚನ ಸಾಹಿತ್ಯದ ಬಗೆಗೆ ಸಂಪೂರ್ಣ ಅರಿವಿಲ್ಲದೆ ಇರಬಹುದು. ಆದರೆ ಅದರ ಕುರಿತು ಮೆಚ್ಚುಗೆ ಇದ್ದದ್ದಂತೂ ಸತ್ಯ. ಏಕೆಂದರೆ ವಚನ ಪಿತಾಮಹ ಫ.ಗು.ಹಳಕಟ್ಟಿಯವರು 'ವಚನಶಾಸ್ತ್ರಸಾರ-ಭಾಗ-1' ಎಂಬ ಗ್ರಂಥವನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ (ಸೊನ್ನದ ಶ್ರೀಮಂತ ಗಂಗಪ್ಪ ದೇಸಾಯಿಯವರ ಮನೆಯಲ್ಲಿ ಇಳಿದುಕೊಂಡಾಗ) ಭೇಟಿಯಾಗಿ ಹಳಕಟ್ಟಿಯವರು ಸಂಗ್ರಹಿಸಿದ ಉಕ್ತಿಗಳನ್ನು ಅವರ ಕಡೆಯಿಂದ ಓದಿಸಿ ಕೇಳಿಸಿಕೊಳ್ಳುತ್ತಿದ್ದರು. ಅವುಗಳಲ್ಲಿರುವ ವಚನಗಳಲ್ಲಿಯ ಉಚ್ಚ ವಿಚಾರಗಳು ಸುಂದರ ನುಡಿಗಳು ಇವುಗಳನ್ನು ಕೇಳಿ ಅವರು ಹರ್ಷಿಸುತ್ತಿದ್ದರು ಮತ್ತು ಅವರಿಗೆ ಈ ಗ್ರಂಥವನ್ನು ಅಚ್ಚು ಹಾಕಲಿಕ್ಕೆ ಪ್ರೋತ್ಸಾಹಿಸಿದರು.


ಆದಾಗ್ಯೂ ಶಿವಯೋಗಮಂದಿರದಲ್ಲಿ ಜಾತಿಜಂಗಮರಿಗೆ ಮಾತ್ರ ಪ್ರವೇಶ ಎಂಬ ಅಂಶವನ್ನು ಕಡೆಗಣಿಸಲಿಲ್ಲ. ಬದಲಾಗಿ ಬಳ್ಳಾರಿಯಲ್ಲಿ ಅಂದು ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ವೈದಿಕ ಧರ್ಮವಾದ ಬ್ರಾಹ್ಮಣರಲ್ಲಿ ಹೇಗೆ ಚಾತುರ್ವರ್ಣಗಳಿವೆಯೋ ಹಾಗೆಯೆ ಲಿಂಗಾಯತರಲ್ಲೂ 4 ವರ್ಣಗಳಿವೆ ಎಂಬುದನ್ನು ಪ್ರಸ್ತುತಪಡಿಸಲು ಹೆಣಗಾಡಿದ್ದು ತಿಳಿದು ಬರುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರಗಳಂತೆ ಲಿಂಗಾಯತರಲ್ಲಿ ಲಿಂಗಿಬ್ರಾಹ್ಮಣ (ಜಂಗಮ), ಲಿಂಗೀ ಕ್ಷತ್ರಿಯ, ಲಿಂಗಿ ವೈಶ್ಯ ಲಿಂಗಿ ಶೂದ್ರರಂತೆ ಎಂದು ಪ್ರಸ್ತಾವನೆ ಸಲ್ಲಿಸುವುದನ್ನು ಮೈಸೂರಿನ ಎಂ.ಬಸವಯ್ಯನವರು ಕಟುವಾಗಿ ವಿರೋಧಿಸಿದರು. ಉಗ್ರವಾಗಿ ಪ್ರತಿಭಟಿಸಿದರು. ಜಾತಿಜಂಗಮ ಹಿತಾಸಕ್ತಿಗೆ ಮುಖಭಂಗವಾದ್ದರಿಂದ ಅದನ್ನು ಅಲ್ಲಿಗೆ ಕೈಬಿಡಬೇಕಾಯಿತು.

ಭಕ್ತರು ಗುರು ಜಂಗಮರಾಗಲು ಬರುವುದಿಲ್ಲ, ಜಾತಿಜಂಗಮರು ಗುರು ಜಂಗಮರಾಗುವ ಅಧಿಕಾರವಿದೆಯೆಂದು, ಶೈವ ಬ್ರಾಹ್ಮಣ ಪರಂಪರೆಯ ಜಾತಿ ಜಂಗಮರೆ ಗುರು ಜಂಗಮರಾಗಲು ಬರುತ್ತದೆ ಎಂದು 1914 ರಲ್ಲಿ ಹಾವೇರಿ ಎರಡನೆಯ ವರ್ಗದ ಮುನ್ಸಿಫ್ ಕೋರ್ಟ (ಅಸಲ್ ನಂ.493) ಮುಂದೆ ಹಾಜರುಪಡಿಸಿದರು. ಇದನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಕೋರ್ಟ ತಮಗೆ ಒದಗಿಸಿದ ದಾಖಲೆಗಳೆಲ್ಲ ಖೊಟ್ಟಿ ಆಧಾರ ಗ್ರಂಥಗಳೆಂದು ಆ ವಿಚಾರವನ್ನು ತಳ್ಳಿಹಾಕಿದ್ದೊಂದು ಐತಿಹಾಸಿಕ ಸತ್ಯ.

ಧಾರವಾಡದ ವಿಶ್ವವಿದ್ಯಾಲಯ (1972) ಮುಕ್ತಿಕಂಠಾಭರಣ ಮತ್ತು ಲಿಂಗಚಿದಾಮೃತವೆಂಬ ಪುಸ್ತಕ ಪ್ರಕಟಿಸಿತು. ಈ ಪುಸ್ತಕಗಳ ಹಸ್ತಪ್ರತಿಗಳು ಶಿವಯೋಗ ಮಂದಿರದಲ್ಲಿಯೆ ಸಿಕ್ಕಿದವು ಎಂದು ಹೇಳುತ್ತಾರೆ. ಖೊಟ್ಟಿ ವಚನಗಳಿಂದ ತುಂಬಿತುಳುಕುತ್ತಿದ್ದ ಹಾಗೂ ಹಾದವರನ್ನು ಪ್ರಚೋದಿಸುತ್ತಿದ್ದ ಕೃತಿಗಳು ಮುದ್ರಾಂ ಆಗಿ ಪ್ರಕಾಶಗೊಳಿಸಿದರು ಎಂಬ ಮಾತು ಕೇಳಿಬರುತ್ತದೆ. ರಾಘವಾಂಕನು ಬರೆದ 'ಸಿದ್ಧರಾಮ ಚರಿತೆ' ಯೆಂಬ ಮೂಲ ಕೃತಿಯಲ್ಲಿ ಇಲ್ಲದ 138 ಪದ್ಯಗಳನ್ನು ಸೇರಿಸಿ ಅಲ್ಲಮ, ಅಕ್ಕನಾಗಮ್ಮ, ಬಸವಣ್ಣ ಹಾಗೂ ಅಕ್ಕಮಹಾದೇವಿಯ ಐತಿಹಾಸಿಕ ಚರಿತ್ರೆಗೆ ಮಹಾದ್ರೋಹವೆಸಗುವ ಕಾರ್ಯವನ್ನೂ ಜಾತಿಜಂಗಮರು ಮಾಡಿಕೊಂಡೆ ಬಂದಿದ್ದಾರೆ. 1956 ರಲ್ಲಿ ರಂಭಾಪುರಿ ಪೀಠದಿಂದಲೆ ಪ್ರಕಟವಾದ 'ಮಣಿಮುಕುರ' ಎಂಬ ಕೃತಿಯಲ್ಲಂತೂ ಶರಣರ ಬಗೆಗಿನ ತಮ್ಮ ಕ್ರೋಧವನ್ನು ಬಹಿರಂಗವಾಗಿಯೆ ತೋಡಿಕೊಂಡಿದ್ದಾರೆ. ತೀರಾ ಇತ್ತೀಚಿನ ವರ್ಷಗಳವರೆಗೆ ಬಸವಣ್ಣನವರ ಭಾವಚಿತ್ರ ಕಂಡರೆ ಹಾವು ತುಳಿದವರಂತೆ ಎಗರಿಬೀಳುತ್ತಿದ್ದರು. ಶರಣರ ಭಾವಚಿತ್ರಗಳಿದ್ದ ಜಾಗದ ಕೆಳಗೆ ಕುಳಿತುಕೊಳ್ಳಲು ನಿರಾಕರಿಸುತ್ತಿದ್ದರು. ಓಂ ಶ್ರೀ ಗುರು ಬಸವಲಿಂಗಾಯ ನಮಃ ಎಂಬ ಬ್ಯಾನರ್ ಕೆಳಗೂ ಇವರು ತಿರುಗಾಡುತ್ತಿರಲಿಲ್ಲ.

ಭಕ್ತವರ್ಗದಿಂದ ಗುರುತ್ವವನ್ನು ಪಡೆದು ಚರಜಂಗಮರಾದ ಜೇವರ್ಗಿಯ ಕೊನೆಯ ವಚನಕಾರ ಷಣ್ಮುಖ ಶಿವಯೋಗಿಗಳನ್ನು ವಿಷಪ್ರಾಶನ ಮಾಡಿ ಕೊಂದದ್ದು ಜಾತಿ ಜಂಗಮರು. ಕಡಕೋಳದ ಮಡಿವಾಳಪ್ಪನೆಂಬ ಅನುಭಾವಿಗೆ ಲಿಂಗದೀಕ್ಷೆಯನ್ನು ನೀಡದೆ ಕೊಲೆ ಮಾಡಲು ಪ್ರಯತ್ನಿಸಿದ್ದು ಜಾತಿಜಂಗಮರು. ಕಡಕೋಳ ಮಡಿವಾಳಪ್ಪನಿಗೆ ಲಿಂಗದೀಕ್ಷೆ ನೀಡಿದ ಎಂಬ ಕಾರಣಕ್ಕೆ ಶರಣಬಸಪ್ಪನನ್ನು ಅರಳಗುಂಡಿಗೆಯಿಂದ ಕಲಬುರ್ಗಿಗೆ ಓಡಿಸಿದವರು ಇದೆ ಪುರೋಹಿತರು. ಬಸವ ತತ್ವ ನಿಷ್ಠರಾದ ಹರ್ಡೇಕರ್ ಮಂಜಪ್ಪನವರು ಲಿಂಗವಂತ ತತ್ವವನ್ನು ಪ್ರಚುರಗೊಳಿಸಲು ಊರೂರಿಗೆ ಪ್ರಯಾಣಿಸುವ ಸಂದರ್ಭದಲ್ಲಿ ಅವರನ್ನು ತೇಜೋವಧೆ ಮಾಡಲು 'ಸೂಳೆ ಮಗ ಬರುತ್ತಿದ್ದಾನೆ ಎಚ್ಚರಿಕೆ' ಎಂಬ ಬಿತ್ತಿ ಪತ್ರಗಳನ್ನು ಅಂಟಿಸಿದವರು ಜಾತಿಜಂಗಮರು.

ಅರಿವಿನ ಕುರುಹನ್ನು ತಿಳಿಯದ, ವೇಷವನ್ನು ತೊಟ್ಟು ವೇಶಿಯಾಗಿರುವ ಜಾತಿಜಂಗಮರು ಬಸವಣ್ಣನವರು ಕಲ್ಪಿಸಿದ ಜಂಗಮರಲ್ಲವೆ ಅಲ್ಲ. ಜಂಗಮನನ್ನು ಶಿವಯೋಗ ಮಂದಿರದಲ್ಲಿ-ಕಾಶಿಯ ಮಠದಲ್ಲಿ ತಯಾರು ಮಾಡಲಾಗದು. ವ್ಯಕ್ತಿ ಸ್ವಯಃ ತಾನೇತಾನಾಗಿ ಜಂಗಮವಾಗಬೇಕು. ಒತ್ತಿ ಮಾಡಿದಂತಹ ಕಾಯಿ ಹಣ್ಣಾಗಲು ಹೇಗೆ ಸಾಧ್ಯವಿಲ್ಲವೊ ಹಾಗೆ ಒತ್ತಾಯ ಹಾಗೂ ಬದುಕಿನ ಅನಿವಾರ್ಯತೆಗೆ ಕೊಡಿಸಿದ ಶಿಕ್ಷಣ ಗಿಳಿ ಪಾಠವಾಗುತ್ತದೆ.



"ಭಕ್ತನಾದ ಬಳಿಕ ಜಂಗಮ ಮೆಚ್ಚಬೇಕು
ಜಂಗಮವಾದ ಬಳಿಕ ಭಕ್ತ ಮೆಚ್ಚಬೇಕು
ಭಕ್ತನ ಕಾಯವೇ ಜಂಗಮನ ಕಾಯ
ಜಂಗಮನ ಕಾಯವೇ ಭಕ್ತನ ಕಾಯ
ಕಪಿಲಸಿದ್ಧ ಮಲ್ಲೇಶನಲ್ಲಿ ಇದೇ ಉಪಾಯ."

ಭಕ್ತ ಬೇರೆ - ಜಂಗಮ ಬೇರೆ ಅಲ್ಲವೇ ಅಲ್ಲ, ಭಕ್ತನೇ ಜಂಗಮ. ಜಂಗಮವೇ ಭಕ್ತ ಭಕ್ತನು ಜಂಗಮನಲ್ಲಿಗೆ ಬಂದಾಗ ಜಂಗಮನಾಗುತ್ತಾನೆ. ಜಂಗಮವೆಂಬ ಸ್ಥಲವನ್ನು ಯೋಗ್ಯತೆಯ ಮುಖಾಂತರ ಯಾರಾದರೂ ಗಳಿಸಿಕೊಳ್ಳಬಹುದು. ಆಚಾರವೇ ಜಂಗಮ ವಿಚಾರವೇ ಭಕ್ತ, ಆಚಾರ ವಿಚಾರವೆಂಬುದು ಸ್ವಾನುಭಾವವು ನೋಡಾ ಎಂದು ಬಸವಣ್ಣನವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಅರಿವು ಆಚಾರ ಸಮ್ಯಕ್ಜ್ಞಾನ ಹೊಂದಿದ ಜಂಗಮ ಸುಳಿದಾಡಿದರೆ ಬೆಳಕು ಹರಿದಾಡುತ್ತದೆ. ಮಾತು ಮೌನವಾಗುತ್ತದೆ. ಭಾವ ಸಂಪ್ರೀತಿಯಿಂದ ಬೀಗುತ್ತದೆ. ಹಮ್ಮು ಬಿಮ್ಮುಗಳು ಇಲ್ಲವಾಗುತ್ತದೆ. ಮನದ ಕತ್ತಲೆ ಓಟ ಕಿತ್ತುತ್ತದೆ. ಸಕಲ ಜೀವಾತ್ಮರಿಗೂ ಲೇಸಬಯಸುವ ಪ್ರೀತಿ ಅಲ್ಲೆಲ್ಲ ಚೆಲ್ಲವರಿದಿರುತ್ತದೆ. ಭಕ್ತನ ತನುವಿನ ತೋಂಟದೊಳಗೆ ಹುದುಗಿರುವ ಭ್ರಾಂತಿಯನ್ನು, ಹೇಂಟೆಯನ್ನು ಅಗೆದು-ಒಡೆದು ಪುಡಿಮಾಡಿ ಹಸನುಗೊಳಿಸುವವ ಜಂಗಮ. ಗುರುವು ಶಿಷ್ಯನ ಬರವ ಕಂಡು ಬಂದು, ಪಾದದ ಮೇಲೆ ಬೀಳುವಾತ ಗುರುಲಿಂಗ. ಇಂಥ ಗುರುಲಿಂಗ ಸಂಜಾತರಾದ ಜಂಗಮರು ಇಂದು ಯಾರಿದ್ದಾರೆ?

ಹಿಂದೆ ಪರಳಿ ವೈಜನಾಥ ಪ್ರಕರಣದಲ್ಲಿ, ಲಿಂಗಿಬ್ರಾಹ್ಮಣರೆಂದು ಕೋರ್ಟಿನ ಕಟ್ಟೆ ಹತ್ತಿದ್ದರು. ಲಿಂಗವನ್ನೂ ಜನಿವಾರವನ್ನೂ ಏಕಕಾಲದಲ್ಲಿಯೇ ಧರಿಸು ಪುರೋಹಿತರಂತೆ ನಮಗೂ ಶಾಸ್ತ್ರೋಕ್ತವಾಗಿ- ವಿ ವಿಧಿ ವಿಧಾನಗಳ ಪ್ರಕಾರ ಪೂಜೆ ಮಾಡಲು ಬರು ನಾವೂ ವೇದಾಂತ ಪಂಡಿತರು ಎಂದು ಕೋರ್ಟಿನ ಮುಙ್ಣೆರಚಿದರು. ಪರಳಿ ವೈಜನಾಥ ದೇ ಪೂಜಾರಿಗಳಾದರು, ಈ ಪುರೋಹಿತರು.

ಇದೀಗ ಈ ಜಂಗಮ ಪುರೋಹಿತರು ದಲಿ ಸರಕಾರ ನೀಡಿರುವ ಸೌಲಭ್ಯಗಳನ್ನು ನೋಡಿ ಸಹಿಸದ ನಾವೂ ಬೇಡ ಜಂಗಮರು. ಬೇಡುತ್ತ ಊರೂರು ಅಲ ವರು. ನಮಗೂ ಅಸ್ಪೃಶ್ಯರಿಗೆ ನೀಡುವ ಅವಕಾಶಗ ನೀಡಿರಿ ಎಂದು ಸರಕಾರಕ್ಕೆ ದುಂಬಾಲು ಬದ್ದಿದ್ದಾರೆ

ಮತ್ತೊಂದು ಕಡೆ ಲಿಂಗಾಯತರಿಗೆ ತಗುಲಿ ಬಿದ್ದ ಈ ಜಾತಿ ಜಂಗಮರು ಬಸವಣ್ಣನವರ ಜಂಗಮರು ಅ ಅಲ್ಲ. ಆದರೂ ನಾವು ಬಸವಣ್ಣನ ಜಂಗಮ ಲಿಂಗಾಯತರಿಗೆ ಗುರುಗಳು ಎಂದು ನಂಬಿಸುತ್ತ ನಡೆದಿ ಅಂದಂತೆ ಲಿಂಗಾಯತರಿಗೆ ಇಷ್ಟವಾಗುವ ಕೆ ವಚನಗಳನ್ನು ಹೇಳುತ್ತಾರೆ. ಶರಣರ ಜೀವನದ ಕೆ ಘಟನೆಗಳನ್ನು ನಂಬುವಂತೆ ತಿಳಿಸುತ್ತಾರೆ. ಕೊರ ರುದ್ರಾಕ್ಷಿಯ ಸರ. ಹಣೆಯ ಮೇಲೆ ವಿಭೂತಿ. ಮೈಮ ಕಾವಿಯ ಬಟ್ಟೆಗಳನ್ನು ಧರಿಸಿದ್ದಾರೆ. ವೇದ ಪುರಾಣಗಳನ್ನು ಚೆನ್ನಾಗಿ ಹೇಳುತ್ತಾ, ವೇದಮು ಗಳಾಗಿದ್ದಾರೆ. ಗುಡಿ-ಗುಂಡಾರಗಳ ಪೂಜಕರಾಗಿ ಜ್ಯೋತಿಷ್ಯ-ಪಂಚಾಂಗ ಹೇಳುತ್ತಾರೆ. ರಾಹುಕಾಲ ಗುಳಿ ನೋಡುತ್ತಾರೆ. ಸತ್ತವರ ಸಮಾಧಿಯಲ್ಲಿ ತಡಗಿಯ ಕ ಹಿರಿಯರ ಗದ್ದುಗೆಯನ್ನು ಪೂಜಿಸುತ್ತಾರೆ. ಕಟ್ಟಿಗೆ ಹಾ ಬೆಳ್ಳಿಯ ಕಟ್ಟಿಗೆ ಜಡಿ ಗಟ್ಟಿದ ಕೂದಲು ಹಿರಿಯರ ಪೂಜಿಸುತ್ತಿದ್ದಾರೆ. ತಮ್ಮ ಹಿರಿಯರು ಗಳಿ ಮಠಮಾನ್ಯವೆಂದು ಹೋರಾಡಿ, ತಳ್ಳಿ ತಗಾದಿ ತರ ಮಾಡುತ್ತಿದ್ದಾರೆ. ಲಾರಿಗಟ್ಟಲೆ ಪೂಜಾ ಸಾಮಗ್ರಿಗ ಹೇರಿಕೊಂಡು, ಬಂಡಿಗಟ್ಟಲೆ ಪತ್ರೆಗಳನ್ನು ಲಿಂಗಕ್ಕೆ ಬ ಆಡಂಬರದ ವೇಷಧಾರಿಗಳು ನೂರಾರು ನೇಮಗ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು ಕಾ ಬಟ್ಟು ಹೊನ್ನು ಬೇಡಿ ಕಾಡುವರು. ಹೀಗೆ ಬ್ರಾಹ್ಮಣ್ಯ ಸಂಪೂರ್ಣ ಮೈಗೂಡಿಸಿಕೊಂ ಪುರೋಹಿತಶಾಹಿಗಳಾಗಿದ್ದಾರೆ.

"ಸಿಂಹದ ಕ್ರೌರ್ಯಕ್ಕಿಂತ ನರಿಯ ಕ್ರೌ ಭಯಾನಕವಾದುದು. ಸಿಂಹವು ಒಂದು ಸಲ ಕೊಂದ ಕೆಲಕಾಲ ಶಾಂತವಾಗಿರುವುದು. ಆದರೆ ನರಿ ಒಂದುಕ್ಷಣವೂ ಸುಮ್ಮನಿರುವುದಿಲ್ಲ. ಸ್ವಭಾ ನರಿಯಂತಿರುವ ಪುರೋಹಿತರು ಕ್ರೂರಿಗಳು. ನಿರ್ದಯಿ ಆದಕಾರಣ ಎಲ್ಲಿ ಪುರೋಹಿತರು ಮೇಲೇಳುವ ಅಲ್ಲಿ ಧರ್ಮ ಅವನತಿ ಹೋಗುವುದು; ನಾನು ನಿನ ಪರಿಶುದ್ಧನು ಎಂಬುದೇ ನಿಮ್ಮ ಹೃದಯವನ್ನು ಪ್ರವೇಶಿ ಮಹಾಭಯಂಕರ ಭಾವನೆ" - ಎಂದು ಸ್ವಾ ವಿವೇಕಾನಂದರು ಹೇಳಿದ್ದಾರೆ.

ಲಿಂಗಾಯತರಲ್ಲಿ ಈಗ ಜಾತಿ ಜಂಗಮ ಪುರೋಹಿ ಮೇಲೆದ್ದಿದ್ದಾರೆ. ನಾನು ಭಕ್ತನಿಗಿಂತ ಪರಿಶುದ್ಧ ಭಕ್ತನಿಗಿಂತಲೂ ಮೇಲು ಜಾತಿಯವನು ಎಂಬ ಭ ಉಂಟಾಗಿದೆ. ಇದರಿಂದಾಗಿ ಸಹಜವಾಗಿಯೆ ಬ ತತ್ವವೆಂಬ ವಿಶ್ವಮಾನ್ಯ ತತ್ವಗಳು ಅವನತಿಗೆ ಒಳಗಾಗು ನರಿಯ (ಜಾತಿ ಜಂಗಮರ) ಕ್ರೌರ್ಯಕ್ಕೆ ಲಿಂಗಾಯತ ಒಳಗಾಗುತ್ತಿದ್ದರೂ ಅದರ ಅರಿವು ಬಹಳಷ್ಟು ಜನ ಭಕ್ತ ಇಲ್ಲವಾಗಿದೆ. •

■ ವಿಶ್ವಾರಾಧ್ಯ ಸತ್ಯಂಪೇ

ಆಕರ ಗ್ರಂಥಗಳು:
1) ವೀರಶೈವರಲ್ಲಿ ಜಾತಿಭೇದಗಳಿಲ್ಲ - ವ್ಹಿ.ಬಿ.ಬಿಳೇ ಅಂಗಡಿ ವಕೀಲರು
2) ಅರಿವು - ಜೆ.ಎಮ್.ಪಾಟೀಲ
3) ಕೃತಿಶ್ರೇಣಿ- ಸ್ವಾಮಿ ವಿವೇಕಾನಂದ

ಪುಸ್ತಕ ಪರಿಚಯ

'ಸಿಕ್ಕಿದ್ರೆ ಶಿಕಾರಿ, ಇಲ್ದಿದ್ರೆ ಭಿಕಾರಿ'

ಹೆಸರು ಕೇಳಿ ಮಾತ್ರ ಗೊತ್ತಿದ್ದ ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಶತದಿನೋತ್ಸವ-ಆರು ವಾರಗಳು-ಒಂದು ವರ್ಷ ಓಡಿದ ಸಿನಿಮಾ ಫಲಕಗಳ ನಡುವೆ ಕುಳಿತು ಒಂದು ಸಾಕ್ಷ್ಯ ಚಿತ್ರ ನೋಡಿದೆವು.

ಯಾರ ಕುರಿತು ನಾವು ಕಣ್ಣಿದ್ದೂ ಕುರುಡರಾಗಿದ್ದೇವೋ, ಕಿವಿಯಿದ್ದೂ ಕಿವುಡರಾಗಿದ್ದೇವೋ ಅಂತಹವರ ಕುರಿತ ಚಿತ್ರವದು. ಕಳೆದ 25 ವರ್ಷಗಳಿಂದ ಹಕ್ಕಿಪಿಕ್ಕಿ ಸಮುದಾಯದೊಡನೆ, ಮಹಿಳಾ ಸಂಘಟನೆಗಳೊಡನೆ ತೆರೆಯ ಮರೆಯ ಕಾಯಂತೆ ಕೆಲಸ ಮಾಡುತ್ತಿರುವ ಪತ್ರಕರಣದ ಗೆಳತಿ ಮಧು ಭೂಷಣ್ ಹಾಗೂ ಅಲೆಮಾರಿ ಬುಡಕಟ್ಟು ಸಮುದಾಯಗಳ ಬದುಕನ್ನು ಸಾಕ್ಷ್ಯಚಿತ್ರಗಳಾಗಿ ಸೆರೆ ಹಿಡಿಯುವ ಸಮರ್ಥ ನಿರ್ದೇಶಕ ವಿನೋದ್ ರಾಜಾ-ಬಬ್ಬರ ಬದ್ಧತೆಯಿಂದ ಹಕ್ಕಿಪಿಕ್ಕಿ ಎಂಬ ಅರೆ ಅಲೆಮಾರಿ ಸಮುದಾಯ ಕುರಿತ ಸಾಕ್ಷ್ಯಚಿತ್ರ 'ಸಿಕ್ಕಿದ್ರೆ ಶಿಕಾರಿ, ಇಲ್ದಿದ್ರೆ ಭಿಕಾರಿ' ರೂಪುಗೊಂಡಿದೆ. ಈ ಚಿತ್ರದ ಇನ್ನೊಂದು ವಿಶೇಷ ಅದೇ ಸಮುದಾಯದವರಾಗಿ ಶಿಕ್ಷಣ ಪಡೆದು ಸರ್ಕಾರಿ ಉದ್ಯೋಗದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿರುವ ಕುಮುದಾ ಅವರ ಭಾಗವಹಿಸುವಿಕೆ.

ಹಕ್ಕಿಪಿಕ್ಕಿ ಸಮುದಾಯದವರನ್ನು ನೀವು ಖಂಡಿತಾ ನೋಡಿರುತ್ತೀರಿ. ಸಂತೆ-ಜಾತ್ರೆ-ತೇರುಪೇಟೆಯಲ್ಲಿ ಒಂದಷ್ಟು ಗಾಜು-ಪ್ಲಾಸ್ಟಿಕ್ ಬಾಟಲಿಗಳಲ್ಲಿ ಬಣ್ಣದ ಎಣ್ಣೆಯಿಟ್ಟುಕೊಂಡು ನೋವುಗಳೇ ತಮ್ಮ ಬಲಿಗೆ ಬಂದು ಬೀಳುವಂತೆ 'ಹಳೇನೋವು-ಹೊಸನೋವು-ಮುದುನೋವು-ಮಾಯದ ನೋವುಗಳಿಗೆ ಮಾಲಿಶ್' ಎಂದು ಕೂಗಿಕರೆಯುವ ವಿಶಿಷ್ಟ ಚಹರೆಯ ಜನರನ್ನು ನೋಡಿರುತ್ತೀರಿ. ನಿಮ್ಮ ಊರಬೀದಿಗಳಲ್ಲಿ ತಮ್ಮದೇ ಆದ ರಾಗ-ಧಾಟಿ-ಶೃತಿಯಲ್ಲಿ 'ಹಳೇ ಕೂದ್ಲಾ, ಕಡ್ಡಿ, ಪಿನ್ನಾ, ಬಾಚಣಿಕೆ, ಟಿಕ್ಲೀ..' ಎಂದು ಕೂಗುತ್ತ ಸಾಗುವ ಕೃಶ ಮಹಿಳೆಯನ್ನು ನೋಡಿರುತ್ತೀರಿ. ಹೂವಿನ ಸರ, ಮಣಿಸರ, ಮಣಿಯುಂಗುರ, ವುಲನ್-ಮಕಮಲ್ಲಿನ ನಾನಾ ಪ್ರಾಣಿಪಕ್ಷಿಗಳ ಗೊಂಬೆಗಳನ್ನು ರಸ್ತೆಬದಿ ರಾಶಿಹಾಕಿ ಮಾರುವ ಜನರನ್ನು ಖಂಡಿತ ನೋಡಿರುತ್ತೀರಿ.

ಇಪ್ಪತ್ನಾಲ್ಕು ವರ್ಷಗಳ ಹಳ್ಳಿಯ ವೈದ್ಯಕೀಯ ಪ್ರಾಕ್ಟೀಸಿನಲ್ಲಿ ನಾನು ಹಕ್ಕಿಪಿಕ್ಕಿಗಳಿಗೆ ನಾನಾ ರೀತಿ ಮುಖಾಮುಖಿಯಾಗಿರುವೆ. ಸಣ್ಣ ಪ್ರಚೋದನೆಗೂ ನಿಷ್ಕಳಂಕವಾಗಿ ಎದೆಯಾಳದಿಂದ ಬರುವ ಅವರ ನಗುವಿಗೆ ವಿಸ್ಮಿತಳಾಗಿದ್ದೇನೆ. ಕೆಲವು ಆರೋಗ್ಯ ಮಾಹಿತಿಗಳನ್ನು ಅವರಿಗೆ ದಾಟಿಸಲಾಗದೇ ಸೋಲೊಪ್ಪಿಕೊಂಡಿದ್ದೇನೆ. ಸರ್ಕಾರಿ ಸವಲತ್ತುಗಳ ಬಗೆಗೆ ಅವರಿಗೆ ತಿಳಿದಿದೆಯೋ ಇಲ್ಲವೋ? ಸಿಗುತ್ತಿವೆಯೋ ಇಲ್ಲವೋ? ಎಂದು ನಮ್ಮೂರ ಗುಡ್ಡಗಳ ಕೆಳಜಾರಲ್ಲಿ ಟೆಂಟು ಕಟ್ಟಿಕೊಂಡವರ ಬಳಿ ಹೋಗಿ ಕೇಳಿದರೆ ಹೆಂಗಸರು ಮುಖ ತುಂಬ ಪ್ರಶ್ನೆ ತುಂಬಿಕೊಂಡು ನನಗೇ ಪ್ರಶ್ನೆಯನ್ನು ಹಿಂದಿರುಗಿಸಿದರು. ತೂರಾಡುತ್ತಿದ್ದ ಗಂಡಸರು ತಮ್ಮ ಬಿಡಾರದ ಬಳಿ ನನ್ನ ಕಂಡದ್ದಕ್ಕೆ ಸಂದಿ, ಹಳು ನುಸುಳಿ ಮಾಯವಾದರು. ಇನ್ನೂ ಅವರ ಜಗತ್ತಿನೊಳಗೆ ಸುಲಭದ ಪ್ರವೇಶ ಸಿಗದೆ ಹೊರಗುಳಿದಿದ್ದೇನೆ.

ಕಣ್ಣೆದುರು ಕಾಣುವ ಎಷ್ಟೋ ಹಕ್ಕಿಗಳ ಬದುಕಿನ ಹಾಗೇ ಅಲೆಮಾರಿ ಬದುಕೂ ನಮ್ಮ ಮಟ್ಟಿಗೆ ಅನಾಮಿಕ, ಅದೃಶ್ಯ. ಅವರು ಬರುವುದಾಗಲೀ, ಇರುವುದಾಗಲೀ ನಮ್ಮ ಗಮನಕ್ಕೇ ಬಂದಿರುವುದಿಲ್ಲ. ಆಗೀಗ ಕಣ್ಣಿಗೆ ಬಿದ್ದು ಮರೆಯಾಗುವವರ ಭಾಷೆ ಯಾವುದೋ, ಹಾಡುಹಸೆ ಯಾವುವೋ, ದೇವರುಗಳು ಯಾರೋ, ದಿನನಿತ್ಯದ ಬದುಕು ಹೇಗೆ ಸಾಗಿಸುವರೋ, ಕ್ರಿಮಿನಲ್ ಟ್ರೈಬ್ಸ್ ಆಕ್ಟ್ 1871ರ ಮೂಲಕ ಬ್ರಿಟಿಷರಿಂದ ಅಪರಾಧಿ ಬುಡಕಟ್ಟು ಎಂಬ ತಪ್ಪು ನಾಮಕರಣಕ್ಕೆ ಒಳಗಾಗಿ ಎಷ್ಟು ಕಷ್ಟಪಟ್ಟರೋ, ತುತ್ತಿನ ಚೀಲ ತುಂಬಿಸಲು ಏನೇನು ಮಾಡಿದರೋ - ಇವೆಲ್ಲದರ ಬಗೆಗೆ ನಮಗೆ ಏನೂ ಗೊತ್ತಿರುವುದಿಲ್ಲ. ಈ ಜನ ಯಾರು, ಅಂತಹ ವಸ್ತುಗಳ ವ್ಯಾಪಾರದ ಲಾಭದಿಂದ ಹೇಗೆ ಬದುಕು ಸಾಗಿಸುತ್ತಾರೆ ಎಂದು ಮನೆಯೆದುರು ಹಾದು ಹೋದಾಗಲೂ ನಾವು ಯೋಚಿಸಿರುವುದಿಲ್ಲ. 'ಸಿಕ್ಕಿದ್ರೆ ಶಿಕಾರಿ, ಇಲ್ದಿದ್ರೆ, ಭಿಕಾರಿ'ಯಂತಹ ಸಾಕ್ಷ್ಯಚಿತ್ರಗಳು ಅವರ ಬದುಕುಬವಣೆ ಕುರಿತು ನಮ್ಮ ಕಣ್ತೆರೆಸಬೇಕಾಗಿದೆ.

ಅದಕ್ಕೇ ಈ ಮತ್ತು ಇಂತಹ ಸಾಕ್ಷ್ಯಚಿತ್ರಗಳು ಜನಪ್ರಿಯವಾದವು ಎಂದು ಅನಿಸುತ್ತಿದೆ.

******

ವಗ್ರಿ, ಬೋಳಿ ಎಂಬ ಭಾಷೆ ಮಾತನಾಡುವ ಹಕ್ಕಿಪಿಕ್ಕಿಗಳು ಬಗ್ರಿ, ಚಿಗರಿ ಬೇಟೆಗಾರ, ಗುವ್ವಾಲೊಳ್ಳು, ಪಿಟ್ಟ ಶಿಕಾರಿ, ಮೇಲ್ ಶಿಕಾರಿ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಹೆಸರೇ ಹೇಳುವಂತೆ ಅವರದು ಶಿಕಾರಿಯನ್ನೇ ನೆಚ್ಚಿಕೊಂಡಿದ್ದ ಪಶ್ಚಿಮ ಭಾರತದ ಸಮುದಾಯ. ತಮ್ಮ ದೊರೆ ರಾಣಾ ಪ್ರತಾಪನನ್ನು ಮೊಘಲ್ ದೊರೆ ಸೋಲಿಸಿದ ಬಳಿಕ ಕೆಲವರು ಪಾಕಿಸ್ತಾನದ ಕಡೆ ವಲಸೆ ಹೋದರೆ, ಬಹುಪಾಲು ಜನ ದಕ್ಷಿಣದ ಕಡೆಗೆ ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಕೇರಳಗಳಲ್ಲಿ ಚದುರಿದರು. ಕರ್ನಾಟಕದ ದಕ್ಷಿಣ ಭಾಗದಲ್ಲಿ ಹೆಚ್ಚು ಹರಡಿಕೊಂಡರು. ಈಗಲೂ ದಾದಾಜಿ, ಜೋಗನ್, ವಿಖ್ಹಿ ನೋಕೋರ್, ದುರ್ಗಾ-ಕಲ್ಕಾ, ಚಾಮುಂಡೇಶ್ವರಿ ಮೊದಲಾದ ದೇವರುಗಳನ್ನು ತಮ್ಮ ಟೆಂಟು, ವಸ್ತುಗಳೊಡನೆ ಹೊತ್ತು ರಾಜ್ಯ-ದೇಶದ ಗಡಿದಾಟಿ ಅಲೆಯುತ್ತಾರೆ. ಅಲೆಮಾರಿತನದ ಕಾರಣವಾಗಿ ತಮ್ಮ ಭಾಷೆಯಲ್ಲದೆ ಕನ್ನಡ, ಹಿಂದಿ, ತಮಿಳು, ಮಲೆಯಾಳಿ, ತೆಲುಗು, ಕೊಂಕಣಿ ಮುಂತಾಗಿ ಹಲವು ಭಾಷೆಗಳ ಸುಲಲಿತವಾಗಿ ಮಾತಾಡಲು ಕಲಿತಿದ್ದಾರೆ.

ಈ ಸಾಕ್ಷ್ಯಚಿತ್ರ ದಾಖಲಿಸುವಂತೆ ಹಕ್ಕಿಪಿಕ್ಕಿಗಳ ಹೆಸರುಗಳು ಬಹು ವಿಚಿತ್ರವಾಗಿವೆ. ಕಾಫಿ, ಡಿವಿಷನ್,



ಚಾಕೊಲೇಟ್ ಬಾಯಿ, ಇನ್ಸ್‌ಪೆಕ್ಟರ್, ಸಕ್ರೆ, ಹೈಕೋರ್ಟ್, ಡಿವೈಎಸ್ಪಿ ಎಂಪಿ ಶಂಕರ್, ಜಪಾನ್, ಇಂಗ್ಲಿಷ್, ಪಿಸ್ತೂಲ್, ಸೈಕಲ್ ರಾಣಿ, ಗವರ್ನಮೆಂಟ್, ಶಾದಿ, ಗ್ಲೂಕೋಸ್, ತರ್ಟಿ ಸಿಕ್ಸ್ ಇವೆಲ್ಲ ವ್ಯಕ್ತಿಗಳ ಹೆಸರುಗಳು! ಹೆರಿಗೆಯಾದ ಹೊತ್ತಲ್ಲಿ ಯಾವ ವ್ಯಕ್ತಿ, ಸ್ಥಳ, ವಸ್ತುವಿನ ಹೆಸರು ಹೊಸದಾಗಿ ಗಮನ ಸೆಳೆವುದೊ ಆ ಹೆಸರನ್ನು ಮಗುವಿಗಿಡುವವರು ಅವರು. ಕೋರ್ಟ್ ಎಂಬಾತನಿಗೆ ಆ ಹೆಸರು ಬಂದಿದ್ದು ಅವನ ತಾಯ್ತಂದೆಯರ ಟೆಂಟು ಕೋರ್ಟಿನ ಬಳಿಯಿದ್ದಾಗ ಅವ ಹುಟ್ಟಿದ್ದರಿಂದ. ಮೊದಲು ನದಿ-ಬೆಟ್ಟ-ಮರಗಳ ಹೆಸರಿಡುತ್ತಿದ್ದವರು ಇಂತಹ ಚಿತ್ರವಿಚಿತ್ರ ಹೆಸರಿಡಲು ಕಾರಣವಿದೆ. ಹಿರೀಕನೊಬ್ಬ ವಿವರಿಸುವಂತೆ ಅವರದು 'ಸಿಂಗ್' ಸರ್‌ನೇಮ್ ಪಡೆದಿದ್ದ ಕ್ಷತ್ರಿಯ ಸಮುದಾಯವಾಗಿತ್ತು, ಆದರೆ ಹೊಸನೆಲದಲ್ಲಿ ನೆಲೆಗೊಳ್ಳಬೇಕಾದ ಪರಿಸ್ಥಿತಿ ಬಂದಾಗ ಯಾವ ನೆಲದ ನೀತಿನಿಯಮ, ಕಾನೂನುಗಳನ್ನೂ ಕೇರ್ ಮಾಡದೆ ಮುಕ್ತವಾಗಿ ತಿರುಗಾಡಿಕೊಂಡಿರುವಂತೆ ಆಯಿತು. ಒಂದೆಡೆ ನೆಲೆ ನಿಲ್ಲದೆ ಊರೂರಿಗೆ 'ಓಡಿಹೋಗುವ'ವರಾದ್ದರಿಂದ ಸಮಾಜ ಅವರನ್ನು ಕಳ್ಳರೆಂಬಂತೆ ನಡೆಸಿಕೊಂಡಿತು. ಅದರ ಮೇಲೆ ಬ್ರಿಟಿಷರು ಕೊಟ್ಟ ಅಪರಾಧಿ ಬುಡಕಟ್ಟು ಎಂಬ ಕಿರೀಟ ಬೇರೆ. ಹೀಗಿರುವಾಗ ತಮ್ಮ ಕುಲದ ಗುರುತು ಮರೆಸಲು ಬೇರೆಬೇರೆ ಹೆಸರುಗಳು ಅವರಿಗೆ ನೆರವಾಗುತ್ತಿದ್ದವಂತೆ. ಜೊತೆಗೆ ಅಲೆಮಾರಿತನದ ಇತಿಹಾಸವನ್ನು, ಹುಟ್ಟಿದ ಕಾಲ-ಸ್ಥಳದ ಪರಿಚಯವನ್ನು ಆ ಹೆಸರುಗಳು ನೀಡುವುದರಿಂದ ಅಂತಹ ಹೆಸರಿಟ್ಟರಂತೆ.

ಈಗ ಅವರ ಹೆಸರುಗಳು ಬದಲಾಗಿವೆ. ಈಗಿನ ಬಹುತೇಕ ಮಕ್ಕಳು ಟಿವಿ ಸೀರಿಯಲ್‌ಗಳ, ಸಿನಿಮಾ ನಾಯಕನಾಯಕಿಯರು, ರಾಜಕೀಯ ನೇತಾರರ ಹೆಸರು ಹೊತ್ತಿದ್ದಾರೆ.

ಹಕ್ಕಿಪಿಕ್ಕಿಗಳದು ಮಾತೃಪ್ರಧಾನ ಸಮಾಜ. ವರದಕ್ಷಿಣೆ ಇಲ್ಲ, ವಧು ದಕ್ಷಿಣೆ ಇದೆ. ಪೂಜಿಸುವ ದೇವರು ಒಂದೇ ಇರುವ ವಂಶಗಳ ನಡುವೆ ಮದುವೆ ನಿಷಿದ್ಧವಾಗಿದೆ. ಸಮುದಾಯದ ಸ್ವಾಯತ್ತ ಹೆಣ್ಮಕ್ಕಳು ವಸ್ತುಗಳ ತಯಾರಿ, ಮಾರಾಟ, ಹಣಕಾಸು ವ್ಯವಹಾರ ಎಲ್ಲದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಮಹಿಳೆಯರ ಸಣ್ಣಸಣ್ಣ ಗುಂಪುಗಳು ಒಂದೂರಿಂದ ಇನ್ನೊಂದೂರಿಗೆ ಅಲೆಯುತ್ತ ವ್ಯಾಪಾರ ಮಾಡಿ ಬರುತ್ತವೆ.

ಜನಗಣತಿ ಪ್ರಕಾರ ಅವರ ಜನಸಂಖ್ಯೆ ಅಜಮಾಸು 18 ಸಾವಿರ. ಕರ್ನಾಟಕದಲ್ಲಿ 11,000 ಜನ, ತಮಿಳುನಾಡಿನಲ್ಲಿ 7,000, ಆಂಧ್ರದಲ್ಲಿ 300, ಪಾಂಡಿಚೆರಿಯಲ್ಲಿ 100 ಜನ ಇದ್ದಾರೆ. ಆದರೆ ಈ ಸಂಖ್ಯೆ ಸರಿಯಲ್ಲ ಎಂದೇ ಹಲವರ ಭಾವನೆ. ಕರ್ನಾಟಕದಲ್ಲೇ 18,000ಕ್ಕಿಂತ ಹೆಚ್ಚು ಜನರಿದ್ದಾರೆ ಎಂದು ಬುಡಕಟ್ಟು ಅಧ್ಯಯನಗಳು ಹೇಳುತ್ತವೆ. ಅವರು ತಮ್ಮನ್ನು ತಾವು ಯಾವ ಧರ್ಮದಲ್ಲೂ ಗುರುತಿಸಿಕೊಳ್ಳದೆ ಪ್ರಕೃತಿಯೇ ಧರ್ಮವಾಗಿ ಬದುಕಿದ್ದರು. ವರ್ಣಧರ್ಮವಂತೂ ಅವರನ್ನು ನಾಲ್ಕು ವರ್ಣಗಳಾಚೆಯ ಪಂಚಮರ ಆಚೆಗೂ ದೂಡಿತ್ತು. ಆದರೆ ಕಾಲ ಬದಲಾಗಿದೆ. ಈಗವರು ಹಿಂದೂತ್ವದ ಮತ್ತು ಕ್ರೈಸ್ತ ಮಿಷನರಿಗಳ ಕೈಯ ದಾಳವಾಗಿದ್ದಾರೆ. ಒಂದು ಮಾಹಿತಿಯಂತೆ ಅವರಲ್ಲಿ 99% 'ಹಿಂದೂ'ಗಳು, 1% ಕ್ರೈಸ್ತರು, ಬೆರಳೆಣಿಕೆಯಷ್ಟು ಜನ ಮುಸ್ಲಿಮರು. ಹಲವರು ಬ್ರಹ್ಮಕುಮಾರಿಯರ ಪಂಥ ಪಾಲಿಸುತ್ತಾರೆ.

ಅವರಲ್ಲಿ ಊರೂರು ಸುತ್ತುತ್ತ ತಮ್ಮ ವ್ಯಾಪಾರೀ ಚಾಕಚಕ್ಯತೆಯನ್ನು ಹಳ್ಳಿ-ಕೇರಿಗಳಿಂದ ಹಿಡಿದು ಪರರಾಜ್ಯ ಪರದೇಶಗಳಿಗೂ ವಿಸ್ತರಿಸಿದವರು ಇದ್ದಾರೆ! ಟಿಬೆಟ್, ಶ್ರೀಲಂಕಾ, ಯೂರೋಪು, ಆಫ್ರಿಕಾ, ದಕ್ಷಿಣ ಅಮೆರಿಕದ ತನಕ ಹೋಗಿ ಕೂದಲು, ತೈಲ, ಮಣಿ, ಬೇರು, ಹುಲಿಯುಗುರು ಮಾರಿ ಬಂದಿದ್ದಾರೆ. ಕೆಲವರು ಚರ್ಚಿನ ವತಿಯಿಂದ ಹೋಗಿಬಂದರೆ ಮತ್ತೆ ಕೆಲವರು ಫಾರಿನ್ ಟೂರಿಸ್ಟುಗಳನ್ನು ಹಿಡಿದು, ಸಾಲಸೋಲ ಮಾಡಿ, ಪಾಸ್‌ಪೋರ್ಟ್ ವೀಸಾ ಪಡೆದುಕೊಂಡು ಹೋಗಿಬಂದಿದ್ದಾರೆ. ವಿದೇಶ ತಿರುತಿರುಗಿ ಕೆಲವರ ಪಾಸ್‌ಪೋರ್ಟ್ ಪುಸ್ತಕ ತುಂಬಿ, ನಂತರ 3-4 ಪುಸ್ತಕ ತುಂಬಿವೆ! ಭಾಷೆ-ಜನ ಗೊತ್ತಿಲ್ಲದ ದೇಶಗಳಿಗೂ ಹೋಗಿ ವ್ಯಾಪಾರ ಮಾಡಲು ಅವರಿಗಿರುವ ಹುಕಿ, ಧೈರ್ಯ ಅಚ್ಚರಿ ಹುಟ್ಟಿಸುವಂತಿದೆ.

ಅವರ ವ್ಯಾಪಾರಿ ರಹಸ್ಯಗಳಲ್ಲಿ ಕೆಲವನ್ನು ಕೇಳಿ: ರುದ್ರಾಕ್ಷಿ ಒರಿಜಿನಲ್ ಮಣಿಯನ್ನು ಆಭರಣ ಮಾಡುವವರಿಗೆ ಕೊಡುತ್ತಾರಂತೆ, ಯಾಕೆಂದರೆ ಅವರು ಅಸಲಿ ನಕಲಿ ಪತ್ತೆಹಚ್ಚುಬಿಡುತ್ತಾರೆ. ಅದೇ, ನಕಲಿ ರುದ್ರಾಕ್ಷಿಯನ್ನು ಜ್ಯೋತಿಷಿಗಳಿಗೆ ಮಾರುತ್ತಾರಂತೆ! ಕುರಿ-ಆಡು-ಆಕಳ ಗೊರಸನ್ನು ಕೆತ್ತಿ ಅದರಿಂದ ಹುಲಿಯುಗುರು ತಯಾರಿಸುತ್ತಾರಂತೆ! ತಮ್ಮ ಬಳಿ ಯಾರೂ ಸುಳಿಯದಂತೆ ರಕ್ಷಿಸಿಕೊಳ್ಳಲು ಸ್ನಾನ ಮಾಡದೆ ಮೈ ವಾಸನೆ ಸೂಸಲು ಬಿಡುತ್ತಾರಂತೆ!

******


ಸತತ ಚಲಿಸುತ್ತಿದ್ದ, ಇಡಿಯ ವಿಶ್ವವೇ ಮನೆಯಾಗಿದ್ದ ನಿಜ ವಿಶ್ವಮಾನವರು, ನಿಜ ಜಂಗಮರು ಅವರು. ಮನರಂಜನೆ, ವ್ಯಾಪಾರ, ಬೇಟೆ, ಕಲೆ ಮುಂತಾಗಿ ಜನಸಮುದಾಯಗಳ ನಡುವಿನ, ಸಾಮ್ರಾಜ್ಯಗಳ ನಡುವಿನ ಸೇತುವೆಯಾಗಿ; ರಾಜ್ಯಗಳ ಏಳುಬೀಳುಗಳಿಗೆ ಸಾಕ್ಷಿಯಾಗಿ ಇದ್ದವರು. ಸಂಪರ್ಕ ಸಂವಹನ ಸುಲಭವಿಲ್ಲದ ಕಾಲದಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳು ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ ಚಲಿಸುತ್ತ ಈ ನೆಲದ ಭಾಷೆ, ಸಂಸ್ಕೃತಿ, ಆಚರಣೆಗಳು ವೈವಿಧ್ಯಮಯವಾಗಿ ರೂಪುಗೊಳ್ಳಲು ಕಾರಣರಾಗಿದ್ದರು.

ಆದರೆ ಈಗ ಆಧುನಿಕತೆ ಹಾಗೂ ಜಾಗತೀಕರಣಗಳು ಭಾರತೀಯ ಸಮಾಜದ ಚಿತ್ರಣವನ್ನು ಆಮೂಲಾಗ್ರ ಬದಲಿಸುತ್ತಿರುವಾಗ ಅಲೆಮಾರಿಗಳ ಪಾರಂಪರಿಕ ಜೀವನ ವಿಧಾನ ಪಲ್ಲಟಗೊಳ್ಳತೊಡಗಿದೆ. ಅಂಚಿನ ಸಮುದಾಯಗಳು ತಬ್ಬಲಿಯಾಗತೊಡಗಿವೆ. ಪ್ರಕೃತಿ-ಅರಣ್ಯವೇ ತಮ್ಮ ಶರೀರವೆಂಬಂತೆ ಸಹಬಾಳ್ವೆಯಿಂದ ಬದುಕಿದ್ದವರಿಗೆ ಅಭಿವೃದ್ಧಿ, ಅರಣ್ಯ ರಕ್ಷಣೆ, ಕೈಗಾರಿಕೀಕರಣಗಳ ರೂಪದಲ್ಲಿ ಕಷ್ಟ ಬಂದೆರಗಿದೆ. ಈಗ ಅವರ ಕುಲ ಅಪರಾಧಿಯಲ್ಲದಿರಬಹುದು, ಅವರ ಶಿಕಾರಿ ವೃತ್ತಿ ಅಪರಾಧವೆನಿಸಿಕೊಂಡಿದೆ. ಜೀವಂತ ಹಕ್ಕಿಗಳನ್ನು ಹಿಡಿದು ಸಾಕುವ ಅವರ ಜ್ಞಾನ ಅಪರಾಧವಾಗಿದೆ. ಸ್ವತಂತ್ರ ಭಾರತವು 1952ರಲ್ಲಿ 'ಕ್ರಿಮಿನಲ್ ಟ್ರೈಬ್ಸ್' ಪಟ್ಟಿಯನ್ನು ಡಿನೋಟಿಫೈ ಮಾಡಿ ವಸತಿ, ಶಿಕ್ಷಣ, ಉದ್ಯೋಗ ಪಡೆಯಲು ಕೆಲವು ಯೋಜನೆಗಳನ್ನು ಹಾಕಿಕೊಂಡಿದೆ. ಆದರೆ ಅಲೆಮಾರಿ ಬದುಕಿನ ಸಮಸ್ಯೆಗಳಿಗಿಂತ ಅಲೆಮಾರಿಗಳೇ ಸಮಸ್ಯೆ ಎಂದು ನಾಗರಿಕ ಸಮಾಜ ಹಾಗೂ ಪ್ರಭುತ್ವ ಭಾವಿಸಿರುವುದಕ್ಕೋ ಏನೋ, ಮುನ್ನೋಟವಿಲ್ಲದ ಯೋಜನೆಗಳು ಅವರ ಬದುಕಿಗೆ ಕಂಟಕಗಳಾಗಿ ಪರಿಣಮಿಸಿವೆ.

ಹೀಗೆ ಈ ಸಾಕ್ಷ್ಯಚಿತ್ರ ಕಾಣಿಸುವುದೆಲ್ಲ ಹಕ್ಕಿಪಿಕ್ಕಿ ಸಮುದಾಯದ ಏಳುಬೀಳಿನ ಕತೆ. 'ನಾಗರಿಕ'ಗೊಳಿಸುವ ಯತ್ನದ ಫಲವಾಗಿ ತಮ್ಮ ಜಂಗಮತ್ವ ಕಳೆದುಕೊಂಡು, ತಮ್ಮ ಗಡಿಗಳ ಕುಗ್ಗಿಸಿಕೊಂಡು, ನಾಲ್ಕು ಗೋಡೆಗಳ ನಡುವೆ, ಒಂದು ಕೇರಿ-ಊರಿನ ಮಟ್ಟಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡು ಸ್ಥಾವರಗೊಳ್ಳಲು ಹೊರಟವರ ಸಂಕಷ್ಟದ ಕತೆ. 'ನೆಲ ನಮ್ಮದಲ್ಲ-ನಾವು ನೆಲಕೆ ಸೇರಿದವರು' ಎನ್ನುತ್ತ ಎಲ್ಲೂ ನೆಲೆ ನಿಲ್ಲದೇ ಹರ್ಗಿಸ್ ನೆಲಪತಿಗಳಾಗಲೊಪ್ಪದೇ ಉಳಿದವರ ಕತೆ. ಈಗ ದಶಕಗಳಿಂದ ಬೀಡುಬಿಟ್ಟ ನೆಲದ ಹಕ್ಕುಪತ್ರ ತಮಗೆ ಕೊಡಿ ಎಂದು ಹೋರಾಡುತ್ತಿರುವವರ ಕತೆ.

ಈ ಸಾಕ್ಷ್ಯಚಿತ್ರವು ಹಕ್ಕಿಪಿಕ್ಕಿಗಳ ಬದುಕಿನ ಕುರಿತು ಹಲವು ಒಳ ಸುಳುಹು, ಹೊಳಹುಗಳನ್ನು ಹೊಂದಿದೆ. ಈ ಮೊದಲು 'ಮಹುವಾ ಮೆಮಾಯರ್ಸ್', 'ದ ಬೀ, ದ ಬೇರ್ ಅಂಡ್ ದ ಕುರುಬ' ಮೊದಲಾದ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರಗಳ ತೆಗೆದ ವಿನೋದ್ ರಾಜಾ ಸಾಕಷ್ಟು ವಸ್ತು ವಿವರ, ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿ ಈ ಸಾಕ್ಷ್ಯಚಿತ್ರ ರೂಪಿಸಿದ್ದಾರೆ. ವಿಷಯ ಹಂದರವನ್ನು, ಸಂಭಾಷಣೆಯನ್ನು ಮಧು ಭೂಷಣ್ ನೀಡಿದ್ದಾರೆ. ಒಟ್ಟಾರೆ ಹೇಳುವುದಾದರೆ ಈ ಚಿತ್ರ ನೋಡುವವರಿಗೆ ಸಮಾಜದಿಂದ ಅವಗಣನೆಗೆ ಒಳಗಾದ ಲೋಕದೊಳಗೊಂದು ಸುತ್ತು ಹೋಗಿಬಂದ ಅನುಭವವಾಗುತ್ತದೆ. ಅವರಿಗಾಗಿ ಏನೂ ಮಾಡದ, ಅವರ ಕುರಿತು ಕಿಂಚಿತ್ತೂ ಚಿಂತಿಸದ ನಮ್ಮ ಬೇಜವಾಬ್ದಾರಿತನದ ಬಗೆಗೆ ನಾಚಿಕೆಯಾಗುತ್ತದೆ. ಹಕ್ಕಿಪಿಕ್ಕಿಗಳಿಗಾಗಿ, ಅವರಂಥ ಅದೃಶ್ಯ ಸಮುದಾಯಗಳಿಗಾಗಿ ಏನಾದರೂ ಮಾಡಬಯಸುವವರು ಒಮ್ಮೆಯಾದರೂ ಈ ಚಿತ್ರವನ್ನು ನೋಡಿ ತಮ್ಮ ದಾರಿಯನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

ಆದರೆ ಹೇಳಬೇಕಾದ್ದು ಇನ್ನೆಷ್ಟೋ ಇದೆ; ತಮ್ಮ ಹಕ್ಕು ಸವಲತ್ತುಗಳ ಕುರಿತ ಪ್ರಜ್ಞೆ ಎಚ್ಚೆತ್ತು ಅವರು ಸಂಘಟಿತರಾಗಬೇಕಿದೆ; ಅಂಬೇಡ್ಕರರಂಥ ಧೀಮಂತ ನಾಯಕನೊಬ್ಬ ಅವರ ನಡುವೆ ಹುಟ್ಟಿ ಬರಬೇಕಿದೆ. ಅದಕ್ಕೆ ಪೂರಕವಾಗಿ ಹಕ್ಕಿಪಿಕ್ಕಿಗಳೊಂದಿಗಿನ ತಮ್ಮ ಒಡನಾಟದ ಅನುಭವಗಳನ್ನು, ಈ ಚಿತ್ರ ದಾಖಲಿಸದ ಇನ್ನೆಷ್ಟೋ ತಿಳಿವನ್ನು ಮಧು ದಾಖಲಿಸಬೇಕು. ಒಂದೂಕಾಲು ಗಂಟೆಯಲ್ಲಿ ತೋರಿಸಲಾಗದ ಬಿಟ್ಟ ಪುಟ್ಟಗಳನ್ನು ಬರೆಯಬೇಕು.



■ ಡಾ.ಎಚ್.ಎಸ್.ಅನುಪಮಾ

ದೈತ್ಯಾಕಾರ ತಾಳುತ್ತಿರುವ ನಿರುದ್ಯೋಗ ಸಮಸ್



■ ಸುರೇಶ್ ಭಟ್ ಬಾಕ್ರಬೈಲ್

ಕಳೆದ ಮೂರು ವರ್ಷಗಳ ಅವಧಿಯಲ್ಲಿ 'ಸಬ್ ಕಾ ಸಾಥ್...', 'ಮೇಕ್ ಇನ್ ಇಂಡಿಯಾ' ಇತ್ಯಾದಿ ಘೋಷಣೆಗಳ ಸತ್ಯಾಸತ್ಯತೆಯನ್ನು ಕಂಡಿರುವ ಜನರ ಮನಸ್ಸಿನೊಳಗೆ ನರೇಂದ್ರ ಮೋದಿಯ ಚುನಾವಣಾ ಕಾಲದ ಘೋಷಣೆಗಳೆಲ್ಲವೂ ಬರೀ ಪೊಳ್ಳು ಭರವಸೆಗಳೆಂಬ ಸತ್ಯ ನಿಧಾನಕ್ಕೆ ಇಳಿಯತೊಡಗಿದೆ. ಆದರೂ ಪಟ್ಟುಬಿಡದ ಘೋಷಣೆಗಳ ಸರದಾರ ಇದೀಗ ಜಾತಿವಾದ, ಕೋಮುವಾದ, ಬಡತನ, ಭ್ರಷ್ಟಾಚಾರಗಳ ವಿರುದ್ಧ 'ಕ್ವಿಟ್ ಇಂಡಿಯ' ಎಂಬ ಹೊಸಾ ಘೋಷಣೆಯೊಂದನ್ನು ಹೊರಡಿಸಿರುವುದಾಗಿ ವರದಿಯಾಗಿದೆ. ಜಾತಿವಾದ, ಕೋಮುವಾದಗಳ ಗಂಗೋತ್ರಿಯೆ ಆಗಿರುವ ಸಂಘ ಪರಿವಾರದ ಕಟ್ಟಾಳು ಮೋದಿಯ ಈ ಅಪಾಥಭೂತಿತನದ ಘೋಷಣೆಯನ್ನು ಕೇಳಿ ನಗಬೇಕೊ ಅಳಬೇಕೊ ಗೊತ್ತಾಗುತ್ತಿಲ್ಲ! ಏಕೆಂದರೆ ಯಾವತ್ತಿನಿಂದ ಕೇಂದ್ರದಲ್ಲಿ ತಮ್ಮವರ ಆಳ್ವಿಕೆ ಪ್ರಾರಂಭವಾಯಿತೊ ಆವತ್ತಿನಿಂದಲೆ ಆರೆಸ್ಸೆಸ್ ತನ್ನ ನೂರಾರು ಅಂಗಸಂಸ್ಥೆಗಳ ಮೂಲಕ ಜಾತಿವಾದಿ, ಕೋಮುವಾದಿ ಕೃತ್ಯಗಳ ಸಂಖ್ಯೆ, ತೀವ್ರತೆ ಮತ್ತು ವ್ಯಾಪ್ತಿಗಳನ್ನು ಹೆಚ್ಚಿಸಿರುವ ವಿದ್ಯಮಾನ ಪ್ರಾರಂಭವಾಗಿದೆ. ಇನ್ನು ಬಡಜನರನ್ನು ತೀರ ಕಡೆಗಣಿಸುತ್ತಿರುವ ಸಂದರ್ಭದಲ್ಲಿ ಬಡತನ ನಿರ್ಮೂಲನದ ಬಗ್ಗೆ ಮಾತಾಡಲು ನಾಲಿಗೆಯಾದರೂ ಹೇಗೆ ಬರುತ್ತದೊ ತಿಳಿಯದು. ಭ್ರಷ್ಟಾಚಾರದ ವಿಷಯಕ್ಕೆ ಬಂದರೆ ಅಂಬಾನಿ, ಅದಾನಿ ಮೊದಲಾದ ಕಾರ್ಪೊರೇಟ್ ಕುಳಗಳಿಗೆ ಸಕಲ ಅನುಕೂಲಗಳನ್ನು ಕಲ್ಪಿಸುವುದು, ಜಾಹೀರಾತುಗಳಲ್ಲಿ ಭಾವಚಿತ್ರ ಹಾಕಿಸುವುದು ಭ್ರಷ್ಟ ಆಚಾರವಲ್ಲವೆ? ಸಂಘಿಗಳೆಲ್ಲಾ ಸಚ್ಚಾರಿತ್ರ್ಯವಂತರೆಂದು ನಂಬುವವರು ಅಮಿತ್ ಶಾನ ಸ್ಥಿರ, ಚರ ಸೊತ್ತುಗಳ ಮೌಲ್ಯ ಕಳೆದ ಐದು ವರ್ಷಗಳಲ್ಲಿ ರೂ. 8.54 ಕೋಟಿಯಿಂದ ರೂ. 34.31 ಕೋಟಿಗೆ ಏರಿದುದು ಹೇಗೆಂದು ಕೇಳಬೇಕು. ಬಿಜೆಪಿ ಆಡಳಿತದ ಮಧ್ಯ ಪ್ರದೇಶ, ಛತ್ತೀಸ್‌ಗಢ, ರಾಜಸ್ಥಾನ ಮುಂತಾದ ರಾಜ್ಯಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರುವುದನ್ನು ನೋಡಬೇಕು. ಹೀಗಿರುವ ಮೋದಿ ಸರ್ಕಾರದ ಅವ್ಯವಹಾರಗಳ ಪಟ್ಟಿಗೆ ಇತ್ತೀಚಿನ ಸೇರ್ಪಡೆಯೆಂದರೆ ನಿರುದ್ಯೋಗ ನಿವಾರಣೆಗೆನ್ನಲಾದ 'ಸ್ಕಿಲ್ಸ್ ಇಂಡಿಯ' ಕಾರ್ಯಕ್ರಮ.

ನಿರುದ್ಯೋಗ

ಮೋದಿ ಕೊಟ್ಟಿದ್ದ ಭರವಸೆಯಂತೆ ಶೂನ್ಯವಾಗಬೇಕಿದ್ದ ನಿರುದ್ಯೋಗಿಗಳ ಸಂಖ್ಯೆ ಗಗನಕ್ಕೇರುತ್ತಿರುವುದು ಇವತ್ತಿನ ಕಟುವಾಸ್ತವ. ನೋಟು ರದ್ದತಿಯಿಂದ ನಿಶ್ಚೇಷ್ಟಿತವಾದ ಸಣ್ಣಪುಟ್ಟ ಉದ್ದಿಮೆಗಳು, ನಿರ್ಮಾಣ ಕ್ಷೇತ್ರ, ಕೃಷಿ ವಲಯ ಮುಂತಾದವುಗಳಿಗೆ ಈಗ ಜಿಎಸ್‌ಟಿ ಕೊಟ್ಟಿರುವ ಮತ್ತೊಂದು ಆಘಾತದಿಂದ ಚೇತರಿಸಿಕೊಳ್ಳಲು ಅದೆಷ್ಟು ಸಮಯ ಬೇಕೊ ಗೊತ್ತಿಲ್ಲ. ಒಂದೆಡೆ ಇರುವ ಉದ್ಯೋಗಗಳಲ್ಲಿ ಕಡಿತದ ಜೊತೆ ಸಾಕಷ್ಟು ಹೊಸ ಉದ್ಯೋಗಗಳೂ ಸೃಷ್ಟಿಯಾಗದಿರುವುದರಿಂದ ನಿರುದ್ಯೋಗ ಬೆಳೆಯುತ್ತಿದ್ದರೆ ಇನ್ನೊಂದೆಡೆ ಉದ್ಯೋಗಾಕಾಂಕ್ಷಿಗಳಿಗೆ ಕೌಶಲ ತರಬೇತಿಗಳನ್ನು ನೀಡುವಲ್ಲಿಯೂ ದೊಡ್ಡ ವೈಫಲ್ಯ ಕಂಡುಬರುತ್ತಿದೆ. ಭಾಷಣಗಳಿಗಷ್ಟೆ ಸೀಮಿತವಾಗುಳಿದ 'ಮೇಕ್ ಇನ್ ಇಂಡಿಯಾ'ಗೆ ಪೂರಕ ಎನ್ನಲಾದ 'ಸ್ಕಿಲ್ಸ್ ಇಂಡಿಯಾ' ಎಂಬ ಮತ್ತೊಂದು ಕಾರ್ಯಕ್ರಮದಿಂದಲೂ ನಿರುದ್ಯೋಗ ನಿವಾರಣೆಯಾಗುವ ಲಕ್ಷಣಗಳು ಗೋಚರಿಸುತ್ತಿಲ್ಲ.

ಮೊದಮೊದಲು ಇದನ್ನೆಲ್ಲ ವಿರೋಧಿಗಳ ಅಪಪ್ರಚಾರ ಎಂದು ತಳ್ಳಿಹಾಕಿದ ಮೋದಿ ಸರ್ಕಾರ ಈಗ ದೇಶಾದ್ಯಂತ ಹೊಸ ಉದ್ಯೋಗಗಳ ಸೃಷ್ಟಿ ಕಡಿಮೆಯಾಗಿರುವುದನ್ನು ಒಪ್ಪಿಕೊಂಡಿದೆ. ಕೇಂದ್ರ ಕಾರ್ಮಿಕ ಸಚಿವಾಲಯ ಪ್ರಕಟಿಸಿರುವ ನಿರುದ್ಯೋಗದ ಅಂಕಿಅಂಶಗಳು ಇಂದಿನ ಅಸಲಿ ಪರಿಸ್ಥಿತಿಯನ್ನು ನಮ್ಮ ಮುಂದೆ ತೆರೆದಿಡುತ್ತವೆ. ವಿಷಯ ಏನೆಂದರೆ 2012ರಲ್ಲಿ 4,47,00,000 ಇದ್ದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 2014ರಲ್ಲಿ 4,82,61,100ಕ್ಕೆ ಏರಿದೆ. ಮೋದಿ ಸರ್ಕಾರ ಲೋಕಸಭೆಗೆ ನೀಡಿರುವ ಅಂಕಿಅಂಶಗಳ ಪ್ರಕಾರ 2014ರಲ್ಲಿ ಕೇವಲ 3,38,500 ಮಂದಿಗೆ ಉದ್ಯೋಗ ದೊರಕಿದೆ (0.7%). ಇನ್ನು 2015ರ ಸಾಲಿನಲ್ಲಿ 4,48,52,500 ನೋಂದಾಯಿತ ಉದ್ಯೋಗಾಕಾಂಕ್ಷಿಗಳ ಪೈಕಿ ಕೇವಲ ಶೇಕಡಾ 0.57 ಮಂದಿಗೆ, ಅಂದರೆ 2,53,900 ಮಂದಿಗೆ ಕೆಲಸ ಸಿಕ್ಕಿದೆ. ಅರ್ಥಾತ್ ಪ್ರತಿ 500 ನೋಂದಾಯಿತ ಉದ್ಯೋಗಾಕಾಂಕ್ಷಿಗಳಲ್ಲಿ ಕೆಲಸ ಸಿಕ್ಕಿರುವುದು ಕೇವಲ 3 ಮಂದಿಗೆ. ರಾಷ್ಟ್ರೀಯ ವೃತ್ತಿ ಸೇವೆ ಜಾಲತಾಣದ ಪ್ರಕಾರ 2017ರ ಜೂನ್ 30 ತನಕ ನೋಂದಣಿಯಾಗಿರುವ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಈಗಾಗಲೆ 3.89 ಕೋಟಿಯಷ್ಟಿದೆ. 2016ರ ಇಂಡಿಯಾ ಎಕ್ಸ್‌ಕ್ಲೂಷನ್ ವರದಿ (India Exclusion Report) ಹೇಳುವಂತೆ ನಿರ್ದಿಷ್ಟವಾಗಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 1.2 ಕೋಟಿ ಜನ ಉದ್ಯೋಗ ಮಾರುಕಟ್ಟೆಗಳಿಗೆ ಪ್ರವೇಶಿಸಿದ್ದಾರೆ. ಆದರೆ ಸೃಷ್ಟಿಯಾಗಿರುವ ಹೊಸ ಉದ್ಯೋಗಗಳೆಷ್ಟು? ಕೇವಲ 1.35 ಲಕ್ಷ! ಅರಗಿಸಿಕೊಳ್ಳಲು ಕಷ್ಟವಾದರೂ ಈ ಕಟುಸತ್ಯವನ್ನು ಮೋದಿಭಕ್ತರು ಒಪ್ಪಿಕೊಳ್ಳಲೇಬೇಕು.

ಸ್ಕಿಲ್ಸ್ ಇಂಡಿಯಾ


ಮೋದಿ ಸರ್ಕಾರ ಅಬ್ಬರದ ಪ್ರಚಾರದೊಂದಿಗೆ ಪ್ರಾರಂಭಿಸಿರುವ ಹಲವಾರು ಕಾರ್ಯಕ್ರಮಗಳಲ್ಲಿ 'ಸ್ಕಿಲ್ಸ್ ಇಂಡಿಯಾ' ಅಥವಾ ರಾಷ್ಟ್ರೀಯ ಕೌಶಲ ವಿಕಾಸ ಕಾರ್ಯಕ್ರಮವೂ ಒಂದು. ಇತ್ತೀಚೆಗೆ ತಿಳಿದುಬಂದಿರುವಂತೆ ಮಿಕ್ಕೆಲ್ಲವುಗಳಂತೆ ಇದೂ ಒಂದು ಫ್ಲಾಪ್ ಶೋ ಆಗಿದ್ದು ಅದಕ್ಕಾಗಿ ವ್ಯಯಿಸಿರುವ ಕೋಟಿ ಕೋಟಿ ದುಡ್ಡು ಯಾರ್‍ಯಾರದೊ ಪಾಲಾಗಿದೆ. 'ವಲಯ ಕೌಶಲ ಮಂಡಳಿಗಳ ಕಾರ್ಯನಿರ್ವಹಣೆಯ ಪುನರ್‌ವ್ಯವಸ್ಥೆ ಮತ್ತು ಪ್ರಶಸ್ತತೆಗಾಗಿರುವ ಸಮಿತಿ' (Committee for Rationalisation and Optimisation of the Functioning of the Sector Skill Councils) ಇದೇ ಏಪ್ರಿಲ್ 25ರಂದು ನೀಡಿರುವ ವರದಿ ಮೋದಿ ಸರ್ಕಾರದ 'ಸ್ಕಿಲ್ಸ್ ಇಂಡಿಯಾ' ಕಾರ್ಯಕ್ರಮದ ಒಳಗುಟ್ಟನ್ನೆಲ್ಲಾ ಬಯಲುಮಾಡಿದೆ. 40 ಕೋಟಿ ಮಂದಿಗೆ ಕೌಶಲ ತರಬೇತಿ ನೀಡುವ ಗುರಿಯನ್ನು ಇಟ್ಟುಕೊಂಡು 2015ರಲ್ಲಿ ಜಾರಿಗೊಳಿಸಲಾದ ಈ ಯೋಜನೆಗೆ ಹಾಕಿಕೊಂಡ ಗುರಿ ವಿಪರೀತವಾಯಿತು, ಅದೊಂದು ಅಸಾಧ್ಯವಾದ ಗುರಿ, ಅಷ್ಟೊಂದು ದೊಡ್ಡ ಸಂಖ್ಯೆ ಆಗತ್ಯವಿರಲಿಲ್ಲ ಎಂದು ಸಮಿತಿ ಟೀಕಿಸಿದೆ.

ಕೌಶಲ ತರಬೇತಿಯ ಹಿನ್ನೆಲೆ

2026ಕ್ಕಾಗುವಾಗ ದೇಶದ ಜನಸಂಖ್ಯೆಯ ಶೇಕಡಾ 64ರಷ್ಟು ಮಂದಿ 15ರಿಂದ 59ರ ವಯಸ್ಸಿನವರಾಗಿರುವ ಸಂಭವ ಇದೆಯೆಂದು ಅಂದಾಜಿಸಲಾಗಿದೆ (Ernst and Young ಸಮೀಕ್ಷೆ). ಅದೇ ವೇಳೆ ವಿಶ್ವದಾದ್ಯಂತ 5.65 ಕೋಟಿ ಕುಶಲ ಕಾರ್ಮಿಕರ ಅಭಾವ ತಲೆದೋರಲಿದೆ ಎನ್ನಲಾಗಿದೆ. ವಿಶ್ವದ ಪರಿಸ್ಥಿತಿ ಹೀಗಿದ್ದರೆ 2026ರಲ್ಲಿ ಭಾರತದಲ್ಲಿ 4.7 ಕೋಟಿ ಹೆಚ್ಚುವರಿ ಕುಶಲ ಕಾರ್ಮಿಕರು ಲಭ್ಯವಾಗಲಿರುವರೆಂದು ಸರ್ಕಾರ ಹೇಳುತ್ತಿದೆ. ಆದರೆ ನೆಲದ ವಾಸ್ತವ ಬೇರೆಯೆ ಇದೆ. ಪ್ರಸಕ್ತ ಭಾರತದ ಯುವಜನರಲ್ಲಿ ಶೇಕಡಾ 30ರಷ್ಟು ಮಂದಿ ವಿದ್ಯಾಭ್ಯಾಸ ಮಾಡುತ್ತಿಲ್ಲ ಅಥವಾ ತರಬೇತಿ ಪಡೆಯುತ್ತಿಲ್ಲ ಅಥವಾ ನಿರುದ್ಯೋಗಿಗಳಾಗಿದ್ದಾರೆ ಎನ್ನುತ್ತದೆ ಜುಲೈ 7ರ ಬ್ಲೂಮ್‌ಬರ್ಗ್ ವರದಿ. ಇಂದು ದಕ್ಷಿಣ ಕೊರಿಯಾದ ಒಟ್ಟು ಕಾರ್ಮಿಕರಲ್ಲಿ ವಿದ್ಯುಕ್ತ ತರಬೇತಿ ಪಡೆದವರ ಸಂಖ್ಯೆ ಶೇಕಡಾ 98ರಷ್ಟಿದ್ದರೆ ಜಪಾನಿನಲ್ಲಿ ಶೇಕಡಾ 80, ಜರ್ಮನಿಯಲ್ಲಿ ಶೇಕಡಾ 75, ಬ್ರಿಟನ್‌ನಲ್ಲಿ ಶೇಕಡಾ 68, ಅಮೆರಿಕದಲ್ಲಿ ಶೇಕಡಾ 52 ಮತ್ತು ಚೀನಾದಲ್ಲಿ ಶೇಕಡಾ 24ರಷ್ಟಿದೆ. ಅದೇ ಭಾರತದಲ್ಲಿ? ಕೇವಲ ಶೇಕಡಾ 4.69!

ಭಾರತದ ಆರ್ಥಿಕತೆಗೆ ಅತ್ಯಧಿಕ ಕೊಡುಗೆ ನೀಡುವ ಸೇವಾವಲಯಕ್ಕೆ ಅಧಿಕ ಕೌಶಲದ ಕಾರ್ಮಿಕರ ಅಗತ್ಯವಿದೆ. ಉತ್ಪಾದನಾ ವಲಯಕ್ಕೂ ಕುಶಲ ಕಾರ್ಮಿಕರು ಬೇಕು. ಭಾರತದಲ್ಲಿ ಕನಿಷ್ಠ 69% ಉದ್ಯೋಗಗಳು ಸ್ವಯಂಚಾಲಿತ ಆಗುವ ಸಾಧ್ಯತೆಗಳಿವೆ ಎಂದು ಊಹಿಸಲಾಗಿದೆ. ಸವಾಲನ್ನು ಗ್ರಹಿಸಿದ ಯುಪಿಎ ಸರ್ಕಾರ 2022ರ ಒಳಗಾಗಿ 50 ಕೋಟಿ ಜನರಿಗೆ ತರಬೇತಿ ನೀಡುವ ಗುರಿಯನ್ನು ಹಾಕಿಕೊಂಡು 2009ರಲ್ಲಿ 'ಕೌಶಲ ಅಭಿವೃದ್ಧಿಗೆ ರಾಷ್ಟ್ರೀಯ ನೀತಿ'ಯನ್ನು ಜಾರಿಗೊಳಿಸಿತ್ತು. ಆದರೆ ಈ 50 ಕೋಟಿಯ ಗುರಿಯನ್ನು ಯಾವುದೆ ಆಧಾರವಿಲ್ಲದೆ ನಿಗದಿಪಡಿಸಲಾಗಿತ್ತು ಎಂದು ಸಮಿತಿ ಹೇಳಿದೆ.

2014ರಲ್ಲಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ 2015ರಲ್ಲಿ ಅದೇ ಹಳೆ ಮದ್ಯವನ್ನು 'ಸ್ಕಿಲ್ಸ್ ಇಂಡಿಯ' ಎಂಬ ಹೊಸ ಬಾಟಲಿನಲ್ಲಿ ತುಂಬಿ ಭಾರಿ ಬಾಜಾಬಜಂತ್ರಿಯೊಂದಿಗೆ ಜನರ ಮುಂದೆ ಪ್ರಸ್ತುತಪಡಿಸಿತು. ವಿಶ್ವ ಯುವಜನ ಕೌಶಲ ದಿನವಾದ ಜುಲೈ 15 2015ರಂದು ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮೋದಿ, 2022ರ ಒಳಗಾಗಿ ಹೊಸಬರು ಮತ್ತು ಮೇಲ್ಮಟ್ಟದ/ಮರುತರಬೇತಿಯ ಅಗತ್ಯವಿರುವವರಿಗೆ ತರಬೇತಿ ನೀಡಿ ಒಟ್ಟು 40.2 ಕೋಟಿ ಕುಶಲ ಕಾರ್ಮಿಕರನ್ನು



ಒದಗಿಸುವುದು ಯೋಜನೆಯ ಗುರಿ ಎಂದ. ಆದರೆ ಕೌಶಲ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯ ತನ್ನದೆ ಆದ ಬೇರೊಂದು ಗುರಿಯನ್ನು ಹಾಕಿಕೊಂಡಿದ್ದು ಅದರ ಪ್ರಕಾರ ಕೌಶಲ ತರಬೇತಿ ನೀಡಬೇಕಾಗಿರುವುದು ಸುಮಾರು 12.7 ಕೋಟಿ ಜನರಿಗೆ ಅಂತೆ! ಅಂದರೆ ಸರ್ಕಾರದೊಳಗೇ ಗೊಂದಲಗಳಿರುವಂತಿದೆ.

'ವಲಯ ಕೌಶಲ ಮಂಡಳಿಗಳ ಕಾರ್ಯನಿರ್ವಹಣೆಯ ಪುನರ್‌ವ್ಯವಸ್ಥೆ ಮತ್ತು ಪ್ರಶಸ್ತತೆಗಾಗಿರುವ ಸಮಿತಿ'ಯ ವರದಿ

ಸಮಿತಿಯ ಪ್ರಕಾರ ಭಾರತದ ವೃತ್ತಿಶಿಕ್ಷಣ ಮತ್ತು ತರಬೇತಿ ಕ್ಷೇತ್ರದಲ್ಲಿ ಹಲವಾರು ಕುಂದುಕೊರತೆಗಳಿವೆ. ಉದಾಹರಣೆಗೆ ಅಲ್ಲಿ ರಾಷ್ಟ್ರೀಯ ಮಾನದಂಡಗಳಿಲ್ಲ, ಸ್ಥಳದಲ್ಲಿ ಶಿಷ್ಯವೃತ್ತಿ ತರಬೇತಿ ಇಲ್ಲ, ಕೈಗಾರಿಕಾ ವಲಯದೊಂದಿಗೆ ಅಂತರಕ್ರಿಯೆ ಇಲ್ಲ; ಇದರೊಂದಿಗೆ ಕಡಿಮೆ ಸಾಮರ್ಥ್ಯ, ಹಣಕಾಸಿನ ಕೊರತೆ, ಕಳಪೆ ಗುಣಮಟ್ಟ ಮತ್ತು ದಕ್ಷ ತರಬೇತುದಾರರ ಕೊರತೆಗಳೂ ಕಾಡುತ್ತಿವೆ.

ಕೌಶಲ ತರಬೇತಿ ನೀಡುತ್ತಿರುವ ಅನೇಕ ಸಚಿವಾಲಯಗಳಲ್ಲಿ ದಕ್ಷ ತರಬೇತುದಾರರೂ ಇಲ್ಲ, ಮೂಲ ವ್ಯವಸ್ಥೆಗಳೂ ಇಲ್ಲ. ಹೀಗಾಗಿ ಅಲ್ಲಿ ನೀಡಲಾಗುತ್ತಿರುವ ತರಬೇತಿಯ ಗುಣಮಟ್ಟ ಕಳಪೆಯಾಗಿದೆ.

ಕೇವಲ 8 ಗಂಟೆಗಳ ತರಬೇತಿ ನೀಡಿರುವ ಉದಾಹರಣೆಗಳೂ ಇವೆ! ಇವು ಉದ್ಯೋಗಪತಿಗಳ ಆಗತ್ಯಗಳನ್ನೂ ಪೂರೈಸುವುದಿಲ್ಲ, ಅಭ್ಯರ್ಥಿಗಳಿಗೆ ತಕ್ಕಮಟ್ಟಿನ ಜೀವನನಿರ್ವಹಣೆಯ ಅವಕಾಶಗಳನ್ನೂ ಒದಗಿಸುವುದಿಲ್ಲ. ಕಳೆದ 5 ವರ್ಷಗಳ ಅವಧಿಯಲ್ಲಿ ಒಂದನ್ನು ಬಿಟ್ಟು ಉಳಿದೆಲ್ಲಾ ವರ್ಷಗಳಲ್ಲಿ ನಿಗದಿತ ಗುರಿಗಳನ್ನು ಸಾಧಿಸಲಾಗಿಲ್ಲ. 2015-16ರ ಸಾಲಿನಲ್ಲಿ ಕೌಶಲ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯ ತನ್ನ ಗುರಿಯ ಶೇಕಡಾ 58ರಷ್ಟನ್ನು ಸಾಧಿಸಿದ್ದರೆ ಉಳಿದ 19 ಸಚಿವಾಲಯಗಳ ಒಟ್ಟಾರೆ ಸಾಧನೆ 42 ಪ್ರತಿಶತ ಅಷ್ಟೆ. ಗಣನೀಯ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸುವ ಹೊಣೆಗಾರಿಕೆ ಹೊತ್ತಿರುವ ಮಾನವ ಸಂಪನ್ಮೂಲ ಅಭಿವೃದ್ಧಿ, ಜವಳಿ, ವಾಣಿಜ್ಯ ಕೈಗಾರಿಕೆ, ಪ್ರವಾಸೋದ್ಯಮ ಗಳಂತಹ ಕೆಲವು ಪ್ರಮುಖ ಸಚಿವಾಲಯಗಳಿಗೆ ಕೌಶಲ ಅಭಿವೃದ್ಧಿ ಕಾರ್ಯವನ್ನು ನೀಡಲಾಗಿಲ್ಲ. "ಕೆಲವೊಂದು ಸಚಿವಾಲಯಗಳಿಗೆ ಉದ್ಯೋಗಗಳನ್ನು ಸೃಷ್ಟಿಸುವ ಕಾ... ನೀಡಲಾಗಿದೆ. ಆದರೆ... ಇದರ ಅರ್ಥ ಅದೇ ಕಾ... ಅವು ಕೌಶಲ ತರಬೇತಿ ಕೂಡಾ ನೀಡಲಿವೆ ... ಎಂದು ವರದಿ ಹೇಳುತ್ತದೆ.

ವಲಯ ಕೌಶಲ ಮಂಡಳಿ

ಉದ್ಯಮಗಳ ನೇತೃತ್ವದಲ್ಲಿರುವ 'ವಲಯ ... ಮಂಡಳಿ'ಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು ಅಲ್ಲಿ ನೀಡ... ಕೌಶಲ ತರಬೇತಿಗಳು ಉದ್ಯೋಗಪತಿಗಳ ಅಗತ್ಯಗಳಿಗ... ಇರುವಂತೆ ನೋಡಿಕೊಳ್ಳಲಾಗುತ್ತದೆ. ಈ ಮಂಡ... ಕಾರ್ಯಕ್ರಮಗಳನ್ನು ಯೋಜಿಸುವ, ನಡೆಸುವ, ಶಿಕ್ಷ... ಗುಣಮಟ್ಟ ಅಳೆಯುವ ಜವಾಬ್ದಾರಿ ಇದೆ. ... ರೀಟೇಲ್, ಆರೋಗ್ಯಸೇವೆ, ಚರ್ಮ, ... ಸಂಸ್ಕರಣೆಗಳಂತಹ ಅಧಿಕ ಬೆಳವಣಿಗೆಯ ಕ್ಷೇತ್... ಮತ್ತು ಸೌಂದರ್ಯ ಹಾಗೂ ಆರೋಗ್ಯ ಭದ್ರತೆ, ಮ... ಪ್ಲಂಬಿಂಗ್ ಇತ್ಯಾದಿ ಅನೌಪಚಾರಿಕ ಕ್ಷೇತ್ರಗಳಿ... ಸುಮಾರು 40 ಮಂಡಳಿಗಳನ್ನು ಸ್ಥಾಪಿಸಲಾಗಿದೆ. ... ಅವುಗಳನ್ನು ಗೊತ್ತುಗುರಿಯಿಲ್ಲದೆ ಸ್ಥಾಪಿಸಲಾ... ಮಾನದಂಡಗಳನ್ನು ಗಾಳಿಗೆ ತೂರಲಾಗಿದೆ. ವಲಯ ... ಮಂಡಳಿಗಳ ಸ್ಥಾಪನೆ ಸಮಸ್ಯೆಗಳನ್ನು ಬಗೆಹರಿಸುವ ... ಗೊಂದಲದ ಗೂಡನ್ನು ಸೃಷ್ಟಿಸಿದೆ ಎನ್ನುತ್ತದೆ ಸ... ವರದಿ. ಉದಾಹರಣೆಗೆ ಮಾಧ್ಯಮ ಮತ್ತು ಮನರ... ವಲಯವನ್ನು ತೆಗೆದುಕೊಂಡರೆ ಅಲ್ಲಿ 2013ರಲ್ಲಿ ... ಜನರಿಗೆ ಉದ್ಯೋಗ ನೀಡಿರುವ ಹೊರತಾಗಿ... ಅದಕ್ಕೊಂದು ಮಂಡಳಿಯನ್ನು ಸ್ಥಾಪಿಸಲಾಗಿದೆ.

ಉತ್ಪ್ರೇಕ್ಷಿತ ಗುರಿಗಳು, ಅವ್ಯವಹಾರ...

ವಲಯ ಕೌಶಲ ಮಂಡಳಿಗಳಿಗೆ ನಿಧಿ ಹಂಚಿಕೆ... ವುದು ಅವುಗಳ ಗುರಿಯನ್ನು ಹೊಂದಿಕೊಂಡು. ... ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವು ಇಚ್ಛಾನುಸಾ... ಮಂಡಳಿಗಳಿಗೆ ಉತ್ಪ್ರೇಕ್ಷಿತ ಗುರಿಗಳನ್ನು ನಿಗದಿ... ಅವುಗಳಿಂದ ಬಲವಂತವಾಗಿ ಸಹಿ ಪಡೆದುಕೊಂಡು ... ನಿಧಿಗಳನ್ನು ಸಂಗ್ರಹಿಸಿದೆ. ಉತ್ತರ ಪ್ರದೇಶ, ಹರ... ರಾಜಸ್ಥಾನಗಳ ಕೌಶಲ ಅಭಿವೃದ್ಧಿ ಕೇಂದ್ರ... ನೋಂದಾವಣೆಯಾಗಿರುವ ಹೆಸರುಗಳಲ್ಲಿ ಸುಮಾರು ... 40ರಷ್ಟು ನಕಲಿ ಎಂದು ಪತ್ತೆಯಾಗಿದೆ (ಹಿಂದೂ... ಟೈಮ್ಸ್, ಜೂನ್ 29). ಆಗತಾನೆ ತೇರ್ಗಡೆ... ಹೊಚ್ಚಹೊಸಾ ಎಂಜಿನಿಯರಿಂಗ್ ಪದವೀಧರರು ... ಡಿಪ್ಲೊಮಾ ಹೊಂದಿದವರಿಗೆ 2-5 ದಿನಗಳ ತರ... ನೀಡಿ ತರಬೇತುದಾರರನ್ನಾಗಿ ಮಾಡಲಾಗಿದೆ. ... ತರಬೇತುದಾರರ ತರಬೇತಿಯ ಅಣಕವಾಗಿದೆ ... ವರದಿ ಹೇಳುತ್ತದೆ.

ಹಿಂದಿನ 'ಕೌಶಲ ಕಲಿಕೆಯ ಗುರುತಿಸುವಿಕೆ' ... ಕಾರ್ಯಕ್ರಮದಡಿ ಈಗಾಗಲೆ ಅನುಭವ ಇರು... ಕೌಶಲವನ್ನು ಅಳೆದು ಪ್ರಮಾಣಪತ್ರ ನೀಡುವಲ್ಲಿ ... ಅವ್ಯವಹಾರ, ಭ್ರಷ್ಟಾಚಾರ ನಡೆದಿದೆ. ಮಂಡಳಿ... ಅವೈಜ್ಞಾನಿಕವಾಗಿ ಕಾರ್ಯ ನಿರ್ವಹಿಸಿ ಸಂಸ್ಥೆ... ತರಬೇತುದಾರರಿಗೆ, ಶಿಕ್ಷಾರ್ಥಿಗಳಿಗೆ ಇಚ್ಛಾನುಸಾರ... ಪ್ರಮಾಣಪತ್ರ ನೀಡಿವೆ. 2, 3 ಗಂಟೆಗಳ ತರಬೇತಿ ಕೆ... ಪ್ರಮಾಣಪತ್ರ ನೀಡುವ ಮೂಲಕ ಸಂಖ್ಯೆಗ... ಹೆಚ್ಚಿಸಲಾಗಿರುವ ಅಂಶವೂ ಬೆಳಕಿಗೆ ಬಂದಿದೆ.

2008ರಲ್ಲಿ ಸರ್ಕಾರಿ ಮತ್ತು ಖಾಸಗಿ ವಲ... ಜಂಟಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಕ... ಅಭಿವೃದ್ಧಿ ನಿಗಮದ ಮೂಲಕ ಖಾಸಗಿ ವಲಯದ ಸ... ತರಬೇತು ಸಂಸ್ಥೆಗಳಿಗೆ ಕಡಿಮೆ ಬಡ್ಡಿಗೆ ಸಾಲ, ... ದತ್ತಿಗಳನ್ನು ನೀಡಲಾಯಿತು. ಹೀಗೆ ಆರಂಭದಲ್ಲಿ ... ಸುಮಾರು ರೂ. 1,500 ಕೋಟಿ ಸಾಲಗಳಲ್ಲಿ ಹೆ... ಮರುಪಾವತಿಯಾಗಿಲ್ಲ ಎಂದು ತಿಳಿದುಬಂದಿದೆ.

ಯುವಜನರಿಗೆ ಸರಿಯಾದ ತರಬೇತಿ ನೀಡಲ... ಅವರನ್ನು ಸೂಕ್ತ ಉದ್ಯೋಗಗಳಲ್ಲಿ ... ನಿಯೋಜಿಸಲಾಗಿಲ್ಲ, ವಿವಿಧ ಕ್ಷೇತ್ರಗಳಿಗೆ ಬೇಕಿದ್ದ ಕ... ಕಾರ್ಮಿಕರ ಗುರಿಯನ್ನೂ ಸಾಧಿಸಲಾಗಿಲ್ಲ, ರಾಷ್ಟ್ರೀಯ ಕ... ಅಭಿವೃದ್ಧಿ ನಿಗಮದ ವತಿಯಿಂದ 201... ಪ್ರಾರಂಭಿಸಲಾದ 'ರಾಷ್ಟ್ರೀಯ ಕೌಶಲ ಪ್ರಮಾಣೀ... ಮತ್ತು ನಗದು ಬಹುಮಾನ ಯೋಜನೆ'ಯನ್ನು (ST... ಕೆಟ್ಟದಾಗಿ ರೂಪಿಸಲಾಗಿದ್ದು ಅದರ ಅನುಷ್ಠಾನ... ಸರಿಯಾಗಿಲ್ಲ, (STAR) ಕಾರ್ಯಕ್ರಮದ ಮೌಲ್ಯಮ... ಮಾಡದೆ 2015ರ ಜುಲೈನಲ್ಲಿ ನೇರವಾಗಿ 'ಪ್ರಧಾನ ... ಕೌಶಲ ವಿಕಾಸ ಯೋಜನೆ'ಯನ್ನು (ಪ್ರಮಕೌ... ಪ್ರಾರಂಭಿಸಿರುವುದರೊಂದಿಗೆ ರೂ. 1,500 ಕೋ... ಹೆಚ್ಚುವರಿ ಮೊಬಲಗನ್ನೂ ತೊಡಗಿಸಲಾಗಿದೆ. ಮೋ... ಸರ್ಕಾರದ ಈ ಮಹತ್ವಾಕಾಂಕ್ಷೆ ಯೋಜನೆಯ ಅನು... ಮತ್ತು ಫಲಿತಾಂಶಗಳೆರಡೂ ತೀರ ಕೆಟ್ಟದಾಗಿವೆ ಎ... ವರದಿ ತಿಳಿಸುತ್ತದೆ.

▶▶ 1...

EPW ಸಂಪಾದಕೀಯ


ಕೃಪೆ: *Economic and Political Weekly*


July 29, 2017. Vol. 52. No. 30


■ ಅನು: ಶಿವಸುಂದರ್

ನಾಗಾಲ್ಯಾಂಡಿನಲ್ಲಿ ಅಧಿಕಾರದ ಜೂಟಾಟ

ರಾಜ್ಯಪಾಲರ ಸಕ್ರಿಯ ಮಧ್ಯಪ್ರವೇಶದ ನಡುವೆಯೂ ನಾಗಾಲ್ಯಾಂಡಿನಲ್ಲಿ ನಡೆಯುತ್ತಿರುವ ರಾಜಕೀಯ ನಾಟಕ ಸದ್ಯಕ್ಕೆ ಮುಗಿಯುವಂತೆ ಕಾಣುತ್ತಿಲ್ಲ.


ಟಿ.ಆರ್.ಜೆಲಿಯಾಂಗ್


ಶುರ್ಹೋಜೆಲಿ ಲಿಯೆಜ್ಯು



ಹಲವು ಅಸಾಧಾರಣ ರಾಜಕೀಯ ಬೆಳವಣಿಗೆಗಳ ನಂತರ ಜುಲೈ 17ರಂದು ನಾಗಾಲ್ಯಾಂಡಿನ ಮುಖ್ಯಮಂತ್ರಿಯಾಗಿ ಅಧಿಕಾರ ಹಿಡಿದ ಟಿ.ಆರ್.ಜೆಲಿಯಾಂಗ್ ಅವರು ತನ್ನ ಬೆಂಬಲಿಗರನ್ನು ಸಂತೋಷಪಡಿಸಲು ಹೊಸ ಮಾರ್ಗವನ್ನೇ ಅನುಸರಿಸುತ್ತಿದ್ದಾರೆ. ವಿಧಾನಸಭೆಯಲ್ಲಿ ಬಹುಮತವನ್ನು ಸಾಬೀತುಪಡಿಸಿದ ನಂತರ ಅವರು 11 ಶಾಸಕರನ್ನು ತನ್ನ ಸಚಿವಸಂಪುಟಕ್ಕೆ ಆಯ್ಕೆ ಮಾಡಿಕೊಂಡರು. ಅದರಲ್ಲಿ ನಾಲ್ವರು ಶಾಸನಸಭಾ ಸದಸ್ಯರನ್ನು ಹೊಂದಿರುವ ಬಿಜೆಪಿ ಪಕ್ಷದ ಇಬ್ಬರಿದ್ದರು. ಅದಾದಬಳಿಕ ಅವರು ಅಲ್ಲಿವರೆಗೆ ಆಡಳಿತದಲ್ಲಿದ್ದ ನಾಗಾ ಪೀಪಲ್ಸ್ ಫ್ರಂಟ್(ಎನ್‌ಪಿಎಫ್)ನಿಂದ ಬಂಡೆದ್ದು ತನ್ನನ್ನು ಬೆಂಬಲಿಸಿದ 47 ಬಂಡುಕೋರ ಶಾಸಕರಲ್ಲಿ ಇನ್ನೂ 35 ಜನರನ್ನು ಸಂತುಷ್ಟಗೊಳಿಸಬೇಕಾಯಿತು. ಹೀಗಾಗಿ ಅವರಲ್ಲಿ 26 ಜನರಿಗೆ ಕ್ಯಾಬಿನೆಟ್ ಸಚಿವರ ಸ್ಥಾನಮಾನ ನೀಡಿ ಸಂಸದೀಯ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡರು. ಉಳಿದ 9 ಜನರಿಗೂ ಸಚಿವ ಸಂಪುಟದ ಸ್ಥಾನಮಾನ ಕೊಟ್ಟು ಸಲಹೆಗಾರರನ್ನಾಗಿ ನೇಮಿಸಿಕೊಂಡರು. ಇದರಿಂದಾಗಿ 60 ಸದಸ್ಯ ಬಲದ ನಾಗಾಲ್ಯಾಂಡಿನ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಜೆಲಿಯಾಂಗ್ ಅವರು ವಿಶ್ವಾಸ ಮತ ಯಾಚನೆ ಮಾಡಿದಾಗ ಅವರ ಪರವಾಗಿ ಮತಚಲಾಯಿಸಿದ ಎಲ್ಲಾ ನಲವತ್ತೇಳು ಬಂಡಾಯ ಸದಸ್ಯರಿಗೂ ಈಗ ಕ್ಯಾಬಿನೆಟ್ ಸಚಿವರ ಸ್ಥಾನಮಾನ ಸಿಕ್ಕಂತಾಗಿದೆ.

ಆದರೆ ಜೆಲಿಯಾಂಗರ ದುರದೃಷ್ಟ. ಅದರ ಮರುದಿನವೇ, ಅಂದರೆ ಜುಲೈ 26ರಂದು, ಸುಪ್ರೀಂಕೋರ್ಟು ಮತ್ತೊಂದು ಪ್ರಕರಣದಲ್ಲಿ (ಅಸ್ಸಾಂ ಸಂಸದೀಯ ಕಾರ್ಯದರ್ಶಿ (ನೇಮಕಾತಿ, ಸಂಬಳ-ಭತ್ಯೆ ಮತ್ತಿತರ ಸಂಬಂಧಿ) ಕಾಯಿದೆ-2004 ಅನ್ನು ಅಸಿಂಧು ಎಂದು ಘೋಷಿಸುತ್ತಾ) ರಾಜ್ಯಗಳ ವಿಧಾನಸಭೆಗಳಲ್ಲಿ ಸಂಸದೀಯ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಳ್ಳುವುದು ಸಂವಿಧಾನಬಾಹಿರವೆಂದು ತೀರ್ಪನ್ನು ನೀಡಿದೆ. ಇದು ನೇರವಾಗಿ ಜೆಲಿಯಾಂಗರ ತುಷ್ಟೀಕರಣ ತಂತ್ರದ ಮೇಲೆ ಪರಿಣಾಮ ಬೀರಲಿದೆ. ಆದರೆ ಚಾಣಾಕ್ಷರಾದ ಜೆಲಿಯಾಂಗರು ಬೇರೆ ಯಾವುದಾದರೂ ಸೃಜನಶೀಲ ಮಾರ್ಗವನ್ನು ಖಂಡಿತಾ ಹುಡುಕಿಕೊಳ್ಳುತ್ತಾರೆ.

ಅಧಿಕಾರದೆಡೆಗಿನ ಜೆಲಿಯಾಂಗರ ಪ್ರಯಾಣ ನಾಟಕೀಯವಾಗಿ ಕಂಡರೂ ಹಲವು ವಿವಾದಗಳಿಂದ ಕೂಡಿದೆ. ಜೆಲಿಯಾಂಗರು ದೇಶದೆಲ್ಲೆಡೆ ಇರುವಂತೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಕಲ್ಪಿಸುತ್ತಾ ನಾಗಾಲ್ಯಾಂಡಿನ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲು ಉದ್ದೇಶಿಸಿದ್ದರು. ಈ ತೀರ್ಮಾನದ ಕುರಿತು ರಾಜ್ಯಾದ್ಯಂತ ಹಿಂಸಾತ್ಮಕ ಪ್ರತಿಭಟನೆಗಳು ಭುಗಿಲೆದ್ದದ್ದರಿಂದ ಅವರು ರಾಜೀನಾಮೆ ಕೊಡಬೇಕಾಗಿ ಬಂದಿತು. ಆಗ ಎನ್‌ಪಿಎಫ್ ಪಕ್ಷವು ತಮ್ಮ ಪಕ್ಷದ ಗಣ್ಯ ಸದಸ್ಯರಾದ 81 ವರ್ಷದ ಶುರ್ಹೋಜೆಲಿ ಲಿಯೆಜ್ಯು ಅವರನ್ನು ಸರ್ವಸಮ್ಮತ ಮುಖ್ಯಮಂತ್ರಿಯನ್ನಾಗಿ ಮಾಡಿತು. ಆದರೆ ಅವರು ವಿಧಾನಸಭಾ ಸದಸ್ಯರಾಗಿರಲಿಲ್ಲ. ಹೀಗಾಗಿ ಅವರ ಮಗ ತೆರವು ಮಾಡಿಕೊಟ್ಟ ಕ್ಷೇತ್ರದಲ್ಲಿ ಇದೇ ಜುಲೈ 29ರಂದು ನಡೆಯಲಿದ್ದ ಉಪಚುನಾವಣೆಯಲ್ಲಿ ಅವರು ಸ್ಪರ್ಧಿಸಬೇಕಿತ್ತು. ಆದರೆ ಆ ಉಪಚುನಾವಣೆಗೆ ಒಂದು ತಿಂಗಳು ಬಾಕಿ ಇರುವಾಗಲೇ ಜೆಲಿಯಾಂಗರು ಈ ಬಾಂಬ್ ಸ್ಫೋಟ ಮಾಡಿಬಿಟ್ಟರು.

ಈಗ ನಾಗಾಲ್ಯಾಂಡಿನ ರಾಜ್ಯಪಾಲರಾಗಿರುವುದು ಬಿಜೆಪಿ ಪಕ್ಷದ ಈಶಾನ್ಯ ರಾಜ್ಯಗಳ ಉಸ್ತುವಾರಿಯಾಗಿದ್ದ ಪಿ.ಬಿ.ಆಚಾರ್ಯ ಅವರೇ. ಈ ಬೆಳವಣಿಗೆಗಳಲ್ಲಿ ಅವರ ನಡೆಯೂ ಅತ್ಯಂತ ವಿವಾದಾಸ್ಪದವಾಗಿದೆ. ಬಹುಮತವನ್ನು ಸಾಬೀತುಪಡಿಸಲು ನಿಗದಿಯಾದ ಸಮಯಕ್ಕೆ ಲಿಯೆಜ್ಯು ಅವರು ವಿಧಾನಸಭೆಗೆ ಹಾಜರಾಗಲಿಲ್ಲವೆಂಬ ನೆಪವೊಡ್ಡಿ ರಾಜ್ಯಪಾಲರು ಜುಲೈ 19ರಂದು ಜೆಲಿಯಾಂಗರನ್ನು ಆತುರಾತುರವಾಗಿ ಮುಖ್ಯಮಂತ್ರಿ ಹುದ್ದೆಯಲ್ಲಿ ಕೂರಿಸಿಬಿಟ್ಟರು. ಎನ್‌ಪಿಎಫ್ ಒಳಗಿನ ಭಿನ್ನಮತವು ಪಕ್ಷದೊಳಗಿನ ವ್ಯವಹಾರವಾಗಿದ್ದು ಅದನ್ನು ಬಗೆಹರಿಸುವ ವೇದಿಕೆ ಪಕ್ಷವೇ ವಿನಃ ವಿಧಾನಸಭೆಯಲ್ಲವೆಂದು ಲಿಯೆಜ್ಯು ಅವರು ಪ್ರತಿಪಾದಿಸಿದರು. ಸಾಧಾರಣವಾಗಿ ಒಂದು ಆಳುವ ಪಕ್ಷದಲ್ಲಿ ಬಿಕ್ಕಟ್ಟು ಉಂಟಾದಾಗ ಅದು ಔಪಚಾರಿಕವಾಗಿ ವಿಭಜನೆಗೊಂಡು ಒಂದು ಸಾಂವಿಧಾನಿಕ ಬಿಕ್ಕಟ್ಟು ಉಂಟಾಗದ ಹೊರತು ಇಂಥಾ ಒಳಜಗಳಗಳನ್ನು ಬಗೆಹರಿಸಿಕೊಳ್ಳುವ ಜವಾಬ್ದಾರಿಗಳನ್ನು ಆಯಾ ಪಕ್ಷಗಳ ಸಂಬಂಧಪಟ್ಟಗಳ ವೇದಿಕೆಗಳಿಗೆ ಬಿಟ್ಟುಕೊಡಬೇಕು. ಕುತೂಹಲಕಾರಿ ವಿಷಯವೆಂದರೆ ಮೇಲಿನ ಸ್ತರದಲ್ಲಿ ಬದಲಾವಣೆಗಳಾಗಿ ಪಕ್ಷದ ವಿಪ್ ಅನ್ನು ಉಲ್ಲಂಘಿಸಿ ಸಾಮೂಹಿಕ ಅಡ್ಡಮತದಾನ ನಡೆದಿದ್ದರೂ ಎನ್‌ಪಿಎಫ್ ವಿಭಜನೆಯಾಗಿದೆಯೆಂದು ಈವರೆಗೂ ಅಧಿಕೃತವಾಗಿ ಪರಿಗಣಿಸಲಾಗಿಲ್ಲ.

ಜೆಲಿಯಾಂಗರ ಈ ಕ್ಷಿಪ್ರದಂಗೆಯ ನಂತರವೂ ಲಿಯೆಜ್ಯು ಅವರು ಪದವಿಯನ್ನು ಬಿಟ್ಟುಕೊಡಲು ನಿರಾಕರಿಸಿದ್ದರು. ಆಗ ರಾಜ್ಯಪಾಲರು ಅವರಿಗೆ ತಮ್ಮ ಬಹುಮತವನ್ನು ಸದನದೊಳಗೆ ಸಾಬೀತುಪಡಿಸಲು ಹೇಳಿದರು. ಆದರೆ ಅದನ್ನು ಒಪ್ಪದ ಅವರು ಎನ್‌ಪಿಎಫ್ ಪಕ್ಷದ ಬಿಕ್ಕಟ್ಟು ಪಕ್ಷದೊಳಗಿನ ಆಂತರಿಕ ವಿಷಯವೆಂದು ಪ್ರತಿಪಾದಿಸುತ್ತಾ ಗೌಹಾಟಿ ಉಚ್ಚ ನ್ಯಾಯಾಲಯದ ಕೊಹಿಮಾ ಪೀಠದೆದುರು ರಾಜ್ಯಪಾಲರ ಆದೇಶವನ್ನು ಪ್ರಶ್ನಿಸಿದರು. ಆದರೆ ಕೋರ್ಟು ಲಿಯೆಜ್ಯು ಅವರ ವಾದವನ್ನು ಮತ್ತವರ ಅಹವಾಲನ್ನು ತಿರಸ್ಕರಿಸಿತು. ಅಷ್ಟು ಮಾತ್ರವಲ್ಲದೆ, "ರಾಜ್ಯಪಾಲರು ತಮ್ಮ ವಿವೇಚನೆಯನ್ನು ಬಳಸಿ ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು" ಎಂಬ ಆಶ್ಚರ್ಯಕರ ತೀರ್ಪನ್ನು ನೀಡಿತು. ರಾಜ್ಯಪಾಲರು ತಮ್ಮ ವಿವೇಚನೆಯನ್ನು ಬಳಸಲೇ ಇಲ್ಲವೆಂದು ನಂತರ ಲಿಯೆಜ್ಯು ಅವರು ವ್ಯಂಗ್ಯವಾಡಿದರು.

ಈ ಬೆಳವಣಿಗೆಗಳಿಂದ ಕ್ರುದ್ಧರಾಗಿರುವ ಲಿಯೆಜ್ಯು ಅವರು ತನ್ನ ಬದ್ಧ ಶತ್ರುವಾಗಿ ಪರಿಣಮಿಸಿರುವ ಜೆಲಿಯಾಂಗರು ರಾಜ್ಯಪಾಲರ ಜೊತೆ ಸೇರಿ ನಾಗಾಲ್ಯಾಂಡಿನಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ದುರುದ್ದೇಶವನ್ನು ಹೊಂದಿದ್ದಾರೆಂದು ಆರೋಪಿಸಿದ್ದಾರೆ.

ಹಾಗೂ ಜೆಲಿಯಾಂಗರನ್ನು ಹೆರಾಕ ಪುಂಡನೆಂದು ನಿಂದಿಸಿದ್ದಾರೆ.

ಜೆಲಿಯಾಂಗ್ ಅವರು ನಾಗಾಲ್ಯಾಂಡ್, ಅಸ್ಸಾಮ್ ಮತ್ತು ಮಣಿಪುರಗಳಲ್ಲಿ ಹರಡಿಕೊಂಡಿರುವ ನಾಗಾ ಬುಡಕಟ್ಟಿನ ಜೆಲಿಯಾಂಗ್ರಾಂಗ್ ಗುಂಪಿಗೆ ಸೇರಿದವರು. ಈ ಗುಂಪು ಉಳಿದವರಿಗಿಂತ ತಡವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಕೊಂಡಿತು. ಈಗಲೂ ಅವರಲ್ಲಿ ಹಲವರು ಕ್ರಿಶ್ಚಿಯನ್ ಧರ್ಮಕ್ಕೆ ಮುನ್ನ ಅನುಸರಿಸುತ್ತಿದ್ದ ಹೆರಾಕ ಎಂಬ ಪಂಥವನ್ನು ಅನುಸರಿಸುತ್ತಾರೆ. ಈ ಪಂಥದ ಬಂಡುಕೋರ ನಾಯಕಿಯಾದ ರಾಣಿ ಗೈಡಿನ್ಲಿಯು ಅವರ ಮೂಲಕ ಹೆರಾಕ ಪಂಥವು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಸಿದ್ಧಿಗೆ ಬಂದಿತು. ಗೈಡಿನ್ಲಿಯು ಅವರು ಬ್ರಿಟಿಷ್ ಆಡಳಿತದ ವಿರುದ್ಧ ಬಂಡೆದ್ದದ್ದು ಮಾತ್ರವಲ್ಲದೆ, ನಾಗಾ ಸಾರ್ವಭೌಮತೆಗಾಗಿ ಹೋರಾಡುತ್ತಿದ್ದ ಎ.ಜೆಡ್.ಫಿಜೋ ಅವರ ನಾಗಾ ನ್ಯಾಷನಲ್ ಕೌನ್ಸಿಲ್ ಅನ್ನೂ ವಿರೋಧಿಸುತ್ತಿದ್ದರು. ಸ್ವಾತಂತ್ರ್ಯಾನಂತರದಲ್ಲಿ ಬ್ರಿಟಿಷ್ ಸೆರೆಮನೆಯೊಂದರಲ್ಲಿ ಅವರನ್ನು ಪತ್ತೆಹಚ್ಚಿದ ನೆಹರೂ ಅವರು ಆಕೆಯ ಪ್ರತಿರೋಧದ ಕಥೆಯನ್ನು ಕೇಳಿ ಮೆಚ್ಚಿಕೊಂಡು ರಾಣಿ ಎಂಬ ಬಿರುದನ್ನು ನೀಡಿದರು. ಆನಂತರ ಪದ್ಮಭೂಷಣ ಪ್ರಶಸ್ತಿಯನ್ನೂ ನೀಡಿದರು. ಗೈಡಿನ್ಲಿಯುನ್ನು ಮಣಿಪುರದ ಜನರು ಆದರಾಭಿಮಾನಗಳಿಂದ ಕಾಣುತ್ತಾರೆ. ಆದರೆ ನಾಗಾಲ್ಯಾಂಡಿನಲ್ಲಿ ಮಾತ್ರ ಅವರ ಪ್ರತಿಮೆಯನ್ನು ಕಟ್ಟುವ ಯೋಜನೆಗೆ ದೊಡ್ಡ ಪ್ರತಿರೋಧವೇ ಎದುರಾಯಿತು. ಈ ಮಧ್ಯೆ ಬಿಜೆಪಿಯು ಹೆರಾಕ ಪಂಥೀಯರನ್ನು ತನ್ನ ಪಕ್ಷಕೆ ಸೇರಿಸಿಕೊಳ್ಳುತ್ತಿದೆಯೆಂಬ ವದಂತಿಯೂ ಇದೆ.

ಜೆಲಿಯಾಂಗರು ಅಧಿಕಾರಕ್ಕೆ ಹಿಂದಿರುಗುವ ಮೂಲಕ ಹುಟ್ಟಿಕೊಂಡಿರುವ ವಿವಾದ ಇನ್ನೂ ತಣ್ಣಗಾಗಿಲ್ಲ. ಪಕ್ಷದ ವಿಪ್ ಅನ್ನು ಮೀರಿ ಮತಚಲಾಯಿಸಿದ ಎನ್‌ಪಿಎಫ್ ಶಾಸಕರ ವಿಧಾನಸಭಾ ಸದಸ್ಯತ್ವವನ್ನು ಅನೂರ್ಜಿತಗೊಳಿಸಬೇಕೆಂದು ದೂರು ದಾಖಲಿಸಲು ಲಿಯೆಜ್ಯು ಮತ್ತವರ ಬೆಂಬಲಿಗರು ಸಿದ್ಧರಾಗುತ್ತಿದ್ದಾರೆ. ಅದರಲ್ಲಿ ಅವರೇನಾದರೂ ಯಶಸ್ವಿಯಾದಲ್ಲಿ ಬಂಡುಕೋರ ಶಾಸಕರು ತಮ್ಮ ಶಾಸಕತ್ವವನ್ನು ಉಳಿಸಿಕೊಳ್ಳಲು ವಿಧಾನಸಭೆಯಲ್ಲಿರುವ ಮತ್ಯಾವುದಾದರೂ ಪಕ್ಷದೊಂದಿಗೆ ವಿಲೀನಗೊಳ್ಳಬೇಕಾಗುತ್ತದೆ. ಆಗ ಅವರು ಸಹಜವಾಗಿ ಆಯ್ಕೆ ಮಾಡಿಕೊಳ್ಳುವ ಪಕ್ಷ ಬಂಡಾಯದಲ್ಲಿ ತಮ್ಮ ಸಹವರ್ತಿಗಳಾಗಿದ್ದ ಬಿಜೆಪಿಯೇ ಆಗಿರುವ ಸಾಧ್ಯತೆಯೇ ಹೆಚ್ಚು. ಅಂಥ ಬೆಳವಣಿಗೆ ಸಂಭವಿಸುವುದೇ ಆದರೆ ಎನ್‌ಪಿಎಫ್ ತನ್ನ ನೆಲೆಯನ್ನು ಕಳೆದುಕೊಳ್ಳಲಿದೆ. ಆಗ ಸಂದರ್ಭದ ಲಾಭವಾಗುವುದು ಮತ್ತೆ ಬಿಜೆಪಿಗೇ.

- ಪ್ರದೀಪ್ ಫಂಜೋಬಾಮ್

(ಲೇಖಕರು 'ಇಂಫಾಲಾ ಫ್ರೀ ಪ್ರೆಸ್' ಎಂಬ ದಿನಪತ್ರಿಕೆಯ ಸಂಪಾದಕರಾಗಿದ್ದಾರೆ)

12 ◀◀

ದುಡ್ಡೆಲ್ಲ ಖಾಸಗಿಯವರ ಜೇಬಿಗೆ

ಸಮಿತಿ ಕಂಡುಕೊಂಡಂತೆ 2015-16ರ ಪ್ರಮಕೌವಿ-1 ಯೋಜನೆಯಡಿ ತರಬೇತಾದ 18 ಲಕ್ಷ ಜನರಲ್ಲಿ ಬರೀ ಶೇಕಡಾ 12.4 ಮಂದಿಗೆ ಉದ್ಯೋಗ ಲಭಿಸಿದೆ. (STAR) ಕಾರ್ಯಕ್ರಮದ 14 ಲಕ್ಷ ಜನರಲ್ಲಿ ಬರೀ ಶೇಕಡಾ 8.5 ಮಂದಿಗೆ ಉದ್ಯೋಗ ಲಭಿಸಿದೆ. ಆದರೆ "ಉದ್ಯಮ ವಲಯಕ್ಕೆ ಯಥಾರ್ಥವಾಗಿ ಬೇಕಿರುವ ಕೌಶಲಗಳ ಅಗತ್ಯವನ್ನು ಪೂರೈಸಲಾಗಿಲ್ಲ, ಯುವಜನರಿಗೆ ತಕ್ಕ ಮಟ್ಟಿನ ಸಂಬಳದ ಉದ್ಯೋಗ ಒದಗಿಸಲಾಗಿಲ್ಲ, ಖರ್ಚಾಗಿರುವ ರೂ. 2,500 ಕೋಟಿ ಸಾರ್ವಜನಿಕರ ದುಡ್ಡಿನ ಪ್ರಯೋಜನ ಪಡೆದುಕೊಂಡಿರುವುದು ಖಾಸಗಿ ವಲಯ" ಎನ್ನುತ್ತದೆ ವರದಿ. ಅಕ್ರಮಗಳು ನಡೆದಿರುವುದನ್ನು ಒಪ್ಪಿಕೊಂಡಿರುವ ಮೋದಿ ಸರ್ಕಾರ ಅದರ ವಿರುದ್ಧ ಒಂದಿಷ್ಟು ಕ್ರಮ ಕೈಗೊಂಡಿದೆ. ಪ್ರಮಕೌವಿ-1 ಯೋಜನೆಯಡಿ ಅವ್ಯವಹಾರ ನಡೆಸಿರುವ 5 ಸಹಭಾಗಿ ತರಬೇತುದಾರರನ್ನು ಮತ್ತು 11 ಕೌಶಲ ತರಬೇತಿ ಸಂಸ್ಥೆಗಳನ್ನು ಅಮಾನತುಗೊಳಿಸಲಾಗಿದೆ.

ಪ್ರಥಮ ಪ್ರಮಕೌವಿ ಯೋಜನೆಯ ಸಮಸ್ಯೆಗಳನ್ನೆ ಬಗೆಹರಿಸಲಾಗದ ಮೋದಿ ಸರ್ಕಾರ ಜುಲೈ 2016ರಲ್ಲಿ ದ್ವಿತೀಯ ಪ್ರಮಕೌವಿ ಯೋಜನೆಗೆ ಚಾಲನೆ ನೀಡಿದೆ. ಇದಕ್ಕಾಗಿ ರೂ. 12,000 ಕೋಟಿಯಷ್ಟು ಮೊಬಲಗನ್ನೂ ತೆಗೆದಿರಿಸಿದೆ. ಆದರೆ ಇಲ್ಲಿ ತರಬೇತುದಾರರ ಅಭಾವವನ್ನು ಪರಿಗಣಿಸಿರುವಂತೆ ತೋರುತ್ತಿಲ್ಲ. ಭಾರತದಲ್ಲಿ ಪ್ರತಿ ವರ್ಷ ನಾನಾ ಬಗೆಯ 20,000 ತರಬೇತುದಾರರ ಅವಶ್ಯಕತೆ ಇದೆ. ಆದರೆ ನಾವಿಂದು ವರ್ಷವೊಂದರ ಕೇವಲ 8,268 ತರಬೇತುದಾರರನ್ನಷ್ಟೆ ಉತ್ಪಾದಿಸಬಲ್ಲೆವು.

ಸಮಸ್ಯೆಯ ಅಗಾಧತೆ ಎಷ್ಟಿದೆ ಎಂದು ಇದರಿಂದ ಊಹಿಸಬಹುದು. ಇಡೀ ಯೋಜನೆ ಅವ್ಯವಹಾರ, ಭ್ರಷ್ಟಾಚಾರ, ತರಬೇತುದಾರರ ಅಭಾವಗಳಿಂದ ನರಳುತ್ತಿರುವ ಸನ್ನಿವೇಶವಿರುವಾಗ ಪ್ರಮಕೌವಿ-2ರ ಗತಿ ಏನಾಗಲಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಿರುದ್ಯೋಗದ ಸಮಸ್ಯೆ ಎಂಬ ಟೈಮ್‌ಬಾಂಬ್ ಈಗಾಗಲೆ ಟಿಕ್‌ಟಿಕ್ ಸದ್ದು ಮಾಡಲಾರಂಭಿಸಿದೆ. ಇಂಥಾ ಪರಿಸ್ಥಿತಿಯಲ್ಲಿ ನಿರುದ್ಯೋಗ ಹೋಗಲಾಡಿಸುವೆ, ಭಾರತವನ್ನು 'ವಿಶ್ವದ ಕೌಶಲ ರಾಜಧಾನಿ'ಯಾಗಿಸುವೆ ಎನ್ನುವ ಮಾತು ಮಿಕ್ಕೆಲ್ಲಾ ಜನಾಕರ್ಷಕ ಘೋಷಣೆಗಳ ಹಾಗೆ ಬರೀ ಬಡಾಯಿಯಲ್ಲದೆ ಬೇರೇನೂ ಅಲ್ಲ ಎನ್ನುವ ಸತ್ಯವನ್ನು ಮತದಾರರು ಎಷ್ಟು ಬೇಗ ಅರಿತುಕೊಳ್ಳುತ್ತಾರೊ ಅಷ್ಟೂ ಒಳ್ಳೆಯದು.

(ಆಧಾರ: ಮಯೂರ್.ಕಾಮ್ ಲೇಖನ; ಇಂಡಿಯಸ್ಪೆಂಡ್.ಕಾಮ್‌ನಲ್ಲಿ ಚೈತನ್ಯ ಮಲ್ಲಾಪುರರ ಲೇಖನ)

ಲಿಂಗಾಯತರ ಆತ್ಮಾವಲೋಕನಕ್ಕೆ ಸರಿಯಾದ ಸಮಯ

ಕರ್ನಾಟಕದಲ್ಲಿ 12 ನೇ ಶತಮಾನದಲ್ಲಿ ವಿಶ್ವ ಗುರು ಬಸವಣ್ಣನವರು ಮತ್ತು ಇತರೆ ಶರಣರು ಹಿಂದೂಯೇತರ ಅವೈದಿಕ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಸಾರ್ವಕಾಲಿಕ ಸಮಾನತೆ ಶಾಂತಿ ಪ್ರೀತಿ ಸಹಬಾಳ್ವೆ ಕಾಯಕ ದಾಸೋಹ ವೃತ್ತಿ ನಿಷ್ಠೆ ದಾರ್ಶನಿಕತೆ ರಾಷ್ಟ್ರೀಯ ಏಕತೆಯಂತಹ ಅನೇಕ ಅಂಶಗಳನ್ನು ಶರಣರು



ಪ್ರತಿಪಾದಿಸಿದರು. ಸರ್ವರಿಗೂ ಸಮಪಾಲು ಸರ್ವರಿಗೂ ಸಮ ಬಾಳು ಸಂದೇಶ ನೀಡಿದ ಶರಣರು ದೇಶವು ಕಂಡ ಕ್ರಾಂತಿಕಾರರು, ಪರಿವರ್ತನೆಯ ಹರಿಕಾರರು. ಲಿಂಗಾಯತ ತತ್ವ, ಸಂಸ್ಕೃತಿ, ನೀತಿಗಳು, ಆಚರಣೆಗಳು ಸಂಪೂರ್ಣ ಅವೈದಿಕ ಮತ್ತು ಹಿಂದೂಯೇತರವಾಗಿದ್ದು ತನ್ನ ಧಾರ್ಮಿಕ ಅನನ್ಯತೆ ಏಕತೆ ಉಳಿಸಿಕೊಳ್ಳುವುದು ಮತ್ತು ಧಾರ್ಮಿಕ ಸಾಮಾಜಿಕ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವ ಅಗತ್ಯ ಇಂದು ಲಿಂಗಾಯತ ಧರ್ಮಕ್ಕೆ ಪ್ರಸ್ತುತವೆನಿಸುತ್ತಿದೆ.


ಲಿಂಗಾಯತ ಧರ್ಮವು ಒಂದು ಪ್ರಬಲವಾದ ಆಂದೋಲನ ಚಳವಳಿ. ಆದರೆ ಲಿಂಗಾಯತರು ಅನೇಕ ಸಂಪ್ರದಾಯಗಳು ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟು ತಾವು ಒಂದು ಸ್ವತಂತ್ರ ಧರ್ಮಿಯರು ಎಂಬ ಮನೋಭಾವವಿಲ್ಲದವರಾಗಿದ್ದಾರೆ. ಸಾಕಷ್ಟು ದಾಖಲೆಗಳಿದ್ದರೂ ಲಿಂಗಾಯತ ಚಳವಳಿ ಗಟ್ಟಿಯಾಗಿ ನಿಲ್ಲಲಾಗದು. ಹೋರಾಟದ ರೂಪರೇಷೆ, ಆರ್ಥಿಕ ಸಂಗ್ರಹ, ಉಪಯುಕ್ತತೆ, ಯೋಜನೆಗಳಿಲ್ಲದೆ ಕೇವಲ ಸಭೆ ಸಮಾರಂಭದಲ್ಲಿ ಕಾಲ ಕಳೆಯುತ್ತಿದ್ದೇವೆ.

ಲಿಂಗಾಯತವು ಎರಡು ಅರ್ಥದಲ್ಲಿ ಸ್ವತಂತ್ರವಾಗಬೇಕು. ಒಂದು: ಅದು ಈಗಿರುವ ಸಾಂಸ್ಥಿಕರಣದಿಂದ ಸಂಪೂರ್ಣ ಹೊರಬರಬೇಕು. ಇದಕ್ಕೆ ಬಸವ ಭಕ್ತರು ಗಟ್ಟಿ ಮನಸ್ಸು ಮಾಡಬೇಕು. ಎರಡು: ಲಿಂಗಾಯತ ಧರ್ಮಕ್ಕೆ ರಾಷ್ಟ್ರೀಯ ಶಾಸನಬದ್ಧ ಸ್ವತಂತ್ರ ಧರ್ಮ ಮತ್ತು ಅಲ್ಪಸಂಖ್ಯಾತ ಧರ್ಮ ಮಾನ್ಯತೆ ಪಡೆಯಬೇಕು.

ಇದಕ್ಕೆ ಪ್ರತಿಯೊಬ್ಬ ಬಸವ ಭಕ್ತ ಲಿಂಗಾಯತನು ತನುಮನಧನದಿಂದ ಶ್ರಮಿಸುವ ಅಗತ್ಯವಿದೆ. ಒಬ್ಬರ ಮೇಲೊಬ್ಬರು ತಮ್ಮ ಜವಾಬ್ದಾರಿಗಳನ್ನು ಹಸ್ತಾಂತರಿಸುವ ಹೇಡಿತನವನ್ನು ಬಿಡಬೇಕು. ಪ್ರತಿಭಟನೆ ಸಂಪು ಹೋರಾಟ ನಮ್ಮ ಭಾವನಾತ್ಮಕ ಭಾವನೆಗಳನ್ನು ಕೆರಳಿಸುತ್ತವೆ ಹೊರತು ಫಲಶೃತಿಯಾಗಲಾರವು. ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿ ಪ್ರಚಾರ ಗಿಟ್ಟಿಸುವ ತಂತ್ರ ನಮ್ಮದಾಗಬಾರದು.

ದಯವಿಟ್ಟು ಸಮಯ ಹರಣ ಮಾಡದೆ ಹೋರಾಟದ ತೀವ್ರತೆಯನ್ನು ಹೆಚ್ಚು ಮಾಡಿ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಎಲ್ಲರೂ ಕೈ ಜೋಡಿಸಿ. ಬಸವಣ್ಣನವರ ಸಮತೆ, ದರ್ಶನ, ತತ್ವಗಳ ಸಾಕ್ಷಿಪ್ರಜ್ಞೆಯನ್ನು ನೆನೆದು ಆತ್ಮಾವಲೋಕನ ಮಾಡಿಕೊಂಡು ಲಿಂಗಾಯತ ಧರ್ಮಕ್ಕೆ ಶಾಸನ ಬದ್ಧ ಸ್ವತಂತ್ರ ಧರ್ಮ ಮತ್ತು ಅಲ್ಪಸಂಖ್ಯಾತ ಧರ್ಮ ಮಾನ್ಯತೆಗಾಗಿ ಹೋರಾಡ ಬನ್ನಿ. ಸಹಸ್ರ ಸಹಸ್ರ ಕೈಗಳ ಬಲ ನಮಗೆ ಬೇಕಿದೆ.


- ಡಾ.ಶಶಿಕಾಂತ ಪಟ್ಟಣ, ಕಾರ್ಯಾಧ್ಯಕ್ಷರು ಮತ್ತು ಎಲ್ಲ ಪದಾಧಿಕಾರಿಗಳು, ವಿಶ್ವಲಿಂಗಾಯತ ಸಮಿತಿ (ರಿಜಿ) ಧಾರವಾಡ



ಲಿಂಗಧಾರಿಗಳೆಲ್ಲಾ ಲಿಂಗಾಯತರು


ಮೂಢನಂಬಿಕೆ, ಮೌಢ್ಯ, ಅವೈಜ್ಞಾನಿಕ ಆಚರಣೆಗಳ ವಿರುದ್ಧ ಮತ್ತು ಬಹುದೇವೋಪಾಸನೆಯ ವೈದಿಕ ವ್ಯವಸ್ಥೆಯ ವಿರುದ್ಧ ಕ್ರಾಂತಿ ಮಾಡಿದವರು ಬಸವಣ್ಣನವರು. ಅಸ್ಪೃಶ್ಯ ಹಿಂದುಳಿದ, ಕಾಯಕ ಶರಣಗಳನ್ನು ಮನುವಾದಿಗಳು ಪ್ರಾಣಿಗಳಂತೆ, ಉಪಚರಿಸುತ್ತಿದ್ದ 12 ನೆಯ ಶತಮಾನದಲ್ಲಿ ವೈದಿಕರನ್ನು ಬಿಟ್ಟು ಉಳಿದೆಲ್ಲಾ ವರ್ಗದವರನ್ನು ಅಸ್ಪೃಶ್ಯತೆಯ ಮಟ್ಟಕ್ಕಿಳಿಸಿದ್ದ ಕಾಲಘಟ್ಟದಲ್ಲಿ ಬಸವಣ್ಣನವರು ಈ ಶೋಷಿತ ವರ್ಗದವರಿಗೆ ಪ್ರವಾದಿ ರೂಪದಲ್ಲಿ ಬಂದು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆ ನೀಡಿ, ಮಡಿ, ಮೈಲಿಗೆ, ಗುಡಿ ಸಂಸ್ಕೃತಿಗೆ ತಿಲಾಂಜಲಿ ಹೇಳಿ ಮನುವಾದಿಗಳಾದ ವೈದಿಕರು ಕೊಟ್ಟಂತಹ ದೇವರುಗಳ ಬದಲಿಗೆ ವಿಶ್ವರೂಪಿಯಾದ ಇಷ್ಟಲಿಂಗವನ್ನು ಪೂಜೆಗಾಗಿ ನೀಡಿ ದೇಹವನ್ನೇ ದೇಗುಲ ಮಾಡಿ ಇಷ್ಟಲಿಂಗಪೂಜೆ ಎಂಬ ಏಕದೇವೋಪಾಸನೆಗೆ ಎಲ್ಲಾ ವರ್ಗದವರು ಒಳಗಾಗುವಂತೆ ಮಾಡಿದವರು ಬಸವಣ್ಣನವರು. ಲಿಂಗಧಾರಿಗಳಿಗೆ ಲಿಂಗಾಯತ ಎನ್ನುವ ಹೊಸ ಧರ್ಮವನ್ನು ಕೊಟ್ಟರು, ಲಿಂಗಾಯತ ಧರ್ಮ ಎಂಬುದು ಅಸ್ಪೃಶ್ಯರ ಧರ್ಮ, ಕಾಯಕಜೀವಿಗಳ ಧರ್ಮ, ಇದು ಶರಣರ ಧರ್ಮ, ಇದು ಜಾತ್ಯತೀತ ಧರ್ಮ, ಇದು ಮಾನವ ಧರ್ಮ.

1. ಇಂತಹ ಧರ್ಮವನ್ನು ಬ್ರಿಟಿಷ್ ಆಡಳಿತದಲ್ಲಿ ಜಾತಿಪಟ್ಟಿಗೆ ಸೇರಿಸದೆ ಹೊರಗಡೆ ಇಟ್ಟಿದ್ದರು.
2. ಜಾತ್ಯತೀತ ಪ್ರಜಾಪ್ರಭುತ್ವ ಎಂದು ಹೇಳಿಕೊಂಡು ಆಡಳಿತಕ್ಕೆ ಬಂದ ನಮ್ಮ ಸರ್ಕಾರ ಲಿಂಗಾಯತ ಪದವನ್ನು ಜಾತಿಪಟ್ಟಿಗೆ ಸೇರಿಸಿ ಬಸವಣ್ಣನವರಿಗೆ ಅಪಮಾನ ಮಾಡಿದೆ.
3. ಬಸವಣ್ಣನವರ ಮೇಲೆ ಗೌರವವಿದ್ದರೆ ಲಿಂಗಾಯತ ಪದವನ್ನು ಜಾತಿ ಪಟ್ಟಿಯಿಂದ ಸರ್ಕಾರ ಕೂಡಲೆ ತೆಗೆಯಲಿ.



4. ಬಸವಣ್ಣನವರು ಜಾತಿಯನ್ನು ಹುಟ್ಟು ಹಾಕಲು ಬಂದವರಲ್ಲ, ಅವರು ಧರ್ಮ ಸಂಸ್ಥಾಪಕರೆಂಬುದು ಸೂರ್ಯ, ಚಂದ್ರರಷ್ಟೇ ಸತ್ಯ
5. ಶೈವ ಪರಂಪರೆಯಿಂದ ಬಂದಂತಹ ಲಿಂಗಧಾರಿಗಳು ಲಿಂಗವನ್ನು ಧರಿಸಿಕೊಂಡು ವಚನತತ್ವಗಳನ್ನು ನಂಬದೆ ವೈಷ್ಣವ ಆಚರಣೆಯಲ್ಲಿ ತೊಡಗಿ ವೇದಶಾಸ್ತ್ರ ಪುರಾಣ ನಂಬಿಕೊಂಡು ಬಹುದೇವೋಪಾಸನೆ ಮಾಡುತ್ತಿರುವುದು ಲಿಂಗಕ್ಕೆ ಮಾಡಿದ ಅಪಚಾರವಾಗುತ್ತಿದೆ.
6. ಆಚರಣೆಯಲ್ಲಿ ಲಿಂಗತತ್ವದ ಏಕರೂಪತೆ ಬಂದರೆ ಎಲ್ಲರೂ ಲಿಂಗವಂತರಾಗುತ್ತಾರೆ.
7. ಲಿಂಗಾಯತ ಎಂಬುದು ಜಾತಿಯಲ್ಲ, ಲಿಂಗಾಯತ ಎಂಬುದು 'ಧರ್ಮ'.
8. ಧರ್ಮವನ್ನು ಜಾತಿಪಟ್ಟಿಗೆ ಸೇರಿಸಿ, ಜನರಿಗೆ ಗೊಂದಲ ಉಂಟು ಮಾಡಿದ ಸರ್ಕಾರವೇ. ಇದನ್ನು ಸರಿಪಡಿಸಿ ಬಸವಣ್ಣನವರಿಗೆ ಕೃತಜ್ಞತೆ ತೋರುವ ಹೊಣೆಗಾರಿಕೆ ಸರ್ಕಾರದ ಮೇಲಿದೆ.

- ಈ.ಕೃಷ್ಣಪ್ಪ, ವ್ಯವಸ್ಥಾಪಕ ನಿರ್ದೇಶಕರು, ಬಸವತತ್ವ ಪ್ರಚಾರ ಪ್ರತಿಷ್ಠಾನ (ರಿ), ಬೆಂಗಳೂರು



ಪೀಲೆ ಬಲಿಯ ಮರಿಮೊಮ್ಮಗನೇ?

ನಂಬಿದ್ರೆ ನಂಬಿ, ಬಿಟ್ರೆ ಬಿಡಿ! ಬಯಲು ಸೀಮೆ ಭಾಗದ ಸ್ವಾಮಿಯೊಬ್ಬ ಉಡುಪಿ ಜನತೆಯ ತಲೆಯೊಳಗೆ ಇತ್ತೀಚೆಗೆ ಹೀಗೊಂದು ಹುಳ ಬಿಟ್ಟು ಸುದ್ದಿ ಮಾಡಿದ್ದಾನೆ. ವೈದಿಕರು ಮತ್ತು ವೈದಿಕ ಗುಲಾಮಿತನದಲ್ಲೇ ಸರ್ವಸುಖವೆಂಬ ಭ್ರಮೆಯಲ್ಲಿ ತೇಲಾಡೋ [...] ಅವೈದಿಕರೆಲ್ಲ ಒಂದೆಡೆ ಕಲೆತರಾದರೆ ಎ[...] ಕಾಗಕ್ಕ-ಗುಬ್ಬಕ್ಕ ಕಥೆಗಳೆಲ್ಲಾ ಉದ್ಭವಿಸುತ್ತವೆ ಎಂಬ[...] ವಾರದ ಹಿಂದೆ ಉಡುಪಿಯಲ್ಲಿ ಹಮ್ಮಿಕೊಂಡ [...] ಸ್ವಾಮೀಜಿಯ ಸನ್ಮಾನ ಸಮಾರಂಭದಲ್ಲಿ ನಡೆ[...] ಘಟನೆಯೇ ಸಾಕ್ಷಿ.

ಪ್ರಸಿದ್ಧ ಪುಟ್ಬಾಲ್ ಆಟದ ಮಹೋನ್ನತ ಕ[...] ಪಟ್ಟಿ ಮಾಡತೊಡಗಿದರೆ, ನಿಮಗೆ ಅಮೆರಿಕ [...] ಬ್ರೆಸಿಲ್, ಅರ್ಜೆಂಟೈನಾ ದೇಶಗಳ ಪೀಲೆ, ಮರಡೋ[...] ರೊನಾಲ್ಡಿನೋ ರಂತವರನ್ನು ಬಿಡಲು ಸಾಧ್ಯವೇ[...] ಆದರೆ, ಈ ಅಮೆರಿಕದ ಪುಟ್ಬಾಲ್ ಪ್ರತಿಭೆಗೂ ಭಾ[...] ಪುರಾಣಕ್ಕೂ ನೇರ ಸಂಬಂಧವಿದೆಯೆನ್ನುತ್ತದೆ ಕೂಳ[...] ವೈದಿಕರ ಹೊಸ ಸಂಶೋಧನೆ.

ಬ್ಲ್ಯಾಕ್ ಎಂಡ್ ವೈಟ್ ಕಾಲದ ಪೀಲೆಯ ಸ[...] 'ಬೈಸಿಕಲ್ ಕಿಕ್' ಆಗಿರಬಹುದು, ನಂತರದ ಮರಡೋ[...] ರಿಂದ ರೊನಾಲ್ಡಿನೋ ತರಹದವರ ಹುಚ್ಚೆ[...] ಆಟಗಳಾಗಿರಬಹುದು ಇವೆಲ್ಲಕ್ಕೂ ಮೂಲ ಭಾ[...] ಪುಟ್ಬಾಲ್ ಪಿತಾಮಹನೇ ಎನ್ನುವುದು ಹೊಚ್ಚ [...] ಸಿದ್ಧಾಂತ.

ಅಮೆರಿಕದ ಗಲ್ಲಿಗಲ್ಲಿಗಳಲ್ಲಿ ಉಡುಪಿ ಶ್ರೀ[...] ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದಕ್ಕಾಗಿ ಪುತ್ತಿಗೆ ಶ್ರೀ[...] ಉಡುಪಿಯಲ್ಲಿ ನಾಗರಿಕ ಅಭಿನಂದನಾ ಸಮಾರಂಭ[...] ಇತ್ತೀಚೆಗೆ ಜರುಗಿತ್ತು, ಅದರಲ್ಲಿ ಪಾಲ್ಗೊಂಡಿದ್ದ [...] ಮಠದ ಶಿವರುದ್ರ ಸ್ವಾಮಿ ಎನ್ನುವ ಸಂಶೋಧಕರ[...] ಮಾತನಾಡುತ್ತಾ, ಬಲಿ ಚಕ್ರವರ್ತಿಯ ಕತೆಯಲ್ಲಿ [...] ಪಾತಾಳವೆಂದರೆ ಅದು ಅಮೆರಿಕವೇ ಹೊರತು ಬೇರ[...] ತ್ರಿವಿಕ್ರಮನಾಗಿ ಬಲಿಯನ್ನು ವಿಷ್ಣು ತುಳಿದಾಗ ಬಲ[...]



ಕೂಡ ನನ್ನೊಡನೆ ನೀನೂ ಕೂಡ ಪಾತಾಳ ಅ[...] ಅಮೆರಿಕಕ್ಕೆ ಬರಲೇಬೇಕು ಎಂದು ರಚ್ಚೆಹಿಡಿದನಂತೆ. [...] ವಿಷ್ಣು ಸಮ್ಮತಿಸಿ ಕಪಿಲ ಮುನಿಯಾಗಿ ಆತನೊಡನೆ [...] (ಅಮೆರಿಕ)ಕ್ಕೆ ಹೋಗಿ ನೆಲೆಯಾದನಂತೆ. ವಿಷ್ಣು ಉ[...] ಕಪಿಲಮುನಿ ಕಾಲಿಟ್ಟು ಕ್ಯಾಪಿಲೋರ್ನಿಯಾ ಎಂದು[...] ಕೊಳ್ಳಬೇಕಿದ್ದ ಆ ನಗರವೇ ಇಂದಿನ ಕ್ಯಾಲಿಫೋರ್ನಿಯಾ[...]

ಈ ಕಥೆ ಇಷ್ಟಕ್ಕೇ ಮುಗಿಯುವುದಿಲ್ಲ, ಗಂ[...] ಭಾರತದಲ್ಲಿ ಬರುವ ಕಾಲಕ್ಕೂ (ಈ ಮೊದಲು [...] ಎನ್ನೋ ನದಿಯೇ ಭಾರತದಲ್ಲಿರಲೇ ಇಲ್ಲ) ಮುಂದುವರೆಯುತ್ತದೆ. ಭಗೀರಥ ಮಹಾರಾಜ [...] ಸಿಗದೇ ಸತ್ತ ತನ್ನ ಪೂರ್ವಜರಾದ ಸಗರನ ಮ[...] ಹುಡುಕುತ್ತಾ ಕೊನೆಗೆ ಅವರ ಬೂದಿಗುಡ್ಡೆಯನ್ನು ನೋ[...] ಇದೇ ಕ್ಯಾಪಿಲೋರ್ನಿಯಾದ ಕಪಿಲಾಶ್ರಮದಲ್ಲಿಯೇ [...] ಇದಕ್ಕೆ ಪುರಾವೆಯಾಗಿ ಏಶ್ ಲ್ಯಾಂಡ್ (Ash la[...] ಎನ್ನುವ ಸ್ಥಳ ಇನ್ನೂ ಅಲ್ಲಿದೆಯಂತೆ. ಪುರಾಣಕಾಲದಿಂ[...] ನಮ್ಮವರು ಧಾರವಾಡದಿಂದ ಹುಬ್ಬಳ್ಳಿಗೆ ಹೋಗಿಬರ[...] ಅಮೆರಿಕಕ್ಕೆ ಆಗಾಗ ಹೋಗಿಬರುತ್ತಿದ್ದ ಕಾರಣ ಅಮೆರಿ[...] ಕೊಲಂಬಸ್ ಕಂಡುಹಿಡಿದದ್ದು ಎಂಬ ವಾದವೇ [...] ಅಂಬೋದು ನಮ್ಮ ಬೇಲಿ ಹಾರಿ 'ಪಾತಾಳಕ್ಕೆ' ಸಾಮಿಗಳ ವಾದ.

ಇವರ ವಾದವನ್ನು ಸಭೆಯಲ್ಲೇ ಕೇಳುತ್ತಾ ಕ[...] ನಮ್ಮ ಕೂಳ್ ದಂಡ ಕೋದಂಡಯ್ಯ ತಕ್ಷಣಕ್ಕೆ "ಹೌದ[...] ಈ ಬೇಲಿಯಾತ ಹೇಳಿದ್ದೆಲ್ಲಾ ಸರಿಯೇ [...] ಮಾರಾಯ್ರೇ.. ಭಾರತದಿಂದ ಬಲಿಯನ್ನು ಒಂದೇ [...] ಸಾವಿರಾರು ಕಿಮೀ ದೂರದ ಅಮೆರಿಕಕ್ಕೆ ಗುರಿಯ[...] ಗೋಲ್ ಹೊಡೆದಂತಹ ನಮ್ಮ ಪುಟ್ಬಾಲ್ ಪಿತಾ[...] ತ್ರಿವಿಕ್ರಮ ಮಾಣಿ ಕೊನೆಗೆ ಬಲಿಯೊಂದಿಗೆ ಸೆಟ್ಲ್ ಆ[...] ಅಲ್ಲೇ ತಾನೇ..? ಹಾಗಾಗಿ, ಈ ಪೀಲೆ, ಮರಡೋ[...] ಜೀನ್ (Gene) ಗಳನ್ನೊಮ್ಮೆ ಚೆಕ್ ಮ[...] ನೋಡಬೇಕಲ್ಲ" ಅಂದನಂತೆ.

ಪುರೋಹಿತಶಾಹಿಗಳಿಂದ ಒದೆಸಿಕೊಳ್ಳೋದ[...] ಸುಖಕಾಣುವ ಬಲಿಯ ದಾಸತನದ ಭಕ್ತಿಗೆ ಮೆಚ್ಚ[...]

ಕಾವ್ಯಾಳಿಗೆ ನ್ಯಾಯ ಸಿಗುವುದೇ?

ಒಂದುವೇಳೆ ಮೂಡಬಿದ್ರಿಯ ಆಳ್ವಾಸ್ ಶಾಲೆ-ಕಾಲೇಜು ಕ್ರೈಸ್ತ ಅಥವಾ ಮುಸ್ಲಿಂ ಆಡಳಿತದಡಿ ಇದ್ದಿದ್ದರೆ ಆ ಕಾಲೇಜಿನ ಹಾಸ್ಟೆಲಿನಲ್ಲಿ ಕಾವ್ಯಾ ಪೂಜಾರಿ ಎಂಬ 16 ವರ್ಷದ ಹಿಂದೂ ವಿದ್ಯಾರ್ಥಿನಿಯ ದುರ್ಮರಣಕ್ಕೆ ಕೇಸರಿ ಪಡೆಗಳ ಪ್ರತಿಕ್ರಿಯೆ ಹೇಗಿರುತ್ತಿತ್ತು ಊಹಿಸಿ. ಬೇಬಿ ಶೋಭಂದ್ಲಾಜೆ ಮತ್ತು ನಳಿನ ಚಿಂಕಿಹಾಕ್ ಕುಟಿಲ್ ಇವರಿಬ್ಬರೂ ಆ ದುರ್ಮರಣವನ್ನು ಅಲ್ಲಿಯ ಕ್ರೈಸ್ತ/ಮುಸ್ಲಿಂ ಆಡಳಿತದವರು ಮಾಡಿದ ಹಿಂದೂ ಹುಡುಗಿಯ ಬರ್ಬರ ಕೊಲೆ ಎಂದು ಆರೋಪಿಸುತ್ತಾ ಮೂಡಬಿದ್ರಿಯಲ್ಲಿ ಕಾನೂನು ಸಮಸ್ಯೆ ಹುಟ್ಟುಹಾಕಿ ಕಾಲೇಜಿನಲ್ಲಿ ದಾಂಧಲೆ ಮಾಡುತ್ತಿದ್ದರು ಹಾಗೂ ಸಿಬಿಐ ತನಿಖೆ ಆಗಬೇಕೆಂದು ಶೋಭಕ್ಕ ರಾಜನಾಥ್ ಸಿಂಗನಿಗೆ ಪತ್ರ ಬರೆಯುತ್ತಿದ್ದಳು. ಕಳ್ಳಡ್ಕ ಭಟ್ಟ ಅಲ್ಲಿ ತನ್ನ ಬಂಟ-ಬಿಲ್ಲವ ಗೂಂಡಾಗಳನ್ನು ಮುಂದೆ ಬಿಟ್ಟು ಕಲ್ಲು ತೂರಿಸಿ ಕಾಲೇಜು ಬಂದ್ ಮಾಡಿಸಿಯೇ ತೀರುತ್ತಿದ್ದ. ಆದರೆ ಈಗ ನಿಟ್ಟೆ ಕಾಲೇಜಿನ ವಿನಯ್ ಹೆಗಡೆ ಹಾಗೂ ಮಂಗಳೂರಿನ ಏಜೆ ಮೆಡಿಕಲ್ ಕಾಲೇಜಿನ ಏ.ಜೆ.ಶೆಟ್ಟಿಯಂತೆ ಮೋಹನ್ ಆಳ್ವ ಸಹ 'ಹಿಂದೂತ್ವವಾದಿ ಬಂಟ' ಆಗಿರುವುದರಿಂದ ಕಳ್ಳಡ್ಕ ಭಟ್ಟ ತೆಪ್ಪಗಿದ್ದಾನೆ.

ಕಾಲೇಜಿನಲ್ಲಿ ಏನಾದರೊಂದು ಕೆಟ್ಟ ಘಟನೆ ನಡೆದಾಗ ಮೋಹನ್ ಆಳ್ವ ಹೋಮ ಯಜ್ಞ ಶನಿಪೂಜೆ ಮುಂತಾದವನ್ನು ಮಾಡಿಸಿ ಕಾಲೇಜ್ ಹಾಸ್ಟೆಲನ್ನು ಶುದ್ದೀಕರಿಸುತ್ತಾನೆ. ಪಕ್ಕಾ ಫ್ಯೂಡಲ್ ಮನಸ್ಥಿತಿಯ ಮೋಹನ್ ಆಳ್ವ ವಿದ್ಯಾರ್ಥಿಗಳ ಯಾವುದೇ ದೂರು ಆಲಿಸುವ ಅಭ್ಯಾಸ ಇಟ್ಟುಕೊಂಡಿಲ್ಲ. ಹಾಗಾಗಿ ಇಲ್ಲಿ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾನಸಿಕ ಡಿಪ್ರೆಷನ್ನಿಗೆ ಸಿಲುಕುವುದು ಸಾಮಾನ್ಯವಾಗಿದೆ. ಯೋಗಾಯೋಗವೆಂದರೆ ಈ ಆಳ್ವಾನ ಸ್ವಂತ ಪತ್ನಿ ತನ್ನ ತಾರುಣ್ಯದಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಳು. ಆಗ ಭರತನಾಟ್ಯ ಡ್ಯಾನ್ಸ್ ಮಾಸ್ಟರ್ ಸಹ ಆಗಿದ್ದ ಮೋಹನ್ ಆಳ್ವನಿಗೆ ತನ್ನ ಸಣ್ಣ ಹತ್ತು ಅಡಿ ಉದ್ದಗಲದ ಆಯುರ್ವೇದ ಕ್ಲಿನಿಕ್ ದಿನಗಳಿಂದಲೂ ಮನೆಯ ತಿಂಡಿಗಿಂತ ಹೊರಗಿನ ತಿಂಡಿ ತಿನ್ನುವ ಅಭ್ಯಾಸ ಹೆಚ್ಚಿತ್ತಂತೆ.



ಉಜಿರೆಯ ಸೌಜನ್ಯಳ ಅತ್ಯಾಚಾರ-ಕೊಲೆ ಕೇಸಿನಲ್ಲಿ ಮಾಡಿದಂತೆಯೇ ಕಾವ್ಯಾಳ ಕೇಸಿನಲ್ಲಿಯೂ ಪೊಲೀಸರು ಮೊದಲಿಗೇ ಎಲ್ಲವನ್ನೂ ತಿರುಚಿಬಿಟ್ಟಿದ್ದಾರೆ ಎಂಬ ಆರೋಪವಿದೆ. ಮೂಲ ಪೋಸ್ಟ್ ಮಾರ್ಟಮ್ ರಿಪೋರ್ಟನ್ನೇ ಮೋಹನ್ ಆಳ್ವನ ಆಸ್ಪತ್ರೆಯವರು ತಿರುಚಿದ್ದಾರಂತೆ. ಹಾಗಿರುವಾಗ ಪೊಲೀಸರು ಪ್ರಾಮಾಣಿಕತೆಯಿಂದ ತನಿಖೆ ನಡೆಸಲು ಹೇಗೆ ಸಾಧ್ಯ? ಬಂಟರು ರಾಜಕೀಯದಲ್ಲಿ ವೈರಿಗಳಾದರೂ ವ್ಯವಹಾರದಲ್ಲಿ ಮಾತ್ರ ಯಾವಾಗಲೂ ಒಬ್ಬರ ಹಿತಾಸಕ್ತಿ ಇನ್ನೊಬ್ಬರು ಕಾಪಾಡುತ್ತಾರೆ. ಮೋಹನ್ ಆಳ್ವ ಉರ್ಫ್ ಮೋನಾಳ್ವ 'ಹಿಂದೂತ್ವವಾದಿ' ಆಗಿದ್ದರೂ ಕಾಂಗ್ರೆಸ್ಸಿನ ಬಂಟರೊಂದಿಗೂ ಆತ್ಮೀಯ ಸಖ್ಯ ಹೊಂದಿದ್ದಾರೆ. ಹಾಗಾಗಿ ಜಿಲ್ಲಾ ಉಸ್ತುವಾರಿ ಮಂತ್ರಿ ರಮಾನಾಥ್ ರೈ ಮೋನಾಳ್ವರ ಹಿತಾಸಕ್ತಿಗೆ ಧಕ್ಕೆಯಾಗಲು ಬಿಡುವುದಿಲ್ಲ, ಜತೆಗೆ ಮೂಡಬಿದ್ರಿಯ ಮಾಜಿ ಸಚಿವ ಜೆಡಿಎಸ್‌ನ ಅಮರನಾಥ ಶೆಟ್ಟಿ ಸಹ ಮೋನಾಳ್ವನ ಬೆಂಬಲಕ್ಕಿದ್ದಾರೆ. ಉದಾಹರಣೆಗೆ- ಶರತ್ ಮಡಿವಾಳನ ಕೊಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷದಲ್ಲಿರುವ ಬಂಟ ಜಾತಿಯ ಮರಳು ಮಾಫಿಯಾದವರ ಕೈವಾಡ ಇದೆಯೆಂಬ ಶಂಕೆ ಇದೆ. ಅದಕ್ಕಾಗಿ ಕೊಲೆಗಾರರು ಇನ್ನೂ ಸಿಕ್ಕಿ ಬಿದ್ದಿಲ್ಲ, ಕಾರಣ ಬಂಟರು ತಮ್ಮ ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳುವಲ್ಲಿ ನಿಸ್ಸೀಮರು. ಕಾವ್ಯಾಳ ವಿಷಯದಲ್ಲಿಯೂ ಅದೇ ಆಗಲಿದೆ. ಆದರೂ ಬಿಲ್ಲವ ನೇತಾರರು ಎಲ್ಲಿ ಮಾಯವಾಗಿದ್ದಾರೆ? ತಮ್ಮ ಜಾತಿಯ ಹುಡುಗಿಗೆ ನ್ಯಾಯ ಕೊಡಿಸುವುದು ಅವರ ಕರ್ತವ್ಯವಲ್ಲವೇ?

-ಪಿ. ಕುಮಾರೇಶ್, ಮೂಡಬಿದ್ರಿ

ಪರಿಸರಕ್ಕೆ ಮಾರಕವಾದ ಗಣೇಶ ಮೂರ್ತಿಗಳು



ಮಹಾರಾಷ್ಟ್ರದಲ್ಲಿ ಅಲ್ಲಿಯ ಸಾರ್ವಜನಿಕ ಗಣೇಶ ಮಂಡಲಿಗಳು ಹಾಗೂ ಸ್ವಂತ ಮನೆಗಳಲ್ಲಿ ಗಣಪತಿ ಇಡುವವರು ಸ್ವಯಂಪ್ರೇರಿತರಾಗಿ ಪಿಓಪಿ ಗಣಪತಿಗಳನ್ನು ಬಹಿಷ್ಕರಿಸಿ ಪರಿಸರಸ್ನೇಹಿ ಮೂರ್ತಿಗಳನ್ನು ಹಿಂದಿನ ನಾಲ್ಕಾರು ವರ್ಷಗಳಿಂದ ಸ್ಥಾಪಿಸುತ್ತಿದ್ದಾರೆ. ಸಂಪೂರ್ಣ ಮಹಾರಾಷ್ಟ್ರದಲ್ಲಿ ಇಪ್ಪತ್ತು ಲಕ್ಷಕ್ಕೂ ಮಿಕ್ಕಿ ಗಣೇಶ ಮೂರ್ತಿಗಳನ್ನು ಮನೆಮನೆಗಳಲ್ಲಿ ಸ್ಥಾಪಿಸಲಾಗುತ್ತದೆ. ಒಂದು ವೇಳೆ ಇಷ್ಟೊಂದು ಬೃಹತ್ ಸಂಖ್ಯೆಯ ಮೂರ್ತಿಗಳನ್ನು ಕೆರೆ ಬಾವಿ ನದಿ ಸಮುದ್ರದಲ್ಲಿ ಹಾಕಿದರೆ ಉತ್ಪನ್ನವಾಗುವ ಪರಿಸರ ಮಾಲಿನ್ಯದ ಪ್ರಮಾಣ ಊಹಿಸಲಸಾಧ್ಯ. ಹಿಂದೆಲ್ಲಾ ಮುಂಬೈಯಲ್ಲಿ 25-30 ಅಡಿ ಎತ್ತರದ ಗಣೇಶ ಮೂರ್ತಿಯನ್ನು ಪಿಓಪಿಯಲ್ಲಿ ತಯಾರಿಸಿ ಕೊನೆಗೆ ಸಮುದ್ರದಲ್ಲಿ ವಿಸರ್ಜಿಸಲಾಗುತ್ತಿತ್ತು. ಆದರೆ ಸಮುದ್ರದ ಮೂಲಗುಣದಂತೆ ಅದು ಏನನ್ನೂ ತನ್ನ ಹೊಟ್ಟೆಯಲ್ಲಿ ಇಟ್ಟುಕೊಳ್ಳುವುದಿಲ್ಲ, ಮರುದಿನವೇ ಮಾಲಿನ್ಯಗಳನ್ನು ಸಮುದ್ರದ ಅಲೆ ತಾನಾಗಿಯೇ ತಟಕ್ಕೆ ತಂದು ಹಾಕುತ್ತದೆ. ಇಂತಹ ಬೃಹತ್ ಪಿಓಪಿ ಗಣೇಶಮೂರ್ತಿಗಳು ಅರ್ಧ ಮುರಿದ ಅವಸ್ಥೆಯಲ್ಲಿ ಸಮುದ್ರ ತಟದಲ್ಲಿ ಬಿದ್ದಿರುತ್ತಿದ್ದವು ಹಾಗೂ ಅಲ್ಲಿಯ ಹತ್ತಿರದ ಕೊಳಗೇರಿ ಪ್ರದೇಶದ ಸ್ಲಮ್ ವಾಸಿಗಳು ಈ ಬೃಹತ್ ಮೂರ್ತಿಗಳ ಮರೆಯಲ್ಲಿ ಬೆಳಗಿನ ನಿತ್ಯ ಕರ್ಮ ಮುಗಿಸುತ್ತಿದ್ದರು. ಅಂದರೆ 13 ದಿನ ಭಕ್ತರಿಂದ ವಿಜೃಂಭಣೆಯಿಂದ ಪೂಜೆಗೊಂಡ ಗಣಪತಿ ಮೂರ್ತಿ ಕೊನೆಗೆ ಸಮುದ್ರ ಅಥವಾ ನದಿ ತಟದಲ್ಲಿರುವ ಕೊಳಗೇರಿ ಜನರ ಕಕ್ಕಸು ಆಗಿ ಪರಿವರ್ತನೆಯಾಗುತ್ತಿತ್ತು.

ಈ ಗಣೇಶ ಉತ್ಸವ ಮೊಟ್ಟ ಮೊದಲು ಶುರುವಾಗಿದ್ದು 1892 ರಲ್ಲಿ - ಪುಣೆ ಮತ್ತು ಮುಂಬೈಯಲ್ಲಿ. ಅದನ್ನು ಶುರುಮಾಡಿದವರು ಪಕ್ಕಾ ಜಾತಿವಾದಿ ಹಾಗೂ ಮಹಿಳಾ ವಿರೋಧಿ ಬಾಲಗಂಗಾಧರ ತಿಲಕರು. ಯಾಕೆಂದರೆ ಗಣೇಶ ಅವರ ಕುಲದೈವವಾಗಿತ್ತು. ಆದರೆ ಇಂದು ಪುಣೆ ಮತ್ತು ಮುಂಬೈಯಲ್ಲಿ 90% ಗಣಪತಿಗಳು ಪರಿಸರ-ಸ್ನೇಹಿ ವಸ್ತುಗಳಿಂದ ತಯಾರಿಸಲಾಗುತ್ತದೆ. ಪಿಓಪಿ ಗಣಪತಿಗಳ ತಯಾರಿಕೆ ಹಿಂದಿನ ನಾಲ್ಕು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಹೆಚ್ಚುಕಡಿಮೆ ನಿಂತೇಹೋಗಿದೆ. ಜತೆಗೆ ಅಲ್ಲಿಯ ಮೂರ್ತಿಗಳ ಎತ್ತರವೂ ನಿಗದಿತವಾಗಿದೆ.

ಆದರೆ ಇಲ್ಲಿ ನಮ್ಮ ಕರ್ನಾಟಕದಲ್ಲಿ ನೋಡಿದರೆ ಗಣೇಶ ಉತ್ಸವ ಮಂಡಲಿಗಳು ಸರಕಾರಕ್ಕೇ ಸೆಡ್ಡು ಹೊಡೆದು ತಾವು ಪಿಓಪಿ ಗಣಪತಿಯನ್ನೇ ಸ್ಥಾಪಿಸುವುದಾಗಿ ಚಾಲೆಂಜ್ ಮಾಡಿದ್ದಾರೆ. "ಪಿಓಪಿ ಗಣೇಶ ಮೂರ್ತಿಗಳಿಗೆ ನಿರ್ಬಂಧ ಹೇರಿ ಹಿಂದೂ ಹಬ್ಬಗಳನ್ನು ನಾಶ ಮಾಡಲು ಕಾಂಗ್ರೆಸ್ ಸರ್ಕಾರ ಪ್ರಯತ್ನಿಸುತ್ತಿದೆ, ಇದನ್ನು ಸಹಿಸಲು ಸಾಧ್ಯವಿಲ್ಲ, ಇದರ ಪ್ರತಿಭಟನಾರ್ಥವಾಗಿ ಈ ವರ್ಷ ಹಿಂದಿನ ವರ್ಷಕ್ಕಿಂತ ದೊಡ್ಡ ಪಿಓಪಿ ಗಣೇಶ ಮೂರ್ತಿ ಸ್ಥಾಪಿಸುತ್ತೇವೆ"- ಹೀಗೆಂದು ಹೇಳಿದ್ದು ಬೆಂಗಳೂರಿನ ಡಾ. ರಾಜ್‌ಕುಮಾರ್ ಕನ್ನಡ ಅಭಿಮಾನಿಗಳ ಸಂಘ ಹಾಗೂ ಇತರ 1000 ಸಾರ್ವಜನಿಕ ಗಣೇಶೋತ್ಸವ ಮಂಡಲಿಗಳ ಒಕ್ಕೂಟದ ಅಧ್ಯಕ್ಷರು.

ಒಂದುವೇಳೆ ಡಾ. ರಾಜಕುಮಾರ್ ಬದುಕಿದ್ದರೆ ತಮ್ಮ ಅಭಿಮಾನಿ ಸಂಘದವರ ಇಂತಹ ಪರಿಸರ ವಿರೋಧಿ ಹೇಳಿಕೆಯಿಂದ ಅದೆಷ್ಟು ನೊಂದುಕೊಳ್ಳುತ್ತಿದ್ದರೋ ಏನೋ. ಕಾರಣ ಸುಮ್ಮನೆ ಸರಕಾರದ ಮೇಲೆ ಯಾವುದೇ ಆಪಾದನೆ ಹೊರಿಸುವ ಮೊದಲು ನಮ್ಮ ಸರಕಾರ ಹೇಳಿದ್ದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಸರಕಾರ ಗಣಪತಿ ಮೂರ್ತಿ ಸ್ಥಾಪಿಸಬಾರದು ಎಂದು ಎಲ್ಲಿಯೂ ಹೇಳಿಲ್ಲ, ಕೇವಲ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಓಪಿ) ಮೂರ್ತಿಯ ಬದಲು ಪರಿಸರ ಸ್ನೇಹಿ ಮಣ್ಣಿನ ಮೂರ್ತಿ ಸ್ಥಾಪಿಸಿ ಎಂದಷ್ಟೇ ಸರಕಾರ ಹೇಳಿದ್ದು. ಹೀಗಿರುವಾಗ ಸರಕಾರ ಹಿಂದೂ ಹಬ್ಬಗಳನ್ನು ನಾಶ ಮಾಡಲು ಪ್ರಯತ್ನಿಸುತ್ತಿದೆ ಎಂಬ ಕೋಮು ಪ್ರಚೋದಕ ಹೇಳಿಕೆಗೆ ಆಧಾರವೆಲ್ಲಿದೆ?

ಈ ಚುನಾವಣಾ ವರ್ಷದಲ್ಲಿ ಎಲ್ಲವನ್ನೂ ಮತಗಳ ಲೆಕ್ಕಾಚಾರದಿಂದಲೇ ಅಳತೆ ಮಾಡಿ ಸಂಕುಚಿತ ಕೋಮು ಪ್ರಚೋದಕ ಹೇಳಿಕೆ ಕೊಡುವುದು ಹೆಚ್ಚುತ್ತಿದೆ. ಇನ್ನು ದಸರೆ ದೀಪಾವಳಿಯ ಸಮಯದಲ್ಲಿ ಅದೆಷ್ಟು ಕುತ್ಸಿತ ಹೇಳಿಕೆಗಳು ಕೋಮುವಾದಿ ಕುತಂತ್ರಿಗಳಿಂದ ಬರಲಿದೆಯೋ ಏನೋ.

ಮಹಾರಾಷ್ಟ್ರದ ಗಣೇಶ ಭಕ್ತರು ತೋರಿರುವ ಪ್ರಜ್ಞಾವಂತಿಕೆ ಹಾಗೂ ಪರಿಸರ ಪ್ರೇಮ ಕರ್ನಾಟಕದವರಿಂದ ಯಾಕೆ ಸಾಧ್ಯವಿಲ್ಲ? ಈ ವರ್ಷ ಆಗಸ್ಟ್ 25 ಕ್ಕೆ ಗಣೇಶ್ ಚತುರ್ಥಿ ಇದ್ದು ಈ ಒಂದು ತಿಂಗಳು ಸಾರ್ವಜನಿಕ ಗಣೇಶೋತ್ಸವ ಹೆಸರಲ್ಲಿ ವಂತಿಗೆ ವಸೂಲಿಗಾರರು ಮನೆಮನೆಗೆ ಎಡತಾಕುವ ದಿನಗಳು. ಹೀಗೆ ವಂತಿಗೆ ವಸೂಲಿವೀರರು ಬಂದಾಗ ಸಾರ್ವಜನಿಕರು ವಂತಿಗೆ ಕೊಡುವ ಮೊದಲು ಅವರು ಸ್ಥಾಪಿಸುವ ಮೂರ್ತಿ ಪರಿಸರ ಸ್ನೇಹಿಯೇ ಅಥವಾ ಪಿಓಪಿ ಮೂರ್ತಿಯೇ ಎಂದು ವಿಚಾರಿಸಿ, ಪರಿಸರ ಮಾರಕ ಪಿಓಪಿ ಮೂರ್ತಿಯಾದರೆ ಅಂತಹ ಸಾರ್ವಜನಿಕ ಗಣೇಶೋತ್ಸವ ಮಂಡಳಿಗೆ ವಂತಿಗೆ ಕೊಡಲು ನಿರಾಕರಿಸಬೇಕು. ಯಾಕೆಂದರೆ 1974ರ ಜಲ ಕಾಯ್ದೆಯ 33ಎ ಕಲಂ ನಲ್ಲಿ ಹೇಳಿರುವ ಸೂಚನೆಯ ಅನ್ವಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪಿಓಪಿ ಗಣೇಶ ಮೂರ್ತಿಗಳನ್ನು ಸಾರ್ವಜನಿಕ ಕೆರೆಯಲ್ಲಿ ವಿಸರ್ಜಿಸಿದರೆ ಆರು ವರ್ಷ ಜೈಲುಶಿಕ್ಷೆ ವಿಧಿಸಲಾಗುವುದು ಎಂಬ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆ ಉಲ್ಲಂಘಿಸುವವರು ಕ್ರಿಮಿನಲ್ ಮೊಕದ್ದಮೆ ಎದುರಿಸಬೇಕಾಗುತ್ತದೆ. ಆರೋಪ ಸಾಬೀತಾದರೆ ಕನಿಷ್ಠ ಒಂದೂವರೆ ವರ್ಷದಿಂದ ಆರು ವರ್ಷದವರೆಗೆ ಜೈಲುಶಿಕ್ಷೆ ಜತೆಗೆ ದಂಡ ಪಾವತಿಸಬೇಕಾಗುತ್ತದೆ.

ಸರಕಾರ ಯಾವುದೇ ಯೋಜನೆ ಕೈಗೆತ್ತಿಕೊಂಡರೂ ಅದಕ್ಕೆ ಪರಿಸರವಾದಿಗಳು ಏನಾದರೊಂದು ನೆಪದಲ್ಲಿ ಅಡ್ಡಗಾಲು ಹಾಕುತ್ತಲೇ ಇರುತ್ತಾರೆ. ಆದರೆ ಬೆಂಗಳೂರಲ್ಲಿ ಕೆಲವು ಭಂಡ ಕೋಮುವಾದಿಗಳು ಗಣೇಶ ಉತ್ಸವ ಮಂಡಳಿಯ ಹೆಸರಲ್ಲಿ ಸರ್ಕಾರಕ್ಕೇ ಚಾಲೆಂಜ್ ಹಾಕಿ "ನಾವು ಹಿಂದಿನ ವರ್ಷಕ್ಕಿಂತ ದೊಡ್ಡ ಪಿಓಪಿ ಮೂರ್ತಿ ಸ್ಥಾಪಿಸುತ್ತೇವೆ ಸರಕಾರಕ್ಕೆ ದಂ ಇದ್ದರೆ ನಮ್ಮನ್ನು ತಡೆಯಲಿ" ಎಂದಿದ್ದಾರೆ! ಪರಿಸರವಾದಿಗಳೇ ಎಲ್ಲಿದ್ದೀರಾ? ಇಂತಹ ಸಮಯದಲ್ಲಿ ಪರಿಸರವಾದಿಗಳು ಸರಕಾರದ ಬೆಂಬಲಕ್ಕೆ ಬರುವುದು ಅವರ ಕರ್ತವ್ಯವಲ್ಲವೇ? ದೇವರ ಹೆಸರಲ್ಲಿ ಪರಿಸರಕ್ಕೆ ಮಾರಕವಾಗಿರುವ ಇಂತಹ ಕಿಡಿಗೇಡಿ ಮೂರ್ಖರನ್ನು ತಡೆಯಲು ಅವರಿಂದ ಯಾಕೆ ಆಗುತ್ತಿಲ್ಲ?

-ರಾಮಕೃಷ್ಣ ಕುಲಾಲ್, ಬೆಂಗಳೂರು

ಫುಟ್ಬಾಲ್ ಪಟ್ಟುಗಳನ್ನೆಲ್ಲ ಮಹಾಬಲಿಗೆ ವಿಷ್ಣುವೇ ಕಲಿಸಿಕೊಟ್ಟದ್ದಂತೆ. ಬ್ರೆಸಿಲಿನ ಬ್ಲ್ಯಾಕ್ ಪಲ್ಲೋ/ ವೈಟ್ ಪಲ್ಲೋ, ಒಟ್ಟಾರೆ ಅಲ್ಲಿ ನಮ್ಮ ವಿಷ್ಣು/ಬಲಿಗಳ ಜೀನ್ ಪ್ರಭಾವ ಇಲ್ಲದಿದ್ದರೆ ಅವರೆಲ್ಲ 'ಸಾಕರ್ ಸ್ಟಾರ್'ಗಳಾಗಲು ಸಾಧ್ಯವೇ ಇರುತ್ತಿರಲಿಲ್ಲ ಎನ್ನುತ್ತಾರೆ ನಮ್ಮ ಕೂಳ್ ದಂಡ ಕೋದಂಡಯ್ಯನವರು. ಅದೂ ಸರಿಯೇ.. ಏನಂತೀರಿ?

- ಸತೀಶ ಪೂಜಾರಿ, ಮಂಗಳೂರು

ಗೋವಾ, ಮಣಿಪುರ, ಬಿಹಾರ... ಗುಜರಾತ್


ಗುಜರಾತಿನಲ್ಲಿ ಈ ಒಂದು ವಾರದಲ್ಲಿ ಒಟ್ಟು ಆರು ಕಾಂಗ್ರೆಸ್ ಶಾಸಕರನ್ನು ಬಿಜೆಪಿ ತನ್ನತ್ತ ಸೆಳೆದುಕೊಂಡಿದೆ. 2012 ರಲ್ಲಿ ಗುಜರಾತಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸುಲಭವಾಗಿ ಬಹುಮತ ಗಳಿಸಿತ್ತು, ಆದರೆ ಈ ಬಾರಿ ಆ ವಿಶ್ವಾಸ ಬಿಜೆಪಿಗೆ ಇಲ್ಲ. ಇತ್ತೀಚಿನ ಒಂದು ಖಾಸಗಿ ಸಮೀಕ್ಷೆಯ ಪ್ರಕಾರ ಒಟ್ಟು 182 ಶಾಸಕ ಸ್ಥಾನದಲ್ಲಿ ಬಿಜೆಪಿ 75 ಸೀಟಿಗಿಂತ ಹೆಚ್ಚು ಗೆಲ್ಲಲಾರದು ಎಂದು ಕಂಡುಬಂದಿದೆ. ಮೇಲಾಗಿ ಆಗಸ್ಟ್ ಎರಡನೇ ವಾರದಲ್ಲಿ ನಡೆಯಲಿರುವ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಹಮದ್ ಪಟೇಲ್ ನಿಂತಿದ್ದು ಅವರು ಮುಸ್ಲಿಂ ಎಂಬ ಏಕೈಕ ಕಾರಣಕ್ಕಾಗಿ ಅವರನ್ನು ಸೋಲಿಸಲು ಕಾಂಗ್ರೆಸ್ ಶಾಸಕರನ್ನು ಬಿಜೆಪಿಯತ್ತ ಸೆಳೆಯುವ ತಂತ್ರದಲ್ಲಿ ಮೋದಿ-ಅಮಿತ್ ಶಾ ಕ್ರಿಮಿನಲ್ ಮೈಂಡ್ ಜೋಡಿ ತೊಡಗಿದೆ. ಗುಜರಾತ್ ವಿಧಾನಸಭೆಯಲ್ಲಿ ಕಾಂಗ್ರೆಸ್ ಈಗ 57 ಶಾಸಕರನ್ನು ಹೊಂದಿದ್ದು ಅಹಮದ್ ಪಟೇಲರು ಗೆಲ್ಲಲು 44 ವೋಟು ಸಾಕು. ಹಾಗಾಗಿ ರಾಜ್ಯಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ಸಿನ ಶಕ್ತಿಯನ್ನು 44 ಕ್ಕಿಂತ ಕಡಿಮೆ ಮಾಡಲು ಬಿಜೆಪಿ ಪ್ರಯತ್ನಿಸುತ್ತಿದ್ದು ಸುಮಾರು 300 ಕೋಟಿ ರೂಪಾಯಿ ಈ ಕೆಲಸಕ್ಕಾಗಿ ಬಿಜೆಪಿ ಬಂಡವಾಳ (?) ಹೂಡಿದೆಯಂತೆ.

ಬಿಹಾರದಲ್ಲಿ ತಾನು ಭ್ರಷ್ಟಾಚಾರ ರಹಿತ (ಕೊಲೆ ಆರೋಪಿತ) ನಿತೀಶ್ ಕುಮಾರರನ್ನು ಬೆಂಬಲಿಸಿರುವುದಾಗಿ ಕೊಚ್ಚುತ್ತಿರುವ ಬಿಜೆಪಿ ತನ್ನದೇ ಪ್ರಧಾನ ಮಂತ್ರಿಯ ರಾಜ್ಯದಲ್ಲಿ ಭಯಂಕರ ಭ್ರಷ್ಟಾಚಾರದಲ್ಲಿ ತಾನೇ ತೊಡಗಿದೆ. ಗೋವಾದಲ್ಲಿ ಕಳೆದ ಮಾರ್ಚ್‌ನಲ್ಲಿ ಶಾಸಕರನ್ನು ಖರೀದಿಸಲು ಹೂಡಿದ 250 ಕೋಟಿ, ಮಣಿಪುರದಲ್ಲಿ ಶಾಸಕರನ್ನು ಕೊಳ್ಳಲು ಹೂಡಿದ 200 ಕೋಟಿ ರೂಪಾಯಿ ಹಾಗೂ ಇತ್ತೀಚೆಗೆ ಬಿಹಾರದಲ್ಲಿ 71 ಜೆಡಿಯೂ ಶಾಸಕರಿಗೆ ಕೊಟ್ಟ 500 ಕೋಟಿ ರೂಪಾಯಿ, ಹೀಗೆ ಹೂಡಿದ ಕಪ್ಪುಹಣ ಬಿಜೆಪಿಗೆ ಒಳ್ಳೆಯ ಡಿವಿಡೆಂಡ್ ತಂದುಕೊಡುತ್ತಿದೆ. ಅದಕ್ಕಾಗಿ ತನ್ನ ಬಂಡವಾಳದ ಮೂಲಸೆಲೆಯಾದ ಗುಜರಾತಿನಲ್ಲಿ ಅದು ಶತಾಯಗತಾಯ ನವೆಂಬರ್ ಇಲೆಕ್ಷನ್ ಗೆಲ್ಲಲು ವಿವಿಧ ಪಿತೂರಿ ನಡೆಸುತ್ತಿದೆ. ನವಂಬರ್ ಕೊನೆಯ ಒಳಗೆ ಒಟ್ಟು ಹತ್ತು ಸಾವಿರ ಕೋಟಿ ರೂಪಾಯಿ ಗುಜರಾತಿನ ಚುನಾವಣೆಗಾಗಿ ಬಿಜೆಪಿ ಖರ್ಚು ಮಾಡಲಿದೆ ಎಂದು ವರದಿಯಿದೆ. ಇದುವೇ ಮೋದಿಯ ಭ್ರಷ್ಟಾಚಾರರಹಿತ ಪಾರದರ್ಶಕ ಆಡಳಿತದ ಪರಿ!

-ಸುಜೇರ್ ರಶ್ಮಿತ್ ಗೌಡ, ಪುತ್ತೂರು

ಬೇಬಿ ಶೋಭಾ ಆದ ಪರಿ

ಕುರುಬರ ಸಮಾಜವನ್ನು ಪರಿಶಿಷ್ಟ ಪಂಗಡ ಎಂದು ವರ್ಗೀಕರಿಸಬೇಕು ಎಂದು ಮೊನ್ನೆ ಬಾಗಲಕೋಟೆಯಲ್ಲಿ



ಒಬ್ಬ ಸ್ವಾಮೀಜಿಯ ನೇತೃತ್ವದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷದವರು ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ದಾಂಧಲೆ ಮಾಡಿ ಕಚೇರಿಯ ಕನ್ನಡಿ ಪುಡಿ ಮಾಡಿದ ಸುದ್ದಿ ಬಂದಿದೆ. ಕುರುಬರಿಗೆ ಪರಿಶಿಷ್ಟರು ಅರ್ಥಾತ್ ದಲಿತರು ಎಂಬ ಹಣೆಪಟ್ಟಿ ಕೊಟ್ಟರೆ ಕುರುಬರ ಮನೆಯಲ್ಲಿ ರಾಜಕಾರಣಿಗಳು ಪಟ್ಟಾಗಿ ಎಳೆ ಕುರಿಮರಿ ಮಾಂಸ ಬಿಟ್ಟಿಯಾಗಿ ತಿಂದು ಅದಕ್ಕೆ 'ದಲಿತರ ಮನೆಯಲ್ಲಿ ಊಟ' ಎಂದು ಹಣೆಪಟ್ಟಿ ತಾಗಿಸಿ ಪ್ರಚಾರ ಪಡೆಯಬಹುದು. ಕುರಿಮರಿಯ ಎಳೆ ಮಾಂಸದ (ಲ್ಯಾಂಬ್) ರುಚಿ ಅದ್ಭುತ ಎಂಬುದನ್ನು ನಾನು ಉತ್ತರ ಕರ್ನಾಟಕದಲ್ಲಿ ಉದ್ಯೋಗದಲ್ಲಿ ಇದ್ದಾಗ ಕಂಡಿದ್ದೇನೆ.


ರಾಮನಾಥ್ ಕೋವಿಂದ್ ಎಂಬ ಮೀನುಗಾರ ಜಾತಿಯವರನ್ನು ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಮಾತ್ರ ಪರಿಶಿಷ್ಟ ಜಾತಿಗೆ ಸೇರಿಸಿ ಅವರನ್ನು ದಲಿತ ಕೋಟಾದಲ್ಲಿ ರಾಷ್ಟ್ರಪತಿ ಮಾಡಿದ್ದರಿಂದ ಕರ್ನಾಟಕದ ಗಂಗಮತಸ್ಥ, ಖಾರ್ವಿ, ಮೊಗವೀರ, ಕೋಲಿ ಮುಂತಾದ ಮೀನುಗಾರ ಸಮುದಾಯದವರನ್ನೂ ಪರಿಶಿಷ್ಟ ಜಾತಿಗೆ ಸೇರಿಸಿ ದಲಿತ ಎಂದು ವರ್ಗೀಕರಿಸಬೇಕು ಎಂಬ ಬೇಡಿಕೆ ಕರ್ನಾಟಕದಲ್ಲಿ ಈಗಲೇ ಹುಟ್ಟಿದರೆ ಒಳ್ಳೆಯದು. ಯಾಕೆಂದರೆ ಇದರಿಂದ ಯಡ್ಡಿ-ಬೇಬಿಯಂತಹ ರಾಜಕಾರಣಿಗಳಿಗೆ ಹೆಚ್ಚೆಚ್ಚು ದಲಿತರ ಮನೆಯಲ್ಲಿ ಊಟ ಮಾಡಲು ಅವಕಾಶ ಸಿಗುತ್ತದೆ. ಜತೆಗೆ ಬೇಬಿ ಶೋಭಾ ಕರಾವಳಿಯವಳಾಗಿದ್ದು ಅವರಿಗೆ ಮೀನು ಖಾದ್ಯ ತುಂಬಾ ಪ್ರಿಯವಾದುದರಿಂದ ಅವರಿಗೆ ಮೀನುಗಾರರ ಮನೆಯಲ್ಲಿ ಮೀನು ತಿನ್ನುವ ಛಾನ್ಸ್ ಆಗಾಗ ಸಿಗುತ್ತದೆ.


ರಾಮಚಂದ್ರ ಗೌಡರು ಶೋಭಾರನ್ನು ಮೊಟ್ಟಮೊದಲಿಗೆ ಬಿಜೆಪಿ ಪಕ್ಷಕ್ಕೆ ಕರೆತಂದಾಗ ಅವರ ಅಧಿಕೃತ ಹೆಸರು ಕುಮಾರಿ ಬೇಬಿ ಆಗಿತ್ತು, ಈ ವಿಚಿತ್ರ ಹೆಸರನ್ನು ಬದಲಿಸಿ ರಾಮಚಂದ್ರ ಗೌಡರು ಬೇಬಿಗೆ ಮೀನು ಇಷ್ಟವೆಂದು ಮೀನಾಕುಮಾರಿ ಎಂಬ ಹೆಸರು ಸಜೆಸ್ಟ್ ಮಾಡಿದರಂತೆ. ಆದರೆ ಅದು ಬೇಬಿಗೆ ಇಷ್ಟವಾಗಲಿಲ್ಲ ಎಂದು ರಾಗೌಡರು ಅವಳಿಗೆ ಶೋಭಾ ಎಂದು ಮರುನಾಮಕರಣ ಮಾಡಿದರಂತೆ. ಆದರೆ ಅವಳಿಗೆ ಪಬ್ಲಿಕ್‌ನಲ್ಲಿ ಹೇಗೆ ಮಾತನಾಡಬೇಕು ಎಂದು ಕಲಿಸುವುದನ್ನು ಗೌಡರು ಮರೆತುಬಿಟ್ಟರು ಪಾಪ.

-ವಿಜಯ್ ಬಿ ಕಾಂಚನ್, ಮಂಗಳೂರು

ಮೋದಿಯ ಟೀ ಸ್ಟಾಲ್ ಮತ್ತು ಕಂಪ್ಯೂಟರ್

ಮೋದಿ ಚಿಕ್ಕಂದಿನಲ್ಲಿ ಲೈಸನ್ಸ್ ಇಲ್ಲದೇ ಚಹಾ ಮಾರಿರುವರು ಎನ್ನುವ ಕಾಲ್ಪನಿಕ ಕಥೆಯಲ್ಲಿ ಬರುವ ಸ್ಥಳ ಗುಜರಾತಿನ ವಡ್ನಗರ್ ರೇಲ್ವೇ ಸ್ಟೇಷನ್. ಅಲ್ಲಿ ರೇಲ್ವೇ ಪ್ಲಾಟ್‌ಫಾರ್ಮ್‌ನಲ್ಲಿ ಮೋದಿಯ ತಂದೆ ಟೀಸ್ಟಾಲ್ ಇಟ್ಟದ್ದರಂತೆ. ಅದಕ್ಕಾಗಿ ಈಗ ಕೇಂದ್ರ ಪ್ರವಾಸೋದ್ಯಮ ಇಲಾಖೆ ಮೋದಿ ಚಹಾ ಮಾರಿರುವ ಆ ಟೀಸ್ಟಾಲನ್ನು ರಾಷ್ಟ್ರೀಯ ಸ್ಮಾರಕವಾಗಿ ಪರಿವರ್ತಿಸಿ ಅದನ್ನು ಪ್ರವಾಸಿಕೇಂದ್ರವನ್ನಾಗಿ ಮಾಡಲಿದ್ದು ಅದಕ್ಕೆ ಅನುದಾನವನ್ನೂ ಕೇಂದ್ರ ಸರಕಾರ ಮಂಜೂರು ಮಾಡಿದೆಯಂತೆ. ಜತೆಗೆ ಭಾರತದ ಮೂಲೆಮೂಲೆಯ ಮೋದಿಯ ಭಕ್ತಕುರಿಗಳು ಬಂದು ಈ ಪವಿತ್ರ ಟೀಸ್ಟಾಲಿನ ದರ್ಶನ ಮಾಡಿ ಕೃತಾರ್ಥರಾಗಲು ಅನುಕೂಲವಾಗಲೆಂದು ಸುರೇಶ್ ಪ್ರಭುವಿನ ರೇಲ್ವೇ ಇಲಾಖೆ ದೇಶದ ಎಲ್ಲಾ ದಿಕ್ಕಿನಿಂದ ಈ ಪ್ರವಾಸಿತಾಣಕ್ಕೆ ವಾರಕ್ಕೆರಡು ಬಾರಿ 'ಚಾತೀರ್ಥಯಾತ್ರಾ ಸ್ಪೆಷಲ್ ಟ್ರೇನ್' ಓಡಿಸಲಿದೆಯಂತೆ. ಮೋದಿ ಚಹಾ ಮಾರಿರುವ ಈ ವಡ್ನಗರದ ಹಳೇ ರೇಲ್ವೇ ಸ್ಟೇಷನ್ ಮ್ಯುಜಿಯಂ ಆಗಲಿರುವುದರಿಂದ ಪ್ರಯಾಣಿಕರಿಗಾಗಿ ಹೊಸ ರೇಲ್ವೆ ಸ್ಟೇಷನ್ ಬೇರೆಡೆ ಕಟ್ಟುವುದು ಅನಿವಾರ್ಯ ವಾಗಿದೆಯಂತೆ.





ವಾಸ್ತವವೆಂದರೆ, ನರೇಂದ್ರ ಆ ಟೀಸ್ಟಾಲಲ್ಲಿ ಚಹಾ ಮಾರಿದ್ದು ಯಾವಾಗ ಎಂದು ಅವರ ಹತ್ತಿರದ ಸಂಬಂಧಿಕರಿಗೇ ಗೊತ್ತಿಲ್ಲ, ಮೋದಿಗೆ ಶಾಲೆ ಕಾಲೇಜುಗಳಲ್ಲಿ ಯಾವುದೇ ಸಹಪಾಠಿಗಳೇ ಇರಲಿಲ್ಲವೇನೋ, ಹಾಗಾಗಿ ಈವರೆಗೆ ಯಾವ್ರೊಬ್ಬನೂ ತಾನು ಮೋದಿಯ ಶಾಲೆ ಅಥವಾ ಕಾಲೇಜಿನ ಕ್ಲಾಸ್‌ಮೇಟ್ ಆಗಿದ್ದೆ ಎಂದು ಹೇಳಿಕೊಂಡು ಉದ್ಭವಿಸಿಲ್ಲ!

ನಿಜವಾಗಿ ಚಿಕ್ಕಂದಿನಲ್ಲಿ ಮೋದಿಯ ಅಣ್ಣಂದಿರಾದ ಸೋಮಾ ಭಾಯ್ ಮತ್ತು ಪ್ರಹ್ಲಾದ್ ಭಾಯ್ ಮಾತ್ರ ಆ ರೇಲ್ವೆ ಟೀ ಸ್ಟಾಲಿನಲ್ಲಿ ಕೆಲಸ ಮಾಡಿದ್ದನ್ನು ನೋಡಿದವರಿದ್ದಾರೆ. ಆದರೆ ನರೇಂದ್ರಭಾಯ್ ಅಲ್ಲಿ ಕೆಲಸ ಮಾಡಿದ್ದನ್ನು ಯಾರೂ ನೋಡಿಲ್ಲ, ಆಗ ಮೋದಿ ಉಂಡಾಡಿಯಾಗಿ ತಿರುಗಾಡಿಕೊಂಡಿದ್ದರು ಎಂಬುದು ಬೇರೆ ವಿಷಯ. ಮೋದಿ ತನ್ನ 17ನೇ ವಯಸ್ಸಿನಲ್ಲಿ ಮೆಟ್ರಿಕ್‌ನಲ್ಲಿ ಫೇಲ್ ಆಗಿ ತಂದೆ ಬೈದರೆಂದು ಮನೆಬಿಟ್ಟು ಓಡಿ ಹೋಗಿ ಐದು ವರ್ಷಗಳ ಕಾಲ ಗುಜರಾತಿ ನಾಟಕ ಕಂಪನಿಯೊಂದಿಗೆ ನಟಿಸುತ್ತಾ ತಿರುಗಾಡಿದ್ದರು. ಈಗ ವಡ್ನಗರ್ ರೇಲ್ವೇ ಟೀಸ್ಟಾಲ್ ಪ್ರವಾಸಿಕೇಂದ್ರ ಆಗಲಿರುವುದರಿಂದ ಮೋದಿ ಕೆಲಸ ಮಾಡಿರುವ ಆ ಗುಜರಾತಿ ನಾಟಕ ಕಂಪನಿಯನ್ನೂ ಮ್ಯೂಜಿಯಂ ಮಾಡಿ ಪ್ರವಾಸಿಕೇಂದ್ರವಾಗಿ ಅಭಿವೃದ್ಧಿಪಡಿಸಬೇಕು. ಜಗತ್ತಿನಲ್ಲಿ ಎಲ್ಲಿಯೂ ಇರದಿದ್ದ "ಎಂಟಾಯರ್ ಪಾಲಿಟಿಕಲ್ ಸೈಯನ್ಸ್" ಎಂಬ ಅಪರೂಪದ ವಿಷಯದಲ್ಲಿ ನರೇಂದ್ರ ಮೋದಿಯ ಬಿಎ/ ಎಮ್‌ಎ ಪದವಿ ಸರ್ಟಿಫಿಕೇಟನ್ನು ಪ್ರಿಂಟ್ ಮಾಡಿದ್ದ ಆ ಕಂಪ್ಯೂಟರ್ ಮತ್ತು ಪ್ರಿಂಟರನ್ನೂ ಸಹ ಹೆರಿಟೇಜ್ ವಸ್ತು ಎಂದು ಪರಿಗಣಿಸಿ ವಡ್ನಗರ್ ರೇಲ್ವೇ ಸ್ಟೇಷನ್ನಿನಲ್ಲಿಯೇ ಪ್ರದರ್ಶನಕ್ಕೆ ಇಟ್ಟರೆ ದೇಶವಿದೇಶದಿಂದ ಲಕ್ಷಾಂತರ ಜನರು ಅದನ್ನು ವೀಕ್ಷಿಸಲು ಬರುತ್ತಾರೆ ಹಾಗೂ ಗುಜರಾತಿನ ಪ್ರವಾಸೋದ್ಯಮ ಭಯಂಕರ ಬೆಳೆಯುತ್ತದೆ. ಯಾಕೆಂದರೆ ಮೋದಿ ಕಾಲೇಜಿಗೆ ಹೋಗುತ್ತಿದ್ದಾಗ ಅಂದರೆ 1970-78 ರಲ್ಲಿ ನಮ್ಮ ಭಾರತ ದೇಶ ಬಿಡಿ, ಆಗಿನ್ನೂ ಅಮೆರಿಕ/ ಜಪಾನಿನಲ್ಲೂ ಕಂಪ್ಯೂಟರ್ ಪ್ರಿಂಟರ್ ಬಳಕೆಗೆ ಬಂದಿರಲಿಲ್ಲ, ಹಾಗಾಗಿ ಮೋದಿಯ (ನಕಲಿ) ಕಾಲೇಜ್ ಸರ್ಟಿಫಿಕೇಟ್ ಪ್ರಿಂಟ್ ಮಾಡಿದ ಕಂಪ್ಯೂಟರ್ ಮತ್ತು ಪ್ರಿಂಟರ್ ಆಗ ಜಗತ್ತಿನ ಎಂಟನೇ ಅದ್ಭುತವಾಗಿತ್ತು! ಭಾರತವೇ ಕಂಪ್ಯೂಟರ್ ಮತ್ತು ಪ್ರಿಂಟರಿನ ಆವಿಷ್ಕಾರ ಮೊಟ್ಟ ಮೊದಲು ಮಾಡಿದ್ದು ಎಂಬುದಕ್ಕೆ ಮೋದಿಯ ಪದವಿ ಸರ್ಟಿಫಿಕೇಟುಗಳೇ ಸಾಕ್ಷಿ.

ನಮ್ಮ ದೇಶದಲ್ಲಿ ರಾಮಾಯಣ ಕಾಲದಲ್ಲಿ ಪುಷ್ಪಕ ವಿಮಾನ ಆವಿಷ್ಕಾರವಾಯಿತು, ಮಹಾಭಾರತ ಕಾಲದಲ್ಲಿ ಸ್ಟೆಮ್ ಸೆಲ್/ಟೆಸ್ಟ್ ಟ್ಯೂಬ್ ಬೇಬಿ ಮತ್ತು ಪ್ಲಾಸ್ಟಿಕ್ ಸರ್ಜರಿ ಆವಿಷ್ಕಾರವಾಯಿತು, ಗಣಪತಿಯ ತಲೆ ಪ್ಲಾಸ್ಟಿಕ್ ಸರ್ಜರಿಗೆ ಸಾಕ್ಷಿ. ಹಾಗೆಯೇ ಮೋದಿಯ ಸರ್ಟಿಫಿಕೇಟ್ ಪ್ರಿಂಟ್ ಮಾಡಿದ ಕಂಪ್ಯೂಟರ್-ಪ್ರಿಂಟರ್ ಸಹ ಭಾರತವೇ ಕಂಪ್ಯೂಟರ್ ಮತ್ತು ಇಂಕ್ ಜೆಟ್ ಪ್ರಿಂಟರ್ ಎರಡನ್ನೂ ಮೊಟ್ಟಮೊದಲು ಆವಿಷ್ಕರಿಸಿದ್ದು ಎಂಬುದಕ್ಕೆ ಸಾಕ್ಷಿ.

1970 ರ ಕಾಲದಲ್ಲಿಯೇ ಕಂಪ್ಯೂಟರ್ ಆವಿಷ್ಕರಿಸಿದವರಿಗೆ ಈಗಿನ ಜುಜುಬಿ ಇವಿಎಮ್ ಮತಯಂತ್ರ ಹ್ಯಾಕ್ ಮಾಡುವುದು ಕಷ್ಟದ ಕೆಲಸವಲ್ಲ ಬಿಡಿ. ಐನೂರು ವರ್ಷಗಳ ಹಿಂದೆಯೇ ಫ್ರೆಂಚ್ ಭವಿಷ್ಯಕಾರ ನೋಸ್ಟ್ರಡಮಸ್ ಒಗಟಿನಲ್ಲಿ ಹೇಳಿದ್ದ - "ಯಂತ್ರದ" ಮೂಲಕ ಮೋಸದಿ ಅಧಿಕಾರ ಕದಿಯುವ ಮಾತಿನಮಲ್ಲ ನರಿಯೊಂದು (ಫಾಕ್ಸ್) ಸರ್ವಾಧಿಕಾರಿಯಾಗಿ ಕೋಮು ಗೃಹಯುದ್ಧ (ಸಿವಿಲ್ ವಾರ್) ಮಾಡಿಸಿ ಒಂದು ಬಿಲಿಯನ್ ಜನರನ್ನು ಕಾಡುತ್ತದೆ ಪೂರ್ವ ದೇಶವೊಂದರಲ್ಲಿ!

- ಆರ್.ಬಿ.ಶೆಣೈ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 16-08-2017 RNI No. KARKAN20

ದರ್ಶನ್ ಜೊತೆ ನಟಿಸಲು ಶಿವಣ್ಣ 'ನೋ' ಅಂದಿದ್ದೇಕೆ?



ಹ್ಯಾಟ್ರಿಕ್ ಹೀರೊ ಶಿವಣ್ಣ, ದರ್ಶನ್ ನಟನೆಯ ಐವತ್ತನೇ ಸಿನಿಮಾ 'ಕುರುಕ್ಷೇತ್ರ'ದಲ್ಲಿ ಕರ್ಣನ ಪಾತ್ರ ಮಾಡ್ತಾರೆ ಅನ್ನೋ ಗಾಸಿಪ್‌ಗೆ ಫುಲ್‌ಸ್ಟಾಪ್ ಬಿದ್ದಿದೆ. ಆ ಸಿನಿಮಾದಲ್ಲಿ ತಾನು ನಟಿಸೋಲ್ಲ ಅಂತ ಸ್ವತಃ ಶಿವಣ್ಣ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಿಗೆ ಇಬ್ಬರನ್ನೂ ಒಟ್ಟಿಗೇ ತೆರೆಮೇಲೆ ಕಾಣುವ ಅಭಿಮಾನಿಗಳ ನಿರೀಕ್ಷೆ ಪೋಸ್ಟ್‌ಪೋನ್ ಆದಂತಾಗಿದೆ. ಆದ್ರೆ ವಿಷಯ ಅದಲ್ಲ, ದರ್ಶನ್-ಶಿವಣ್ಣ ನಡುವೆ ಕೋಲ್ಡ್‌ವಾರ್ ನಡೆಯುತ್ತಿರೋದ್ರಿಂದಲೇ ಶಿವಣ್ಣ ನೋ ಅಂದಿದ್ದಾರೆ ಎಂಬ ಥಿಯರಿ ಹುಟ್ಟಿಕೊಂಡಿತ್ತು.

ಆದ್ರೆ ಅದನ್ನು ಅಲ್ಲಗಳೆದಿರುವ ಶಿವಣ್ಣ ತನ್ನ ಸಿನಿಮಾಗಳ ಡೇಟ್ಸ್ ಹೊಂದಾಣಿಕೆಯ ಕಾರಣ ಕೊಟ್ಟಿದ್ದಾರೆ. ದರ್ಶನ್‌ಗು ಸ್ಯಾಂಡಲ್‌ವುಡ್‌ನ ದೊಡ್ಮನೆಗೂ ಸಂಬಂಧ ಅಷ್ಟಕ್ಕಷ್ಟೇ ಎಂಬ ಮಾತುಗಳು ಚಾಲ್ತಿಯಲ್ಲಿರೋ ಹೊತ್ತಿನಲ್ಲಿ ಶಿವಣ್ಣನ ಇಂಥಾ ತೀರ್ಮಾನ ಗಾಂಧಿನಗರದಂತಹ ಗಾಸಿಪ್ ಲೋಕದಲ್ಲಿ ರೆಕ್ಕೆಪುಕ್ಕ ಪಡೆದುಕೊಳ್ಳಲು ಬಹಳ ಸಮಯವೇನೂ ಬೇಕಾಗಿಲ್ಲ. ಅನುಭವಿ ಶಿವಣ್ಣನಿಗೆ ಇಂಥಾ ಗಾಸಿಪ್ ಶೂರರ ಹಕೀಕತ್ತು ತಿಳಿದಿದ್ದರಿಂದಲೇ ಆದಷ್ಟುಬೇಗ ಸ್ಪಷ್ಟನೆ ಕೊಟ್ಟು ಹುಟ್ಟಬಹುದಾಗಿದ್ದ ವಿವಾದಕ್ಕೆ ಮಂಗಳ ಹಾಡಿದ್ದಾರೆ. ಅಂದಹಾಗೆ ಶಿವಣ್ಣನಿಗೆ ಕರ್ಣನ ಪಾತ್ರ ಮಾಡಬೇಕು ಅಂತ ಸಿಕ್ಕಾಪಟ್ಟೆ ಇಷ್ಟವಿತ್ತಂತೆ.

ಆ ಪಾತ್ರಕ್ಕೆ ಶಿವಣ್ಣ ತತ್‌ಕ್ಷಣವೇ ಕನಿಷ್ಠವೆಂದರೂ 5 ಕೆ.ಜಿ ತೂಕ ಹೆಚ್ಚಿಸಿಕೊಳ್ಳಬೇಕಿತ್ತು, ಅದಕ್ಕಾಗಿ ಕೊಂಚ ಸಮಯ ಬೇಕು. ಆದ್ರೆ ಶಿವಣ್ಣ 'ಮಾಸ್ ಲೀಡರ್' ಮತ್ತು 'ಟಗರು' ಚಿತ್ರಗಳಿಗೆ ಫಿಕ್ಸ್ ಆಗಿರೋದ್ರಿಂದ ಅದು ಸಾಧ್ಯವಿಲ್ಲ ಎಂದು ಆಫರ್ ಕೈಬಿಟ್ಟಿದ್ದಾರೆ.

ಅದೇನೇ ಇರಲಿ, ಆದಷ್ಟು ಬೇಗ ಇವರಿಬ್ಬರೂ ಒಟ್ಟಿಗೇ ನಟಿಸಿ,ನೋಡು ಗರಿಗೆ ಖುಷಿ ಹಂಚುವಂತಾಗಲಿ.

ಹಿಂದಿ, ತಮಿಳಿಗೆ 'ಆಪರೇಷನ್'

ಇತ್ತೀಚಿಗೆ ಕನ್ನಡದ ಹೊಸ ನಿರ್ದೇಶಕರ ಹೊಸತನದ ಸಿನಿಮಾಗಳು ಸಿಕ್ಕಾಪಟ್ಟೆ ಸದ್ದು ಮಾಡುತ್ತಿವೆ. ಸಿಂಪಲ್ ಸುನಿ ನಿರ್ದೇಶನದ 'ಆಪರೇಷನ್ ಅಲಮೇಲಮ್ಮ' ಚಿತ್ರಕ್ಕೂ ಭರ್ಜರಿ ರೆಸ್ಪಾನ್ಸ್ ಸಿಕ್ಕಿದ್ದು ಇದೀಗ ತಮಿಳು, ಹಿಂದಿ ಮತ್ತು ಮರಾಠಿಗೂ ರೀಮೇಕ್ ಆಗಲಿದೆಯಂತೆ. ತಮಿಳಿನಲ್ಲಿ 'ಹಾರಿಜನ್'




ಸಂಸ್ಥೆ 'ಆಪರೇಷನ್ ಅಲಮೇಲಮ್ಮ'ನ ರೀಮೇಕ್ ಹಕ್ಕು ಖರೀದಿಸಲು ಮುಂದೆ ಬಂದಿದೆ. ಕನ್ನಡದಲ್ಲಿ ರಿಷಿ ಮಾಡಿದ್ದ ಪಾತ್ರವನ್ನ ತಮಿಳಿನಲ್ಲಿ ವಿಜಯ್ ಸೇತುಪತಿ ಮಾಡಲಿದ್ದಾರಂತೆ. ಈ ಬಗ್ಗೆ ಮಾತುಕತೆ ಕೂಡ ಆಗಿದೆಯಂತೆ.

ಹಾಸ್ಯದಲ್ಲಿ ಸಸ್ಪೆನ್ಸ್ ತೋರಿಸಿದ ಸುನಿಯ 'ಅಲಮೇಲಮ್ಮ'ನನ್ನು ಹಿಂದಿಗೆ ಇಳಿಸಲು ಮುಂದೆ ಬಂದಿರುವ ಬಾಲಿವುಡ್‌ನ ಧೂನ್ ಪ್ರೊಡಕ್ಷನ್ ಸಂಸ್ಥೆಯೇ ಅದನ್ನು ಮರಾಠಿಗೂ ರೀಮೇಕ್ ಮಾಡಲಿದೆ ಅನ್ನೋದು ಲೇಟೆಸ್ಟ್ ಸುದ್ದಿ. ಅಂದಹಾಗೆ, 'ಆಪರೇಷನ್ ಅಲಮೇಲಮ್ಮ'ನ ಸಕ್ಸಸ್‌ನಿಂದ ಥ್ರಿಲ್ ಆಗಿರುವ ಸುನಿ ಆದಷ್ಟೂ ಬೇಗ ಅಲಮೇಲಮ್ಮನ ಪಾರ್ಟ್ 2 ಚಿತ್ರವನ್ನ ಶುರು ಮಾಡಲಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಸದ್ಯಕ್ಕೆ ಸಿಂಪಲ್ ಸುನಿ 'ಚಮಕ್' ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ.



ರಾಧಿಕಾ, ರಾಜಕೀಯ ಮತ್ತು ಕುಮಾರಣ್ಣ



'ತಂಗಿ' ಬ್ರಾಂಡಿನ ರಾಧಿಕಾ ಹೆಸರು ಸಿನಿಮಾದಲ್ಲಿ ಮಿಂಚಿದ್ದಕ್ಕಿಂತ ಗಾಸಿಪ್‌ನಲ್ಲಿ ಹೊರಳಾಡಿದ್ದೇ ಹೆಚ್ಚು. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಜೊತೆಗಿನ ದಾಂಪತ್ಯದಿಂದ ಶುರುವಾಗಿ ದುಬಾರಿ ವಿಚ್ಛೇದನದವರೆಗೂ ಪಕ್ಕಾ ನ್ಯೂಸ್‌ಗಿಂತ ಅಂತೆಕಂತೆಗಳೇ ರಾಧಿಕಾ ಹೆಸರನ್ನು ಚಲಾವಣೆಯಲ್ಲಿಟ್ಟಿದ್ದವು. ಇದೀಗ ಮತ್ತೆ ಅಂತದ್ದೇ ಒಂದು ಸುದ್ದಿ ಸುಳಿದಾಡುತ್ತಿದೆ. ಎಲ್ಲರೂ ಅಂದುಕೊಂಡಂತೆ ಅವರಿಬ್ಬರ ನಡುವೆ ವಿಚ್ಛೇದನವೇ ಆಗಿಲ್ಲವಂತೆ. ಎಲ್ಲಾ ದಂಪತಿಗಳಂತೆ ಹಾಯಾಗಿ ಸಂಸಾರ ಮಾಡಿಕೊಂಡಿದ್ದಾರಂತೆ. ಸ್ವತಃ ರಾಧಿಕಾ ಹೀಗೆ ಹೇಳಿಕೊಂಡಿದ್ದಾರೆ.




ಅಪ್ಪಿತಪ್ಪಿ ಯಾರಾದರು ವಿಚ್ಛೇದನದ ವಿಷಯವೆತ್ತಿದರೆ ಕಣ್ಣು ಕೆಂಪಗಾಗಿಸಿಕೊಂಡು ರೇಗಿಬಿಡುವ ರಾಧಿಕಾ "ವಿಚ್ಛೇದನ ಆಗಿದೆ ಅಂತ ನಾ ಹೇಳಿದ್ನಾ ಅಥವಾ 'ಅವ್ರು' ಹೇಳಿದ್ರಾ ಸುಮ್‌ಸುಮ್ನೆ ನೀವೇ ಏನೇನೋ ಕಲ್ಪಿಸಿಕೊಂಡು ಕನವರಿಸಬೇಡಿ" ಅನ್ನೋ ಖಡಕ್ ಉತ್ತರ ಉದುರಿಸಿಬಿಡುತ್ತಾರಂತೆ. ಅಷ್ಟೇ ಅಲ್ಲ, "ನನ್ನನ್ನು ಬರೀ ರಾಧಿಕಾ ಅಂತ ಕರೆಯಬೇಡಿ, ರಾಧಿಕಾ ಕುಮಾರಸ್ವಾಮಿ ಅಂತಲೇ ಕರೀರಿ, ಯಾಕಂದ್ರೆ ನಾನು ಸಾಯೋವರೆಗೂ ಆ ಹೆಸರು ನನ್ನ ಜೊತೆಗೇ ಇರುತ್ತೆ" ಅನ್ನೋ ಫರ್ಮಾನನ್ನೂ ಹೊರಡಿಸಿರುವ ರಾಧಿಕಾ ತುಂಬಾ ದಿನಗಳ ನಂತರ ಮತ್ತೆ ರಂಗೇರಲು ಶುರು ಮಾಡಿದ್ದಾರೆ. ಡೈವೋರ್ಸ್ ಗಾಸಿಪ್‌ನ ನಂತರ ಕೆಲ ದಿನ ನಾಪತ್ತೆಯಾಗಿದ್ದ ರಾಧಿಕಾ, ಅಲ್ಲಲ್ಲ ರಾಧಿಕಾ ಕುಮಾರಸ್ವಾಮಿ, ಇದೀಗ ಮತ್ತೆ ಸಿನಿಮಾಗಳಲ್ಲಿ ಬ್ಯುಸಿ ಆಗಿದ್ದಾರೆ.

ಸದ್ಯ ಕ್ರೇಜಿಸ್ಟಾರ್ ರವಿಚಂದ್ರನ್ ಅಭಿನಯದ 'ರಾಜೇಂದ್ರ ಪೊನ್ನಪ್ಪ' ಹಾಗೂ ಅರ್ಜುನ್ ಸರ್ಜಾ ನಟನೆಯ 'ಕಾಂಟ್ರಾಕ್ಟ್' ಚಿತ್ರಗಳಲ್ಲಿ ರಾಧಿಕಾ ಕುಮಾರಸ್ವಾಮಿಯೇ ನಾಯಕಿ. ಜೊತೆಗೆ ಕಿರುತೆರೆ ಡ್ಯಾನ್ಸ್ ರಿಯಾಲಿಟಿ ಶೋವೊಂದರ ಜಡ್ಜಮ್ಮನೂ ಹೌದು. ಅಂದಹಾಗೆ, ರಾಧಿಕಾ ಕುಮಾರಸ್ವಾಮಿಗೆ ರಾಜಕೀಯಕ್ಕೂ ಬರುವ ಆಸೆಯಿದೆಯಂತೆ. "ಸದ್ಯಕ್ಕೆ ಒಳ್ಳೆ ಸಿನಿಮಾ ಮಾಡೋದಷ್ಟೆ ನನ್ನ ಗುರಿಯಾದ್ರೂ ಭವಿಷ್ಯದಲ್ಲಿ ರಾಜಕೀಯಕ್ಕೆ ಬ... ಬರಬಲ್ಲೆ" ಅನ್ನೋ ಸುಳಿವು ನೀಡಿದ್ದಾರೆ. ಹಾಗೇನಾದರು ಆದಲ್ಲಿ ಸಿನಿಮಾದಷ್ಟೆ ರಾಜಕ... ರಂಗೇರುವುದರಲ್ಲಿ ಅಚ್ಚರಿಯಿಲ್ಲ.

■ ಗಿರೀಶ್ ತಾ...

ಮಗಳ ಮತಾಂತರಕ್ಕೆ ಅಪ್ಪನ ಹಾರೈಕೆ



ಕಮಲ್ ಹಸನ್‌ರ ಕಿರಿಯ ಮಗಳು ಅಕ್ಷರಾ ಬೌದ್ಧ ಧರ್ಮಕ್ಕೆ ಮತಾಂತರವಾಗಿದ್ದಾಳೆ. ಮೊದಲಿನಿಂದಲೂ ಬೌದ್ಧ ಜೀವನಕ್ರಮದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ನಾಸ್ತಿಕ ಮನೋಭಾವದ ಅಕ್ಷರಾ ಆ ಧರ್ಮಕ್ಕೆ ಮತಾಂತರವಾಗಿರುವುದರ ಬಗ್ಗೆ ಕಿಂಚಿತ್ತೂ ಅಸಮಾಧಾನವಿಲ್ಲ, ಬದಲಿಗೆ ಮಗಳ ಆಯ್ಕೆಗೆ ವಿಶ್ ಮಾಡಿದ್ದಾರೆ.

ಮಗಳಿಗೆ ಟ್ವೀಟ್ ಮಾಡಿರುವ ಕಮಲ್ 'ಹಾಯ್.. ಅಕ್ಷು.. ನೀನು ನಿನ್ನ ಧರ್ಮ ಬದಲಿಸಿದೆಯಾ? ನನ್ನ-ನಿನ್ನ ಪ್ರೀತಿಗೆ ಯಾವುದೇ ಧರ್ಮದ ನಿಬಂಧನೆಗಳು ಇಲ್ಲ, ನಿನ್ನ ಜೀವನವನ್ನು ಎಂಜಾಯ್ ಮಾಡು. ನಿನ್ನ ಪ್ರೀತಿಯೂ ಸಹ ಹಾಗೆ ಇರಲಿ' ಎಂದು ಹಾರೈಸಿದ್ದಾರೆ.

ಕಮಲ್‌ರ ಇಂತಹ ವಿಶಾಲ ದೃಷ್ಟಿಕೋನ ಮಾದರಿಯಾಗುವಂತದ್ದು. ಹಿಂದಿ ಹಾಗೂ ತಮಿಳು ಸಿನಿಮಾಗಳಲ್ಲಿ ನಟಿಸಿ ಆದಾಗಲೇ ಹೆಸರು ಮಾಡಿರುವ ಅಕ್ಷರಾ, ಕನ್ನಡದಲ್ಲಿ ತನ್ನ ಮೊದಲ ಸಿನಿಮಾಕ್ಕೂ ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್‌ರ ಎರಡನೇ ಮಗ ವಿಕ್ರಂ ನಾಯಕನಾಗಿ ಎಂಟ್ರಿ ಪಡೆಯುತ್ತಿರುವ ಚಿತ್ರದಲ್ಲಿ ಅಕ್ಷರಾ ನಾಯಕಿ. ನಾಗಶೇಖರ್ ನಿರ್ದೇಶನ ಮಾಡಲಿರುವ ಚಿತ್ರ ಸದ್ಯದಲ್ಲೇ ಸೆಟ್ಟೇರಲಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com